# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ


Sampreethi - Samruddhi | Volume : 6 | Issue : 07 | Nov. 2023 | Pages : 32 | ₹ 20/-
ಸಂಪ್ರೀತಿ ಸಮೃದ್ಧಿ | ಸಂಪುಟ : 6 | ಸಂಚಿಕೆ : 07 | ನವೆಂಬರ್ 2023 | ಪುಟಗಳು : 32 | ₹ 20 ರೂ.


## ಕನ್ನಡ ರಾಜ್ಯೋತ್ಸವದ

### ಶುಭಾಶಯಗಳು



ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ, ನಮ್ಮ ಸಂಸ್ಕೃತಿ, ಸಂಪ್ರದಾಯ, ಭಾಷೆಯನ್ನು ಮತ್ತು ನಮ್ಮ ದೇಶದ ಅದ್ಭುತ ಏಕತೆ ಮತ್ತು ವೈವಿಧ್ಯತೆಯನ್ನು ಗೌರವಿಸೋಣ.



|| Jai Sri Gurudev ||

# SJ BGS POLYTECHNIC



(A Venture of Sri Adichunchanagiri Shikshana Trust ®)

(Approved by All India Council for Technical Education, New Delhi & Recognised by Government of Karnataka)

B G NAGAR, (BGSIT CAMPUS), NAGAMANGALA TALUK, MANDYA DISTRICT.

**COURSES OFFERED:**

- CIVIL ENGINEERING
- MECHANICAL ENGINEERING (General)
- COMPUTER SCIENCE & ENGINEERING
- ELECTRICAL & ELECTRONICS ENGINEERING
- ELECTRONICS & COMMUNICATION ENGINEERING

Eligibility:-
Pass in SSLC or Equivalent Examination with 35% aggregate.




**OUR VISION:**

To Impart Quality Education
Transformation of Child through Excellent Education
Child Centered Education

*Hunt Your Dreams*

**Institution Code : 541**













**Salient Features**

- Highly Qualified and Experienced Faculty
- Spacious well equipped Class Rooms, Labs, Workshops and Seminar Halls
- Internet Facility
- Hostel Facility for Boys & Girls
- Sports Facility
- Transportation
- Canteen Facility
- Library



**For Admissions, Contact :**

**PRINCIPAL**
**SJ BGS POLYTECHNIC,**

BGSIT CAMPUS, BG Nagar (Bellur Cross)
Nagamangala Taluk, Mandya District
Karmataka - 571 448

**E-mail :** ppl.sjbgsp@gmail.com
**Web :** www.sjbgsp.com
**Cell No. :** 9448207483

# ಸಂಪ್ರೀತಿ – ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ


## ಸಂಪಾದಕೀಯ

ಕನ್ನಡದ ಕಂಪನ್ನು ಪಸರಿಸುವ ಕನ್ನಡ ರಾಜ್ಯೋತ್ಸವ ನವೆಂಬರ್ 1 ರಂದು ನಡೆಯಲಿದೆ. ಶಾಲೆ–ಕಾಲೇಜುಗಳಲ್ಲಿ, ಸಂಘ–ಸಂಸ್ಥೆಗಳಲ್ಲಿ, ಸರಕಾರಿ ಕಚೇರಿಗಲ್ಲಿ ಸೇರಿದಂತೆ ನಾಡಿನ ಮೂಲೆಮೂಲೆಗಳಲ್ಲಿಯೂ ಕನ್ನಡ ಹಬ್ಬದ ಸಂಭ್ರಮವಿರಲಿದೆ. ಕನ್ನಡದ ಕಂಪನ್ನು ಪಸರಿಸುವ ಈ ದಿನದ ಕುರಿತು ಕನ್ನಡಿಗರಾದ ನಾವು ಈ ದಿನದ ಇತಿಹಾಸ ತಿಳಿದುಕೊಳ್ಳುವುದು ಅತ್ಯಂತ ಅಗತ್ಯವಾಗಿದೆ.

### ಕನ್ನಡ ರಾಜ್ಯೋತ್ಸವ ಆರಂಭ

ಮೈಸೂರು ರಾಜ್ಯವು (ಈಗಿನ ಕರ್ನಾಟಕ) 1956 ರ ನವೆಂಬರ್ 1 ರಂದು ನಿರ್ಮಾಣವಾಯಿತು. ಮೈಸೂರು ಸಂಸ್ಥಾನ, ಮುಂಬಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ ಹಾಗೂ ಮದ್ರಾಸ್ ಕರ್ನಾಟಕ ಎಂದು ನಾಲ್ಕು ಭಾಗಗಳಾಗಿದ್ದ ಕನ್ನಡ ನಾಡು ಈ ದಿನ ರಾಜಕೀಯವಾಗಿ ಒಂದಾಯಿತು. ದಕ್ಷಿಣ ಭಾರತದ ಕನ್ನಡ ಭಾಷೆ ಮಾತನಾಡುವ ಎಲ್ಲ ಪ್ರದೇಶಗಳನ್ನು ವಿಲೀನಗೊಳಿಸಿ ಒಂದು ರಾಜ್ಯವಾಗಿ ಘೋಷಣೆ ಮಾಡಿದ ಈ ದಿನವನ್ನು ಕನ್ನಡ ರಾಜ್ಯೋತ್ಸವವಾಗಿ ಆಚರಿಸಲಾಗುತ್ತದೆ.

### ಇತಿಹಾಸ

ಕನ್ನಡದ ಕುಲಪುರೋಹಿತರಾದ ಆಲೂರು ವೆಂಕಟರಾವ್, ಕರ್ನಾಟಕ ಏಕೀಕರಣ ಚಳುವಳಿಯನ್ನು 1905 ರಲ್ಲಿ ಪ್ರಾರಂಭಿಸಿದರು. 1950ರಲ್ಲಿ, ಭಾರತವು ಗಣರಾಜ್ಯವಾದ ನಂತರ ಭಾರತದ ವಿವಿಧ ಪ್ರಾಂತ್ಯಗಳು, ಭಾಷೆಗಳ ಆಧಾರದ ಮೇಲೆ ರಾಜ್ಯಗಳಾಗಿ ರೂಪು ಗೊಂಡವು. ಈ ಹಿಂದೆ ರಾಜರ ಆಳ್ವಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಹಲವಾರು ಸಂಸ್ಥಾನಗಳನ್ನು ಒಳಗೊಂಡಂತೆ ರಾಜ್ಯಗಳು ರೂಪುಗೊಂಡಿದ್ದವು. ಕನ್ನಡ ಮಾತನಾಡುವ ಪ್ರಾಂತ್ಯಗಳು ಸೇರಿ, ಮೈಸೂರು ರಾಜ್ಯವು ಉದಯವಾಯಿತು.

1956 ರ ನವೆಂಬರ್ 1 ರಂದು, ಮದ್ರಾಸ್, ಮುಂಬಯಿ, ಹೈದರಬಾದ್ ಪ್ರಾಂತ್ಯದ ಕನ್ನಡ ಮಾತನಾಡುವ ಪ್ರದೇಶಗಳು ವಿಲೀನಗೊಂಡು ಮೈಸೂರು ರಾಜ್ಯ ಉದಯವಾಯಿತು ಹಾಗೂ ಉತ್ತರ ಕರ್ನಾಟಕ, ಮಲೆನಾಡು ಮತ್ತು ಹಳೆಯ ಮೈಸೂರು ಎಂಬುದಾಗಿ ಹೊಸದಾಗಿ ರೂಪುಗೊಂಡ ಮೈಸೂರು ರಾಜ್ಯವನ್ನು ಮೂರು ಪ್ರದೇಶಗಳಲ್ಲಿ ಗುರುತಿಸಲಾಯಿತು.

ಹೊಸದಾಗಿ ಏಕೀಕೃತಗೊಂಡ ರಾಜ್ಯದ ಆರಂಭದಲ್ಲಿ ಹೊಸ ಘಟಕದ ಕೋರ್ ರೂಪುಗೊಂಡು ಮುಂಚಿನ ರಾಜ್ಯದ ಹೆಸರು ಇರಲೆಂದು ಮೈಸೂರು ಹೆಸರನ್ನು ಉಳಿಸಿಕೊಂಡರು. ಆದರೆ ಉತ್ತರ ಕರ್ನಾಟಕದ ಜನರ ತರ್ಕ ಮಾನ್ಯತೆಗಾಗಿ, ರಾಜ್ಯದ ಹೆಸರು ನವೆಂಬರ್ 1, 1973 ರಂದು ಕರ್ನಾಟಕ ಎಂದು ಬದಲಾಯಿತು. ಈ ಸಂದರ್ಭದಲ್ಲಿ ದೇವರಾಜ ಅರಸ್ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಕರ್ನಾಟಕ ಏಕೀಕರಣದ ಮನ್ನಣೆ ಇತರ ವ್ಯಕ್ತಿಗಳಿಗೂ ಸೇರುತ್ತದೆ. ಅವರೆಂದರೆ ಅನಕೃ, ಕೆ. ಶಿವರಾಮ ಕಾರಂತ, ಕುವೆಂಪು, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಎ.ಎನ್ . ಕೃಷ್ಣರಾವ್ ಮತ್ತು ಬಿ.ಎಂ. ಶ್ರೀಕಂಠಯ್ಯ.

### ಕನ್ನಡ ರಾಜ್ಯೋತ್ಸವದ ಆಚರಣೆ ಹೇಗೆ?

ಕನ್ನಡಿಗರ ಸ್ಫೂರ್ತಿಯ ಸಂಕೇತವಾಗಿರುವ ‘ಹಳದಿ–ಕೆಂಪು’ ಬಣ್ಣದ ಬಾವುಟವನ್ನು ರಾಜ್ಯದ ಎಲ್ಲೆಡೆ ಹಾರಿಸಲಾಗುತ್ತದೆ. ಕನ್ನಡ ನಾಡಗೀತೆ (ಜಯಭಾರತ ಜನನಿಯ ತನುಜಾತೆ) ಯನ್ನು ಹಾಡಲಾಗುತ್ತದೆ. ಸರಕಾರಿ ಕಚೇರಿ ಮತ್ತು ಪ್ರಮುಖ ಪ್ರದೇಶಗಳಲ್ಲಿ ವಾಹನಗಳ ಮೇಲೆ ಭುವನೇಶ್ವರಿ ಚಿತ್ರವನ್ನಿಟ್ಟು ಮೆರವಣಿಗೆ ನಡೆಸಲಾಗುತ್ತದೆ. ರಾಜ್ಯೋತ್ಸವದ ಪ್ರಯುಕ್ತ ಕರ್ನಾಟಕ ಸರಕಾರದ ವತಿಯಿಂದ ರಾಜ್ಯೋತ್ಸವ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ. ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ॐ


**ನವೆಂಬರ್ : 2023**

**ಸಂಪುಟ 6, ಸಂಚಿಕೆ 7**

ಸಂಪಾದಕರು

**ಡಾ॥ ಸಿ. ನಂಜುಂಡಯ್ಯ**

**ಚಂದಾ ವಿವರ :**

| | |
|---|---|
| 10 ವರ್ಷಕ್ಕೆ | ರೂ.2000/– |
| 05 ವರ್ಷಕ್ಕೆ | ರೂ.1000/– |
| 02 ವರ್ಷಕ್ಕೆ | ರೂ.500/– |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.



ಸಂಪಾದಕರು
**ಸಂಪ್ರೀತಿ – ಸಮೃದ್ಧಿ**
ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ– 562 131.

**#66, ಸಂಪ್ರೀತಿ – ಸದನ**
**ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ,**
**ಮಾಗಡಿ – 562 120 ರಾಮನಗರ ಜಿಲ್ಲೆ.**



ಮುದ್ರಕರು
- **ಕಂಪ್ಯೂಟರ್ ವರ್ಲ್ಡ್**
ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
ಮಲ್ಲಿಗೆ ತೋಟ, ಮಾಗಡಿ ರಸ್ತೆ,
ಬೆಂಗಳೂರು – 560 023.

- ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಬಹುದು.



sampreethisamruddhi@gmail.com
**8971608213**

# ಕನಕದಾಸ ಜಯಂತಿ



1509 ರ ಡಿಸೆಂಬರ್ 3 ರಂದು ತಿಮ್ಮಪ್ಪ ನಾಯಕರಾಗಿ ಜನಿಸಿದ ಕನಕದಾಸರು, ಪ್ರಸಿದ್ಧ ತತ್ವಜ್ಞಾನಿ, ಕವಿ ಮತ್ತು ಸಂಗೀತಗಾರರಾಗಿದ್ದಾರೆ. ಪ್ರತಿ ವರ್ಷ ಇವರ ಜನ್ಮದಿನವನ್ನು ಕನಕದಾಸರ ಜಯಂತಿ ಎಂದು ಕರ್ನಾಟಕ ರಾಜ್ಯಾದ್ಯಂತ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಶ್ರೀ ಕನಕದಾಸರು [ಮೂಲ ಹೆಸರು –ತಿಮ್ಮಪ್ಪನಾಯಕ] (1508–1606) ಕರ್ನಾಟಕದಲ್ಲಿ 15–16 ನೆಯ ಶತಮಾನಗಳಲ್ಲಿ ಜನಪ್ರಿಯವಾದ ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ದಾಸ ಪರಂಪರೆಯಲ್ಲಿ ಬರುವ 250ಕ್ಕೂ ಹೆಚ್ಚು ದಾಸರಲ್ಲಿ ಕನಕದಾಸರೊಬ್ಬರೇ ಕೆಳ ಪಂಗಡದ ದಾಸರು. ಹಾಗೆಯೇ ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನಕಾರರು, ಮತ್ತು ಪುರಂದರದಾಸರೊಂದಿಗೆ ಕರ್ನಾಟಕ ಸಂಗೀತದ ಮೂಲಭೂತ ಸಿದ್ಧಾಂತಗಳಿಗೆ ಕಾಣಿಕೆಯನ್ನಿತ್ತವರು. ಕನಕದಾಸರು ಮತ್ತು ಪುರಂದರದಾಸರನ್ನು ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಬಣ್ಣಿಸಲಾಗಿದೆ. ಕನಕದಾಸರು ದಂಡನಾಯಕರಾಗಿದ್ದು ಯುದ್ಧವೊಂದರಲ್ಲಿ ಸೋತ ಅವರಿಗೆ ಉಪರತಿ/ವೈರಾಗ್ಯ ಉಂಟಾಗಿ, ಹರಿಭಕ್ತರಾದರಂತೆ.

ಕನಕದಾಸರು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಬಾಡ ಗ್ರಾಮದಲ್ಲಿ 1509ರಲ್ಲಿ ಕುರುಬ ಜನಾಂಗಕ್ಕೆ ಸೇರಿದ ಬಚ್ಚಮ್ಮ ಮತ್ತು ಬೀರಪ್ಪನಾಯಕ ಎಂಬ ದಂಪತಿಗಳ ಮಗನಾಗಿ ಜನಿಸಿದರು. ಕನಕದಾಸರು ಬರಿ ಕುರುಬ ಜಾತಿಗೆ ಸೀಮಿತವಾದ ಭಕ್ತರಲ್ಲ ಎಲ್ಲಾ ಜಾತಿಗಳಿಗೆ ಬೇಕಾದವರು. 15–16 ನೆಯ ಶತಮಾನದಲ್ಲೇ ಜಾತಿ ವ್ಯವಸ್ಥೆಯ ಬಗ್ಗೆ ಸಮರ ಸಾರಿದ ಭಕ್ತ ಎಂದರೆ ಕನಕದಾಸರು ಎಂದರೆ ತಪ್ಪಾಗಲಾರದು. ಕನಕದಾಸರು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ.

ಸುಮಾರು ಐದು ನೂರು ವರ್ಷಗಳ ಹಿಂದಿನ ಮಾತು. ವಿಜಯನಗರ ಸಾಮ್ರಾಜ್ಯದಲ್ಲಿದ್ದ ಬಂಕಾಪುರ ಪ್ರಾಂತದ ಮುಖ್ಯಪಟ್ಟಣದ ಹೆಸರು ಬಾಡ ಎಂದು. ವಿಜಯನಗರದಿಂದ ಗೋವಾಕ್ಕೆ ಹೋಗುವ ಹೆದ್ದಾರಿ. ಈ ಬಾಡದಿಂದಲೇ ಹಾಯ್ದು ಹೋಗುತ್ತಿತ್ತು. ಬಾಡ ಒಳ್ಳೆ ಆಯಕಟ್ಟಿನ ಸ್ಥಳ. ಈ ಬಂಕಾಪುರ ಪ್ರಾಂತ್ಯಕ್ಕೆ ಡಣ್ಣಾಯಕ, ಬೀರಪ್ಪನಾಯಕ. (ಡಣ್ಣಾಯಕ ಎಂದರೆ ಆಯಕಟ್ಟಿನ ಸ್ಥಳದಲ್ಲಿ ಕಾದಿಟ್ಟ ಸೈನ್ಯದ ದಳಕ್ಕೆ ಸೇನಾಪತಿ ಎಂದು ನೇಮಿಸಲ್ಪಟ್ಟವನು) ಬೀರಪ್ಪನ ಹೆಂಡತಿ ಬಚ್ಚಮ್ಮ.

ಬೀರಪ್ಪನಾಯಕನಿಗೆ ತಿರುಪತಿ ತಿಮ್ಮಪ್ಪನಲ್ಲಿ ಬಹು ನಂಬಿಕೆ. ದಕ್ಷಿಣದಲ್ಲಿ ಸುಮಾರು ಒಂಬೈನೂರು ವರ್ಷಗಳ ಹಿಂದೆ ಶ್ರೀ ರಾಮಾನುಜಾಚಾರ್ಯರೆಂಬ ದೊಡ್ಡ ಗುರುಗಳು ಪ್ರಸಿದ್ಧರಾಗಿದ್ದರು. ಅವರು ಸ್ಥಾಪಿಸಿದ ಪಂಥಕ್ಕೆ ಶ್ರೀ ವೈಷ್ಣವ ಮತವೆಂದು ಹೆಸರು. ಡಣ್ಣಾಯಕ ಬೀರಪ್ಪನಾಯಕ ಮತ್ತು ಆತನ ಮಡದಿ ಬಚ್ಚಮ್ಮ ಇವರು ಶ್ರೀ ವೈಷ್ಣವ ಮತಕ್ಕೆ ಶರಣು ಹೋಗಿದ್ದರು. ಅಂದಿನಿಂದ ಇವರು ಸಹ ತಿರುಪತಿ ವಂಕಟೇಶ್ವರ ಸ್ವಾಮಿಯನ್ನೇ ತಮ್ಮ ಆರಾಧ್ಯ ದೈವವನ್ನಾಗಿ ಮಾಡಿಕೊಂಡರು.

ಬೀರಪ್ಪ ನಾಯಕ ಮತ್ತು ಬಚ್ಚಮ್ಮರಿಗೆ ಅನೇಕ ದಿನಗಳಿಂದ ಒಂದು ಹಂಬಲವಿತ್ತು. ಅದೇನೆಂದರೆ, ತಮಗೆ ಒಬ್ಬ ಕುಲದೀಪಕನಾದ ಮಗ ಜನಿಸಬೇಕು ಎಂದು. "ವಂಶೋದ್ಧಾರಕನಾದ ಒಬ್ಬ ಮಗನನ್ನು ಕರುಣಿಸು" ಎಂದು ಈ ದಂಪತಿಗಳು ತಿರುಪತಿ ತಿಮ್ಮಪ್ಪನಿಗೆ ಹರಕೆ ಹೊತ್ತಿದ್ದರು. ಅವರ ಆಸೆ ಫಲಿಸಿತು. ಬೀರಪ್ಪ ನಾಯಕ ಮತ್ತು ಬಚ್ಚಮ್ಮರಿಗೆ ಒಬ್ಬ ಮಗ ಜನಿಸಿದ. ತಂದೆ ತಾಯಿಗಳಿಗೆ ಆನಂದವೋ ಆನಂದ. ತಿರುಪತಿ ತಿಮ್ಮಪ್ಪನ ಆಶೀರ್ವಾದ ಎಂದು ಅವರು ತಮ್ಮ ಮಗುವಿಗೆ "ತಿಮ್ಮಪ್ಪ" ಎಂದೇ ನಾಮಕರಣ ಮಾಡಿದರು. ತಿಮ್ಮಪ್ಪ ಜನಿಸಿದ ಕಾಲ ಇಂತದ್ದೇ ಎಂದು ತಿಳಿಯದು; ಹದಿನೈದನೇಯ ಶತಮಾನದ ಕೊನೆಯ ವರ್ಷಗಳಲ್ಲಿ ಹುಟ್ಟಿದರು ಎಂದು ಹೇಳಬಹುದು.

ತಿಮ್ಮಪ್ಪನಾಯಕ ಒಬ್ಬ ಸೇನಾಧಿಪತಿಯ ಮಗನಾಗಿ ಜನಿಸಿದನಷ್ಟೆ. ಬಾಲ್ಯದಲ್ಲಿಯೇ ಅಕ್ಷರಾಭ್ಯಾಸ, ಬಂಕಾಪುರದ ಶ್ರೀನಿವಾಸಾಚಾರ್ಯರ ಬಳಿ ವಿದ್ಯಾಭ್ಯಾಸವಾಗಿ, ವ್ಯಾಕರಣ, ತರ್ಕ, ಮೀಮಾಂಸೆ, ಸಾಹಿತ್ಯಗಳಲ್ಲಿ ಪಾರಂಗತನಾದನು. ಜೊತೆಗೆ ಕತ್ತಿವರಸೆ, ಕುದುರೆ ಸವಾರಿಯನ್ನೂ ಕಲಿತ. ಕೆಲವು ವರ್ಷಗಳಲ್ಲಿ ಬೀರಪ್ಪನಾಯಕ ಮತ್ತು ಬಚ್ಚಮ್ಮ ತೀರಿಕೊಂಡರು. ತಂದೆಯ ಬಳಿಕ ತಿಮ್ಮಪ್ಪ ನಾಯಕ ತನ್ನ ಕಿರಿವಯಸ್ಸಿನಲ್ಲಿಯೇ ಬಂಕಾಪುರ ಪ್ರಾಂತಕ್ಕೆ ಡಣ್ಣಾಯಕನಾದ. ಕನಕ ದಾಸರು ತಮ್ಮನ್ನು ತಾವೇ ಸಾವಿನ ದೇವತೆಯಾದ ಯಮನೆಂದು ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿದ್ದಾರೆ.

## ಸಾಧನೆ:–

ಕನಕದಾಸರು ಶ್ರೀ ವ್ಯಾಸರಾಯರ ಮೆಚ್ಚಿನ ಶಿಷ್ಯರು. ವ್ಯಾಸರಾಯದಿಂದ ಮಧ್ವ ತತ್ವಶಾಸ್ತ್ರವನ್ನು ಕಲಿತು ಒಪ್ಪಿಕೊಂಡ ಕನಕದಾಸರು ಉಡುಪಿ ಶ್ರೀ ಕೃಷ್ಣನ ಅನನ್ಯ ಭಕ್ತರು. ಕಾಗಿನೆಲೆಯ ಆದಿಕೇಶವನ ಭಕ್ತರಾದ ಕನಕದಾಸರು ಜಾತಿಪದ್ಧತಿಯ ತಾರತಮ್ಯಗಳನ್ನು ಅಲ್ಲಗಳೆದರು. ಇವರ ಕೀರ್ತನೆಗಳ ಅಂಕಿತ ಕಾಗಿನೆಲೆಯ ಆದಿಕೇಶವರಾಯ ಎಂಬುದು.

## ಕನಕ ದಾಸರ ಸಾಹಿತ್ಯ ರಚನೆ

ಕನಕದಾಸರು ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿರುವುದಲ್ಲದೆ, ಸಂಗೀತ ಪ್ರಪಂಚಕ್ಕೆ ತನ್ನದೇ ಆದಂತಹ ಕೊಡುಗೆಯನ್ನು ಮುಂಡಿಗೆಗಳ ರೂಪದಲ್ಲಿ ನೀಡಿದ್ದಾರೆ. ಸುಮಾರು 316 ಕೀರ್ತನೆಗಳು ಹಾಗೂ ಇನ್ನಿತರ ಸಾಹಿತ್ಯ ಮಾತ್ರ ಲಭ್ಯವಾಗಿರುವುದನ್ನು ಕಾಣಬಹುದಾಗಿದೆ. ಅವರ ಐದು ಮುಖ್ಯ ಕಾವ್ಯಕೃತಿಗಳು ಇಂತಿವೆ: ಮೋಹನತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತೆ, ಹರಿಭಕ್ತಿಸಾರ, ನೃಸಿಂಹಸ್ತವ; ಮೋಹನತರಂಗಿಣಿ.

## ಕೀರ್ತನೆಗಳು

ಕನಕದಾಸರು 316 ಕೀರ್ತನೆಗಳನ್ನು ರಚಿಸಿದ್ದಾರೆ. ಕನಕದಾಸರ ಭಕ್ತಿ ಪಾರಮ್ಯವನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು. ಶ್ರೀಹರಿಯನ್ನು ತಮ್ಮ ಧಣಿಯಾಗಿ, ಇನಿಯನಾಗಿ, ಅಣೋರಣೀಯನಾಗಿ, ಮಹತೋಮಹೀಮನಾಗಿ ಅವರು ಕಂಡಿದ್ದಾರೆ. 'ಬಾ ರಂಗ ಎನ್ನ ಮನಕೆ ಎಂದು ಹೃದಯ ಸದನಕ್ಕೆ 'ಎಂದು ಕರೆದು ನೆಲೆ ನಿಲ್ಲಿಸಿಕೊಂಡ ಅನುಭಾವ ಅವರದು. ಒಳಗಣ್ಣಿನಿಂದ ಅವನ ಕಂಡು– 'ಕಂಡೆ ನಾ ತಂಡ ತಂಡ ಹಿಂಡು ದೈವ ಪ್ರಚಂಡ ರಿಪು ಗಂಡ ಉದ್ಧಂಡ ನರಸಿಂಹನ' ಎಂದು ಸಂತೋಷಪಟ್ಟಿದ್ದಾರೆ. ಎಲ್ಲಿ ನೋಡಿದರಲ್ಲಿ ರಾಮ' ಎಂಬ ಅನುಭೂತಿಯಲ್ಲಿ ಹರಿಯನ್ನು ಕಂಡ ಬಳಿಕ 'ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು' ಎಂಬ ಧನ್ಯತಾಭಾವ. 'ದಾಸದಾಸರ ಮನೆಯ ದಾಸಿಯರ ಮಗ ಮಂಕುದಾಸ ಮರುಳುದಾಸ ನರಜನ್ಮಹುಳು ಪರಮಪಾಪಿ' ಎಂದು ಕರೆದುಕೊಂಡಿದ್ದ ಅವರು ಜೀವ ಮಾಗಿ ಹಣ್ಣಾದಂತೆ ಪರಮಾತ್ಮನ ಸಾಕ್ಷಾತ್ಕಾರವಾದಂತೆ 'ಆತನೊಲಿದ ಮೇಲೆ ಇನ್ಯಾತರ ಕುಲವಯ್ಯಾ' ಎಂದುಕೊಳ್ಳುತ್ತಾರೆ.

ಜೈನ, ವೀರಶೈವರ ಕಿತ್ತಾಟ, ಮುಸಲ್ಮಾನ ಪ್ರಾಬಲ್ಯ ಇವುಗಳಿಂದ ಸೊರಗಿ ಹೋಗಿದ್ದ ವೈದಿಕ ಧರ್ಮಕ್ಕೆ ಪುನಶ್ಚೇತನ ನೀಡಲು ವ್ಯಾಸರಾಯರಂಥವರು ಶ್ರಮಿಸುತ್ತಿದ್ದ ಕಾಲವದು. ವೈದಿಕ ಸಂಸ್ಕೃತಿಯ ಉತ್ಥಾನಕ್ಕೆಂದು ಹುಟ್ಟು ಹಾಕಲಾದ ವಿಜಯನಗರ ಸಾಮ್ರಾಜ್ಯ ಕೃಷ್ಣದೇವರಾಯನ ಅಳಿವಿನ ನಂತರ ಪತನದ ಹಾದಿ ಹಿಡಿದಿತ್ತು. ಇಂಥಲ್ಲಿ ಕನಕದಾಸರಂಥವರ ಕಾವ್ಯಕೃಷಿ ಹಾಗೂ ಸಾರ್ವಜನಿಕ ಜೀವನ ವ್ಯಾಸರಾಯರಿಗೆ ಬೆಂಬಲದ ಶ್ರೀರಕ್ಷೆಯಾಗಿದ್ದವು.

'ನಾವು ಕುರುಬರು ನಮ್ಮ ದೇವರು ಬೀರಯ್ಯ ಕಾವ ನಮ್ಮಜ್ಜ ನರಕುರಿ ಹಿಂಡುಗಳ' ಎಂದು ವಿನೀತ ಜಾತಿ ಭಾವನೆ ತೋರಿದ್ದ ಕನಕದಾಸರು ವ್ಯಾಸರಾಯರ ಸಂಪರ್ಕದ ನಂತರ 'ಕುಲಕುಲಕುಲವೆಂದು ಹೊಡೆದಾಡದಿರಿ' ಎಂದು ಜಂಕಿಸಿ ಕೇಳುವ ಹಾಗಾದರು.



ಇಂಥ ನಡವಳಿಕೆಗಳಿಂದ ವೈದಿಕ ಧರ್ಮದ ಗುತ್ತಿಗೆ ತಮ್ಮದು ಎಂದು ಭಾವಿಸಿದ್ದ ಬ್ರಾಹ್ಮಣರಿಗೆ ಕನಕದಾಸರು ಬಿಸಿ ತುಪ್ಪವಾದರು. ಹಿಂದೂ ಸಮಾಜದಲ್ಲಿ ಈ ಬ್ರಾಹ್ಮಣ ಬ್ರಾಹ್ಮಣೇತರ ಕಂದರ/ಕ ದೊಡ್ಡದಾಗುತ್ತಾ ಹೋದಂತೆ ವ್ಯಾಸಪೀಠದ ಜೊತೆಗೆ ದಾಸಕೂಟದ ರಚನೆಯೂ ಆಗಬೇಕಾದಂತಹ ಅನಿವಾರ್ಯತೆ ಮೂಡಿತು. ಉಚ್ಚಕುಲದ ಮಾಧ್ವ ಬ್ರಾಹ್ಮಣರು ಶಾಸ್ತ್ರಾಧ್ಯಯನ-ತರ್ಕ-ವ್ಯಾಕರಣಾದಿ ವಿಶಿಷ್ಟ ಜ್ಞಾನಸಂಪನ್ನರಾಗಿ ಶಬ್ದ ಶಬ್ದಗಳನ್ನು ತಿಕ್ಕಿ ತೀಡಿ ನಿಷ್ಪತ್ತಿ ಹಿಡಿದು ಸಿದ್ಧಾಂತ ಪ್ರಮೇಯಗಳನ್ನು ಮಂಡಿಸುವುದೇ ಮುಂತಾದ ಪ್ರಕ್ರಿಯೆಗಳನ್ನು ವ್ಯಾಸಪೀಠದಲ್ಲಿ ನಡೆಯಿಸುತ್ತಿದ್ದರು. ಪುರಂದರದಾಸ, ಕನಕದಾಸ, ಜಗನ್ನಾಥದಾಸ ಮೊದಲಾದವರ ಪ್ರಾತಿನಿಧಿಕ ಸಂಘಟನೆಯೇ ದಾಸಕೂಟ. ಇವರೂ ಮಾಧ್ವ ಮತ ಪ್ರಮೇಯಗಳನ್ನೇ ಪಸರಿಸುತ್ತಾ ಆಚರಿಸುತ್ತಿದ್ದರಾದರೂ ಅವುಗಳನ್ನು ಅರಿಯಲು ಸಂಸ್ಕೃತ ಜ್ಞಾನದ ಅನಿವಾರ್ಯತೆಯನ್ನು ನಿರಾಕರಿಸಿ, ಜಾತಿ ಮತಗಳ ಕಟ್ಟು ಪಾಡಿಲ್ಲದ ಇವರು ಶಾಸ್ತ್ರಾಧ್ಯಯನದ ಅನಿವಾರ್ಯತೆ ಇಲ್ಲದೆ ತಮ್ಮ ಅನುಭಾವದಿಂದ ಹೊರಹೊಮ್ಮುವ ಭಕ್ತಿಭಾವನೆಗಳನ್ನು ತಮ್ಮ ತಾಯ್ನುಡಿಯಲ್ಲಿ ಹಾಡಿ ಲೋಕಪಾವನವನ್ನೂ ಆತ್ಮೋದ್ಧಾರವನ್ನೂ ಮಾಡ ಬೇಕೆನ್ನುವವರು. ಇಂಥಾ ದಾಸಕೂಟವನ್ನು ಹುಟ್ಟುಹಾಕಿ ಪೋಷಿಸಿ ಬೆಳೆಸಿದವರು ವ್ಯಾಸರಾಯರು ಹಾಗೂ ವಾದಿರಾಜರು. ಇಷ್ಟಿದ್ದರೂ ದಾಸಕೂಟ ವ್ಯಾಸಪೀಠಗಳ ನಡುವೆ ಆಗಿಂದಾಗ್ಗೆ ಘರ್ಷಣೆಗಳು ನಡೆದೇ ಇದ್ದವು. ಈ ಕುರಿತು ಕನಕ ಪುರಂದರರ ಕೀರ್ತನೆಗಳೇ ನಮಗೆ ಸೂಚ್ಯವಾಗಿ ಹೇಳುತ್ತವೆ. ಕುಲಕುಲವೆನ್ನುತಿಹರು ಕುಲವಾವುದು ಸತ್ಯ ಸುಖವುಳ್ಳ ಜನರಿಗೆ. ತೀರ್ಥವನು ಪಿಡಿದವರು ತಿರುನಾಮಧಾರಿಗಳೇ ಜನ್ಮ ಸಾರ್ಥಕವಿರದವರು ಭಾಗವತರಹುದೇ ಆವ ಕುಲವಾದರೇನು ಆವನಾದರೇನು ಆತ್ಮಭಾವವರಿತ ಮೇಲೆ. ಅವರ ಕೀರ್ತನೆಗಳಲ್ಲಿ ಅವರ ಸಂದೇಶ ನೇರ ಮತ್ತು ಖಚಿತ. ಹಾಗೆಯೇ ಅಮೂರ್ತವಾದ ಪ್ರತಿಮಾ ನಿರೂಪಣೆಯಲ್ಲಿ ಪರಿಣತಿ, ಹಾಗೂ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತ ಸಾಹಿತ್ಯಗಳ ಪರಿಚಯವನ್ನು ಅವರ ಸಾಹಿತ್ಯದಲ್ಲಿ ಕಾಣಬಹುದು.


ॐ

**ಸಂಪ್ರೀತಿ ಸುಘೋಷ**



**ಮಾನಸಿಕ ಆರೋಗ್ಯ ಸದೃಢವಾಗಬೇಕಾದರೆ ಉತ್ತಮ ಆಲೋಚನೆ, ಧ್ಯಾನ, ಜಪ ಅನುಷ್ಠಾನ ಮಾತ್ರದಿಂದ ಸ್ವಸ್ಥಚಿತ್ತವನ್ನು ಬೆಳೆಸಿಕೊಳ್ಳಬೇಕು.**

**ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ**



# ದೀಪಾವಳಿ



ದೀಪಾವಳಿ ಅತ್ಯಂತ ಮಹತ್ವವಾದ ಮತ್ತು ಪವಿತ್ರ ಹಬ್ಬ. ಕತ್ತಲೆಯ ಮೇಲೆ ಬೆಳಕು, ಅಜ್ಞಾನದ ಮೇಲೆ ಜ್ಞಾನ, ಕೆಡುಕಿನ ಮೇಲೆ ಒಳ್ಳೆಯ ಮತ್ತು ಹತಾಶೆಯ ಮೇಲೆ ಭರವಸೆಯ ವಿಜಯವನ್ನು ಈ ಹಬ್ಬ ಸಂಕೇತಿಸುತ್ತದೆ. ಭಗವಾನ್ ಶ್ರೀಕೃಷ್ಣನಿಂದ ನರಕಾಸುರನಂತಹ ಅನೇಕ ರಾಕ್ಷಸರ ವಧೆ, ರಾವಣನನ್ನು ಕೊಂದ ನಂತರ ಅಯೋಧ್ಯೆಗೆ ಭಗವಾನ್ ರಾಮನ ಆಗಮನ ಮತ್ತು ಬಲಿಯನ್ನು ವಾಮನ ಸೋಲಿಸಿದ ದಿನ ಹೀಗೆ ಈ ದೀಪಾವಳಿಯಬ್ಬವನ್ನು ಹಲವಾರು ಕಾರಣಕ್ಕೆ ಆಚರಿಸಲಾಗುತ್ತದೆ.

ಜನರು ತಮ್ಮ ಮನೆ ಮತ್ತು ಕಚೇರಿಗಳಲ್ಲಿ ಲಕ್ಷ್ಮಿ ಪೂಜೆಯನ್ನು ಮಾಡುವ ಮೂಲಕ ದೀಪಾವಳಿಯಂದು ಲಕ್ಷ್ಮಿ ದೇವಿಯನ್ನು ಪ್ರಾರ್ಥಿಸುತ್ತಾರೆ. ಅವರಿಗೆ ಸಮೃದ್ಧಿ, ಸಂತೋಷ, ಶಾಂತಿ ಮತ್ತು ಸಂಪತ್ತನ್ನು ಆಶೀರ್ವದಿಸುವಂತೆ ದೇವಿಯನ್ನು ಕೇಳಿಕೊಳ್ಳುತ್ತಾರೆ. ದೇಶದ ಬಹುತೇಕ ಸ್ಥಳಗಳಲ್ಲಿ ದೀಪಾವಳಿಯನ್ನು ಐದು ದಿನಗಳ ಕಾಲ ಆಚರಿಸಲಾಗುತ್ತದೆ. ಇನ್ನೂ ಕೆಲವು ಕಡೆ ಮೂರು ದಿನಗಳ ಕಾಲ ಆಚರಿಸಲಾಗುತ್ತದೆ.

ದೀಪಾವಳಿ ಹಬ್ಬವೂ ಸಮೃದ್ಧಿ ಹಾಗೂ ಸಂತೋಷದ ಸಂಕೇತವಾಗಿ ನಮ್ಮ ಬದುಕಿನಲ್ಲಿ ಸಂತೋಷ ಮೂಡಿಸುವ ಹಬ್ಬವಾಗಿದೆ. ಪ್ರಾಚೀನ ಸಂಸ್ಕೃತ ಗ್ರಂಥಗಳಾದ ಸ್ಕಂದ ಪುರಾಣ ಮತ್ತು ಪದ್ಮ ಪುರಾಣಗಳಲ್ಲಿ ಹಬ್ಬದ ಉಲ್ಲೇಖವಿದೆ. ದೀಪಾವಳಿಯನ್ನು ಕೇವಲ ಹಿಂದೂಗಳು ಮಾತ್ರವಲ್ಲ, ಜೈನರು, ಬೌದ್ಧರು ಮತ್ತು ಸಿಖ್ಖರೂ ಸಹ ಆಚರಿಸುವಂತಹ ವಿಶೇಷ ಹಬ್ಬ ಈ ದೀಪಾವಳಿ.

### ದೀಪಾವಳಿ ಆಚರಣೆ ವಿಧ

ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ಹಾಗೂ ದಕ್ಷಿಣ ಭಾರತದಲ್ಲಿ ವಿಭಿನ್ನವಾಗಿ ಆಚರಿಸಲಾಗುತ್ತದೆ. ಉತ್ತರ ಭಾರತದಲ್ಲಿ ಈ ಹಬ್ಬವನ್ನು 5 ದಿನಗಳ ಕಾಲ ಆಚರಿಸಲಾಗುತ್ತದೆ. ಗೋವತ್ಸ ದ್ವಾದಶಿ, ಧನ್ತೇರಸ್, ಕಾಳಿ ಚೌದಾಸ್, ಛೋಟಿ ದೀಪಾವಳಿ ಮತ್ತು ಬಡಿ ದೀಪಾವಳಿ ಅಂದರೆ ದೊಡ್ಡ ದೀಪಾವಳಿ ಮತ್ತು ಸಣ್ಣ ದೀಪಾವಳಿ, ಗೋವರ್ಧನ ಪೂಜೆ ಹೀಗೆ ಒಂದೊಂದು ದಿನ ಒಂದೊಂದು ಆಚರಣೆ ಮಾಡಲಾಗುತ್ತದೆ.

ನಮ್ಮಲ್ಲಿ ಅಂದರೆ ದಕ್ಷಿಣ ಭಾರತದಲ್ಲಿ ನರಕಾಸುರನನ್ನ ಶ್ರೀಕೃಷ್ಣ ವಧಿಸಿದ ವಿಜಯದ ಗೌರವಾರ್ಥವಾಗಿ ದೀಪಾವಳಿಯನ್ನು ಒಂದು ದಿನವನ್ನು ನರಕ ಚತುರ್ದಶಿ ಎಂದು ಆಚರಿಸಲಾಗುತ್ತದೆ. ಇಲ್ಲಿ ಮೊದಲ ದಿನ ನರಕ ಚತುರ್ದಶಿ ಆಚರಿಸಲಾಗುತ್ತದೆ, ನಂತರ ಎರಡನೇ ದಿನ ಲಕ್ಷ್ಮೀ ಪೂಜೆಯನ್ನು ಮಾಡಲಾಗುತ್ತದೆ. ಕೊನೆಯ ದಿನ ಬಲಿಪಾಡ್ಯಮಿ ಆಚರಿಸಲಾಗುತ್ತದೆ. ಈ ದಿನ ಗೋವುಗಳಿಗೆ ಪೂಜೆ ಮಾಡಲಾಗುತ್ತದೆ. ಇನ್ನು ಈ ಸಮಯದಲ್ಲಿ ಹಬ್ಬದ ಹಿಂದಿನ ದಿನ ಅಥವಾ ಹಬ್ಬದ ದಿನ ಮನೆಯಲ್ಲಿರುವ ಬಾವಿಗೆ ಮತ್ತು ನೀರಿನ ಹಂಡೆಗಳಿಗೆ ಸಹ ಪೂಜೆ ಮಾಡಲಾಗುತ್ತದೆ.

ದೀಪಾವಳಿ ಎಂದರೆ ದೀಪಗಳ ಹಬ್ಬ ಹಾಗಾಗಿ ಈ ದಿನದಿಂದ ಕಾರ್ತಿಕ ಮಾಸ ಮುಗಿಯುವವರೆಗೂ ಪ್ರತಿದಿನ ಮನೆಯ ಮುಂದೆ ಸಂಜೆ ದೀಪಗಳನ್ನು ಹಚ್ಚಲಾಗುತ್ತದೆ. ಇದು ಮನೆಗೆ ಬಹಳ ಶುಭ ತರುತ್ತದೆ. ॐ

**ಸಮೃದ್ಧಿ ಸುಜ್ಞಾನ**

ಕನಸುಗಳು ನನಸಾಗಿಲ್ಲ ಎಂದು ಯಾವತ್ತೂ ಪ್ರಯತ್ನ ಪಡುವುದನ್ನ
ನಿಲ್ಲಿಸಬಾರದು. ಏಕೆಂದರೆ, ಕೆಲವೊಮ್ಮೆ ಬಾಡಿದ ಗಿಡಗಳಿಗೆ
ನೀರುಣಿಸುವುದರಿಂದ ಮತ್ತೆ ಚಿಗುರೊಡೆದು ಬದುಕುತ್ತವೆ.



# ಕನ್ನಡ ರಾಜ್ಯೋತ್ಸವ

1956, ನವೆಂಬರ್ 1 ರಂದು ಕನ್ನಡ ಮಾತನಾಡುವ ಎಲ್ಲ ಪ್ರದೇಶಗಳನ್ನು ಸೇರಿಸಿ ಕರ್ನಾಟಕ ರಾಜ್ಯವೆಂದು ಘೋಷಿಸಲಾಯಿತು. ಈ ದಿನವನ್ನು ಕನ್ನಡ ರಾಜ್ಯೋತ್ಸವ ದಿನವೆಂದು ಆಚರಿಸಲಾಗುತ್ತದೆ. ಇದನ್ನು ಕರ್ನಾಟಕ ಸಂಸ್ಥಾಪನಾ ದಿನ ಎಂತಲೂ ಕರೆಯುತ್ತಾರೆ. ಹೀಗಾಗಿ, ಕನ್ನಡ ಮಾತನಾಡುವ ಪ್ರದೇಶಗಳಲ್ಲಿ ಈ ದಿನವನ್ನು ಅತ್ಯಂತ ಸಂತೋಷ ಮತ್ತು ಉತ್ಸಾಹದಿಂದ ಆಚರಿಸಲಾಗುತ್ತದೆ. ಕರ್ನಾಟಕ ರಾಜ್ಯೋತ್ಸವವನ್ನು ಕರ್ನಾಟಕ ರಾಜ್ಯ ದಿನ ಎಂದೂ ಕರೆಯುತ್ತಾರೆ, ಇದು ರಾಜ್ಯ ಸಾರ್ವಜನಿಕ ರಜಾದಿನವಾಗಿದೆ ಮತ್ತು ಪ್ರತಿ ವರ್ಷ ನವೆಂಬರ್ 1 ರಂದು ಆಚರಿಸಲಾಗುತ್ತದೆ. ಇದು 1956 ರಲ್ಲಿ ನೈಋತ್ಯ ಭಾರತದ ಎಲ್ಲಾ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳನ್ನು ಕರ್ನಾಟಕ ರಾಜ್ಯವನ್ನು ರೂಪಿಸಲು ವಿಲೀನಗೊಳಿಸಿದ ದಿನ.

**ಇತಿಹಾಸ**

ಕರ್ನಾಟಕ ಏಕೀಕರಣ ಚಳವಳಿಯೊಂದಿಗೆ 1905 ರಲ್ಲಿಯೇ ರಾಜ್ಯವನ್ನು ಏಕೀಕರಿಸುವ ಕನಸು ಕಂಡ ಮೊದಲ ವ್ಯಕ್ತಿ ಆಲೂರು ವೆಂಕಟರಾವ್. 1950 ರಲ್ಲಿ ಭಾರತವು ಗಣರಾಜ್ಯವಾಯಿತು ಮತ್ತು ನಿರ್ದಿಷ್ಟ ಪ್ರದೇಶದಲ್ಲಿ ಮಾತನಾಡುವ ಭಾಷೆಯ ಆಧಾರದ ಮೇಲೆ ದೇಶದಲ್ಲಿ ವಿವಿಧ ಪ್ರಾಂತ್ಯಗಳನ್ನು ರಚಿಸಲಾಯಿತು. ಇದು ದಕ್ಷಿಣ ಭಾರತದ ವಿವಿಧ ಸ್ಥಳಗಳನ್ನು ಒಳಗೊಂಡಂತೆ ಮೈಸೂರು ರಾಜ್ಯಕ್ಕೆ ಜನ್ಮ ನೀಡಿತು, ಇದನ್ನು ಮೊದಲು ರಾಜರು ಆಳಿದರು. 1 ನವೆಂಬರ್ 1956 ರಂದು, ಮೈಸೂರು ರಾಜ್ಯವು, ಹಿಂದಿನ ಮೈಸೂರು ಸಂಸ್ಥಾನದ ಬಹುಪಾಲು ಪ್ರದೇಶವನ್ನು ಒಳಗೊಂಡಿದೆ, ಬಾಂಬೆ ಮತ್ತು ಮದ್ರಾಸ್ ಪ್ರೆಸಿಡೆನ್ಸಿಗಳ ಕನ್ನಡ ಮಾತನಾಡುವ ಪ್ರದೇಶಗಳೊಂದಿಗೆ ಹೈದರಾಬಾದ್ ಸಂಸ್ಥಾನದೊಂದಿಗೆ ವಿಲೀನಗೊಂಡಿತು. ಏಕೀಕೃತ ಕನ್ನಡ ಮಾತನಾಡುವ ಉಪ-ರಾಷ್ಟ್ರೀಯ ಘಟಕವನ್ನು ರಚಿಸಲು ಉತ್ತರ ಕರ್ನಾಟಕ, ಮಲೆನಾಡು (ಕೆನರಾ) ಮತ್ತು ಹಳೆಯ ಮೈಸೂರು ಹೀಗೆ ಹೊಸದಾಗಿ ರೂಪುಗೊಂಡ ಮೈಸೂರು ರಾಜ್ಯದ ಮೂರು ಪ್ರದೇಶಗಳಾಗಿವೆ.

ಹೊಸದಾಗಿ ಏಕೀಕೃತ ರಾಜ್ಯವು ಆರಂಭದಲ್ಲಿ "ಮೈಸೂರು" ಎಂಬ ಹೆಸರನ್ನು ಉಳಿಸಿಕೊಂಡಿತು, ಇದು ಹೊಸ ಘಟಕದ ತಿರುಳನ್ನು ರೂಪಿಸಿದ ಹಿಂದಿನ ರಾಜಪ್ರಭುತ್ವದ ರಾಜ್ಯವಾಗಿತ್ತು. ಆದರೆ ಉತ್ತರ ಕರ್ನಾಟಕದ ಜನರು ಮೈಸೂರು ಎಂಬ ಹೆಸರನ್ನು ಉಳಿಸಿಕೊಳ್ಳಲು ಒಲವು ತೋರಲಿಲ್ಲ, ಏಕೆಂದರೆ ಇದು ಹಿಂದಿನ ಪ್ರಭುತ್ವ ಮತ್ತು ಹೊಸ ರಾಜ್ಯದ ದಕ್ಷಿಣ ಪ್ರದೇಶಗಳೊಂದಿಗೆ ನಿಕಟ ಸಂಬಂಧ ಹೊಂದಿತ್ತು. ಈ ತರ್ಕಕ್ಕೆ ಬದ್ಧವಾಗಿ, ರಾಜ್ಯದ ಹೆಸರನ್ನು 1 ನವೆಂಬರ್ 1973 ರಂದು "ಕರ್ನಾಟಕ" ಎಂದು ಬದಲಾಯಿಸಲಾಯಿತು. ಈ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಾಗ ದೇವರಾಜ್ ಅರಸು ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಕರ್ನಾಟಕದ ಏಕೀಕರಣಕ್ಕೆ ಮನ್ನಣೆ ನೀಡಿದ ಇತರ ವ್ಯಕ್ತಿಗಳಲ್ಲಿ ಕೆ. ಶಿವರಾಮ ಕಾರಂತ್, ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮುಂತಾದ ಸಾಹಿತಿಗಳು ಸೇರಿದ್ದಾರೆ. ಎಎನ್ ಕೃಷ್ಣರಾವ್ ಮತ್ತು ಬಿಎಂ ಶ್ರೀಕಂಠಯ್ಯ ಕೂಡ ಉಪಸ್ಥಿತರಿದ್ದರು.

## ಕರ್ನಾಟಕ ರಾಜ್ಯೋತ್ಸವದ ಆಚರಣೆಗಳು

ಕನ್ನಡ ಧ್ವಜವನ್ನು ಕನ್ನಡ ಸಂಸ್ಕೃತಿಯ ಲಾಂಛನವಾಗಿ ಬಳಸಲಾಗುತ್ತದೆ. ರಾಜ್ಯೋತ್ಸವ ದಿನವನ್ನು ಕರ್ನಾಟಕ ರಾಜ್ಯದಾದ್ಯಂತ ಬಹಳ ಸಂತೋಷ ಮತ್ತು ಉತ್ಸಾಹದಿಂದ ಆಚರಿಸಲಾಗುತ್ತದೆ. ರಾಜ್ಯದಾದ್ಯಂತ ವಿವಿಧ ಆಯಕಟ್ಟಿನ ಸ್ಥಳಗಳಲ್ಲಿ ಕೆಂಪು ಮತ್ತು ಹಳದಿ ಕನ್ನಡ ಧ್ವಜಗಳನ್ನು ಹಾರಿಸುವುದರಿಂದ ಮತ್ತು ಕನ್ನಡ ಗೀತೆ ("ಜಯ ಭಾರತ ಜನನಿಯ ತನುಜಾತೆ") ಮೊಳಗುವುದರಿಂದ ಇಡೀ ರಾಜ್ಯವು ಈ ದಿನದಂದು ಹಬ್ಬದ ನೋಟವನ್ನು ಧರಿಸುತ್ತದೆ. ಅನೇಕ ಪ್ರದೇಶಗಳಲ್ಲಿ ಯುವಕರು ತಮ್ಮ ವಾಹನಗಳ ಮೇಲೆ ಮೆರವಣಿಗೆಗಳನ್ನು ನಡೆಸುತ್ತಿರುವಾಗಲೂ ರಾಜಕೀಯ ಪಕ್ಷದ ಕಚೇರಿಗಳು ಮತ್ತು ಹಲವಾರು ಪ್ರದೇಶಗಳಲ್ಲಿ ಧ್ವಜವನ್ನು ಹಾರಿಸಲಾಗುತ್ತದೆ. ಧರ್ಮವು ಒಂದು ಅಂಶವಲ್ಲ, ರಾಜ್ಯೋತ್ಸವವನ್ನು ಹಿಂದೂಗಳು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಸಹ ಆಚರಿಸುತ್ತಾರೆ.

## ಸರ್ಕಾರಿ ಮೆರವಣಿಗೆ

ರಾಜ್ಯ ಸರ್ಕಾರವು ಈ ದಿನದಂದು ರಾಜ್ಯೋತ್ಸವ ಪ್ರಶಸ್ತಿಗಳು ಮತ್ತು ಕರ್ನಾಟಕ ರತ್ನವನ್ನು ಪ್ರತಿಪಾದಿಸುತ್ತದೆ ಇದನ್ನು ಕರ್ನಾಟಕದ ಅಭಿವೃದ್ಧಿಯಲ್ಲಿ ಮಹತ್ತರವಾದ ಕೊಡುಗೆಗಳನ್ನು ನೀಡಿದ ವ್ಯಕ್ತಿಗಳಿಗೆ ನೀಡಲಾಗುತ್ತದೆ. ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಸಾಮಾನ್ಯವಾಗಿ ನಡೆಯುವ ಸಾಂಸ್ಕೃತಿಕ ಪ್ರದರ್ಶನವನ್ನು ರಾಜ್ಯದ ಮುಖ್ಯಮಂತ್ರಿ ಉದ್ಘಾಟಿಸುತ್ತಾರೆ. ವಿವಿಧ ರಾಷ್ಟ್ರೀಯ ಆಟಗಳಲ್ಲಿ ಪದಕಗಳನ್ನು ಗೆದ್ದ ವಿದ್ಯಾರ್ಥಿಗಳಿಗೆ ಪ್ರಶಸ್ತಿಗಳನ್ನು ನೀಡಲಾಗುತ್ತದೆ.

ಅಲಂಕೃತವಾದ ವಾಹನದ ಮೇಲೆ ಆರೋಹಿತವಾದ ಭುವನೇಶ್ವರಿ ದೇವಿಯ ಚಿತ್ರವನ್ನು ಹೊಂದಿರುವ ಬಹುವರ್ಣದ ಫಲಕಗಳಿಂದ ಆಚರಣೆಗಳನ್ನು ಗುರುತಿಸಲಾಗಿದೆ. ವರ್ಣರಂಜಿತ ಮೆರವಣಿಗೆಯು ನಾಟಕ (ಬಯಲಾಟ), ಸಾಂಪ್ರದಾಯಿಕ ನೃತ್ಯ (ಡೊಳ್ಳು ಕುಣಿತ, ಕಂಸಾಳೆ, ವೀರಗಾಸೆ, ಕೋಲಾಟ) ಮತ್ತು ಶಾಸ್ತ್ರೀಯ ಕರ್ನಾಟಕ ಸಂಗೀತ ಕ್ಷೇತ್ರಗಳಲ್ಲಿ ಜಾನಪದ ಕಲಾವಿದರ ಪ್ರದರ್ಶನಗಳೊಂದಿಗೆ ಇರುತ್ತದೆ.

ನವೆಂಬರ್ 1 ಸಾರ್ವಜನಿಕ ರಜಾದಿನವಾಗಿರುವುದರಿಂದ, ವಾರದ ಮುಂದಿನ ದಿನಗಳಲ್ಲಿ ಇದನ್ನು ವಾಣಿಜ್ಯ ಸಂಸ್ಥೆಗಳಲ್ಲಿ ಆಚರಿಸಲಾಗುತ್ತದೆ. ಬೆಂಗಳೂರು ನಗರದಾದ್ಯಂತ ಬಹುತೇಕ ಎಲ್ಲಾ ಕಚೇರಿಗಳು ಮತ್ತು ವ್ಯಾಪಾರ ಸಂಸ್ಥೆಗಳಲ್ಲಿ ಕನ್ನಡ ಧ್ವಜಗಳನ್ನು ಪ್ರಮುಖವಾಗಿ ಹಾರಿಸಲಾಗುತ್ತದೆ ಮತ್ತು ಪ್ರದರ್ಶಿಸಲಾಗುತ್ತದೆ. ಹಲವಾರು IT ಕಂಪನಿಗಳ ಕೇಂದ್ರವಾಗಿರುವುದರಿಂದ, ಬೆಂಗಳೂರಿನ ಪ್ರಮುಖ ಸಂಸ್ಥೆಗಳಾದ TCS, IBM, ಥಾಮ್ಸನ್ ರಾಯಿಟರ್ಸ್, ವಿಪ್ರೋ, ರಾಬರ್ಟ್ ಬಾಷ್, SAP ಲ್ಯಾಬ್ಸ್, ಆಕ್ಸೆಂಚರ್, ಅಲ್ಕಾಟೆಲ್–ಲುಸೆಂಟ್ ಮತ್ತು ಇನ್ಫೋಸಿಸ್ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಸ್ಥಳೀಯ ಒಲವನ್ನು ಪ್ರದರ್ಶಿಸಲು ಉದ್ಯೋಗಿಗಳನ್ನು ಪ್ರೋತ್ಸಾಹಿಸಿ. ಐಟಿ ಜನಸಮೂಹವು ಕೆಲಸದ ಸ್ಥಳಗಳಿಗೆ ಕನ್ನಡದ ವಿಷಯದ ಟಿ–ಶರ್ಟ್‌ಗಳನ್ನು ಧರಿಸುವ ಮೂಲಕ ತಮ್ಮ ಬೆಂಬಲವನ್ನು ತೋರಿಸುತ್ತದೆ. ಶಿಕ್ಷಣ ಸಂಸ್ಥೆಗಳು ಧ್ವಜಾರೋಹಣ ಮತ್ತು ನಾಡಗೀತೆಯ ನಿರೂಪಣೆಯೊಂದಿಗೆ ಶಾಲೆಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ನಡೆಸುತ್ತವೆ.

## ಅನಿವಾಸಿ ಕನ್ನಡಿಗರು

ಕರ್ನಾಟಕದಲ್ಲಿ ಆಚರಣೆಗಳ ಹೊರತಾಗಿ, ಮುಂಬೈ, ನವದೆಹಲಿ, ಗುರ್ಗಾಂವ್ ಮತ್ತು ಚೆನ್ನೈನಂತಹ ಗಮನಾರ್ಹ ಕನ್ನಡಿಗ ಜನಸಂಖ್ಯೆಯನ್ನು ಹೊಂದಿರುವ ಭಾರತದ ಇತರ ಪ್ರದೇಶಗಳಲ್ಲಿಯೂ ಇದನ್ನು ಆಚರಿಸಲಾಗುತ್ತದೆ. ಸಾಗರೋತ್ತರ ಕನ್ನಡ ಸಂಘಟನೆಗಳು ಯುನೈಟೆಡ್ ಸ್ಟೇಟ್ಸ್, ಯುನೈಟೆಡ್ ಕಿಂಗ್ಡಮ್, ಸಿಂಗಾಪುರ್, ಯುಎಇ, ಕತಾರ್, ಓಮನ್, ದೇಶಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಉತ್ಸವಗಳಲ್ಲಿ ಭಾಗವಹಿಸುತ್ತವೆ. ದಕ್ಷಿಣ ಕೊರಿಯಾ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಸ್ಕಾಟ್ಲೆಂಡ್, ಐರ್ಲೆಂಡ್, ನೆದರ್ಲ್ಯಾಂಡ್ಸ್ ಮತ್ತು ಜರ್ಮನಿಯಲ್ಲೂ ಕೂಡ ಆಚರಿಸಲಾಗುತ್ತದೆ. ॐ





# ಕರ್ಣ

## ದುರಂತ ನಾಯಕ

ಮಹಾಭಾರತದಲ್ಲಿ ಕರ್ಣ ಸೂರ್ಯನ ಮಗ. ಅವನ ತಾಯಿ ಕುಂತಿ ಅವನನ್ನು ತ್ಯಜಿಸಿದಳು ಮತ್ತು ಸೂತ (ಕಡಿಮೆ ಜಾತಿಯ) ಕುಟುಂಬವು ಅವನನ್ನು ದತ್ತು ತೆಗೆದುಕೊಂಡಿತು. ದುರದೃಷ್ಟಕರ ಘಟನೆಗಳ ಸರಣಿ, ಕೆಟ್ಟ ಸಹವಾಸವು ಅವನನ್ನು ಮಹಾಭಾರತದ ದುರಂತ ನಾಯಕನನ್ನಾಗಿ ಮಾಡಿತು.

ಕರ್ಣನು ಅರ್ಜುನನಂತೆಯೇ ಒಬ್ಬ ಮಾಸ್ಟರ್ ಬಿಲ್ಲುಗಾರನಾಗಿದ್ದನು, ಆದರೆ ಅವನ ಪರಿಸ್ಥಿತಿಗಳು ಅವನ ಸಾಮರ್ಥ್ಯವನ್ನು ತಲುಪಲು ಅವಕಾಶ ನೀಡಲಿಲ್ಲ. ಅವನ ಹತಾಶೆಯು ಅಂತಿಮವಾಗಿ ಅವನನ್ನು ದುರ್ಯೋಧನ ಮತ್ತು ಅವನ ಅನ್ಯಾಯದ ಮಿತ್ರರನ್ನು ಸೇರಲು ಕಾರಣವಾಯಿತು. ಅವರು ನೀತಿವಂತ ಹೃದಯವನ್ನು ಹೊಂದಿದ್ದರು, ಆದರೆ ಅವರು ಅನೇಕ ಅನ್ಯಾಯದ ಕಾರ್ಯಗಳನ್ನು ಮಾಡಿದರು. ಕರ್ಣನು ದುರಂತ ನಾಯಕನಾಗಿದ್ದನೋ ಅಥವಾ ಅವನ ಅದೃಷ್ಟಕ್ಕೆ ಅವನು ಅರ್ಹನಾಗಿದ್ದನೋ ತಿಳಿಯದು.

ಕುಂತಿಯು ಕುಂತಿರಾಷ್ಟ್ರದ ರಾಜ ಕುಂತಿಭೋಜನ ದತ್ತುಪುತ್ರಿ. ಒಮ್ಮೆ ದೂರ್ವಾಸ ಋಷಿ ಅರಮನೆಗೆ ಭೇಟಿ ನೀಡಿದರು ಮತ್ತು ಒಂದು ವರ್ಷ ಅಲ್ಲಿಯೇ ಇದ್ದರು. ಕುಂತಿಭೋಜನು ಕುಂತಿಯನ್ನು ನೋಡಿಕೊಳ್ಳಲು ನಿಯೋಜಿಸಿದನು. ಕುಂತಿಯು ಅವನಿಗೆ ಬಹಳ ಭಕ್ತಿ ಮತ್ತು ಕಾಳಜಿಯಿಂದ ಪರಿಪೂರ್ಣವಾಗಿ ಸೇವೆ ಸಲ್ಲಿಸಿದಳು. ದೂರ್ವಾಸನು ಕುಂತಿಯ ಸೇವೆಯಿಂದ ಸಂತುಷ್ಟನಾದನು ಮತ್ತು ಅವನು ಹೊರಡುವ ಸಮಯದಲ್ಲಿ ಅವಳಿಗೆ ಒಂದು ದಿವ್ಯ ಮಂತ್ರವನ್ನು ನೀಡಿದನು. ಕುಂತಿಯು ಯಾವುದಾದರೂ ದೇವರನ್ನು ಆವಾಹಿಸಿ ಮಂತ್ರವನ್ನು ಜಪಿಸಿದರೆ ಆ ದೇವರು ಅವಳ ಮುಂದೆ ಪ್ರತ್ಯಕ್ಷನಾಗಿ ಅವಳಿಗೆ ಮಹಿಮೆಯಲ್ಲಿ ತನಗೆ ಸಮಾನವಾದ ಮಗುವನ್ನು ಅನುಗ್ರಹಿಸುತ್ತಿದ್ದನು.

ಇನ್ನೂ ಚಿಕ್ಕವಳಿದ್ದ ಕುಂತಿಯು ಮಂತ್ರವನ್ನು ಪರೀಕ್ಷಿಸಲು ಬಯಸಿದ್ದಳು. ಅವಳು ಮಂತ್ರವನ್ನು ಪಠಿಸಿದಳು ಮತ್ತು ಸೂರ್ಯನನ್ನು (ಸೂರ್ಯ ದೇವರು) ಆಹ್ವಾನಿಸಿದಳು. ಸೂರ್ಯ ತನ್ನ ದಿವ್ಯರೂಪದಲ್ಲಿ ಅವಳ ಮುಂದೆ ಪ್ರತ್ಯಕ್ಷನಾದ. ಕುಂತಿಯು ಹೇಳಿದಳು, "ನಾನು ನನ್ನ ಕುತೂಹಲದಿಂದ ಮಾತ್ರ ಕೇಳಿದೆ ಪ್ರಭು. ದಯವಿಟ್ಟು ನಿಮ್ಮ ನಿವಾಸಕ್ಕೆ ಹಿಂತಿರುಗಿ" ಎಂದಳು. "ಮಕ್ಕಳನ್ನು ನೀಡುವ ವಿಶೇಷ ಮಂತ್ರದಿಂದ ನೀವು ನನ್ನನ್ನು ಆಹ್ವಾನಿಸಿದ್ದೀರಿ. ನಾನು ಮಂತ್ರಕ್ಕೆ ಅವಿಧೇಯನಾಗಲಾರೆ, ಅಥವಾ ನನ್ನನ್ನು ಆಹ್ವಾನಿಸುವ ಉದ್ದೇಶವು ನಿರರ್ಥಕವಾಗಿರುತ್ತದೆ. ನಾನು ನಿಮಗೆ ಮಗುವನ್ನು ಅನುಗ್ರಹಿಸಬೇಕು. ಅಥವಾ ನೀನು ನಿರಾಕರಿಸಿದರೆ ನಿನ್ನನ್ನೂ ನಿನ್ನ ಆತ್ಮೀಯರನ್ನೂ ಶಪಿಸುತ್ತೇನೆ" ಎಂದು ಸೂರ್ಯ ಆಜ್ಞಾಪಿಸಿದ.

ಕುಂತಿ ಸಂಕಟದಲ್ಲಿದ್ದಳು. ಅವಳು ಅವನನ್ನು ಪಾಲಿಸಿದರೆ, ಅವಳು ತನ್ನ ಕುಟುಂಬದಿಂದ ಅಸಮ್ಮತಿಯನ್ನು ಎದುರಿಸುತ್ತಾಳೆ (ಮದುವೆಗೆ ಮೊದಲು ಮಗುವನ್ನು ಹೊಂದುವುದು ಪಾಪ). ಅವಳು ಅವನಿಗೆ ಅವಿಧೇಯಳಾದರೆ, ಅವನು ಅವಳನ್ನು ಶಪಿಸುತ್ತಾನೆ. ಕೊನೆಗೂ ಕುಂತಿ ಮನಸ್ಸು ಮಾಡಿದಳು. ಅವಳು ಹೇಳಿದಳು, "ನಾನು ನಿನ್ನನ್ನು ಪಾಲಿಸಬೇಕು. ಹೇಗಾದರೂ, ನನ್ನನ್ನು ಆಶೀರ್ವದಿಸಿ ಇದರಿಂದ ನಾನು ನನ್ನ ಪರಿಶುದ್ಧತೆಯನ್ನು ಉಳಿಸಿಕೊಳ್ಳುತ್ತೇನೆ ಮತ್ತು ನನ್ನ ಮಗ ಅವೇಧನೀಯ ಎದೆಯ ತಟ್ಟೆ ಮತ್ತು ಕಿವಿಯೋಲೆಗಳೊಂದಿಗೆ ಜನಿಸುತ್ತಾನೆ. ಸೂರ್ಯ ಅವಳ ಆಸೆಯನ್ನು ಪೂರೈಸಿದನು ಮತ್ತು ಅವಳನ್ನು ಗರ್ಭಧರಿಸಿದನು. ಹತ್ತು ತಿಂಗಳಲ್ಲಿ ಕುಂತಿ ಗಂಡು ಮಗುವಿಗೆ ಜನ್ಮ ನೀಡಿದರೂ ಅದನ್ನು ಗುಟ್ಟಾಗಿಟ್ಟಳು. ಹುಡುಗನ ಜನನದ ಬಗ್ಗೆ ಅವಳ ನರ್ಸ್ ಮಾತ್ರ ಗೌಪ್ಯವಾಗಿತ್ತು. ಹುಡುಗ ಚಿನ್ನದ ಚೆಸ್ಟ್ಪ್ಲೇಟ್ ಮತ್ತು ಕಿವಿಯೋಲೆಗಳೊಂದಿಗೆ ಜನಿಸಿದನು. ಮಧ್ಯರಾತ್ರಿಯಲ್ಲಿ, ಕುಂತಿ ಹಿಂಜರಿಕೆಯಿಂದ ಹುಡುಗನನ್ನು ಪೆಟ್ಟಿಗೆಯಲ್ಲಿ ಹಾಕಿದಳು ಆ ಪೆಟ್ಟಿಗೆಯನ್ನು ಅಶ್ವ ನದಿಯಲ್ಲಿ ತೇಲಿಸಿದಳು.

ಕುಂತಿಯು ಕರ್ಣನನ್ನು ಬುಟ್ಟಿಯಲ್ಲಿಟ್ಟು ಅಶ್ವಾ ನದಿಯಲ್ಲಿ ಬಿಡುತ್ತಾಳೆ, ಕುಂತಿಯು ಭಗವಾನ್ ಸೂರ್ಯನನ್ನು ಆಹ್ವಾನಿಸುತ್ತಾಳೆ. ಕ್ಷತ್ರಿಯನಿಂದ ಸೂತಕ್ಕೆ ಈ ಕಥೆಯು ಮಹಾಭಾರತ, ವನಪರ್ವ, ಅಧ್ಯಾಯ 307 ರಲ್ಲಿದೆ.

ಈ ಪೆಟ್ಟಿಗೆಯು ಅಶ್ವಾ ನದಿಯಿಂದ ಚರ್ಮಾವತಿ ನದಿಗೆ, ಯಮುನಾ ನದಿಗೆ ನಂತರ ಗಂಗಾ ನದಿಗೆ ತೇಲಿತು. ಇದು ಅಂತಿಮವಾಗಿ ಗಂಗಾ ನದಿಯ ದಡದಲ್ಲಿರುವ ಚಂಪಾ ನಗರದಲ್ಲಿ ಕೊನೆಗೊಂಡಿತು. ಆ ಸಮಯದಲ್ಲಿ, ಧೃತರಾಷ್ಟ್ರನ ಸಾರಥಿ ಮತ್ತು ಸೂತ (ಕೆಳಜಾತಿಯ) ಅಧಿರಥ, ಅವನ ಹೆಂಡತಿ ರಾಧೆ ಮತ್ತು ಗಂಗಾ ತೀರಕ್ಕೆ ಬಂದರು. ಅವರು ಪೆಟ್ಟಿಗೆಯನ್ನು ತೆರೆದರು ಸೂರ್ಯನಂತೆ ಹೊಳೆಯುವ ಹುಡುಗನನ್ನು ನೋಡಿ ಆಶ್ಚರ್ಯಚಕಿತರಾದರು. ಅಧಿರಥ ಮತ್ತು ರಾಧಾ ಮಕ್ಕಳಿಲ್ಲದಿದ್ದರೂ, ಅವರು ಯಾವಾಗಲೂ ಮಗುವನ್ನು ಬಯಸಿದ್ದರು. ಅವರು ಪೆಟ್ಟಿಗೆಯಲ್ಲಿರುವ ಹುಡುಗನನ್ನು ದತ್ತು ತೆಗೆದುಕೊಳ್ಳಲು ನಿರ್ಧರಿಸಿದರು. ಅವರಿಗೆ ವಸುಷೇನ ಎಂದು ಹೆಸರಿಟ್ಟರು. ಅಷ್ಟರಲ್ಲಿ ಕುಂತಿಯು ತನ್ನ ಗೂಢಚಾರರ ಮೂಲಕ ಕರ್ಣನ ಪರಿಸ್ಥಿತಿಯನ್ನು ತಿಳಿದುಕೊಂಡಳು.

ಸ್ವಲ್ಪ ಸಮಯದ ನಂತರ, ಅಧಿರಥ ಮತ್ತು ರಾಧಾ ಹೆಚ್ಚು ಮಕ್ಕಳನ್ನು ಪಡೆದರು. ವಸುಸೇನನು ತನ್ನ ಚಿನ್ನದ ಕಿವಿಯೋಲೆಗಳಿಂದಾಗಿ "ಕರ್ಣ" ಎಂದು ಪ್ರಸಿದ್ಧನಾದನು. ಅವರು ಕರ್ಣನಿಗೆ ಅವನ ನಿಜವಾದ ಪಿತೃತ್ವದ ಬಗ್ಗೆ ಹೇಳಲಿಲ್ಲ. ಬಾಲ್ಯದಿಂದಲೂ ಅವನು ನೀತಿವಂತ ಹುಡುಗನಾಗಿದ್ದನು. ಅವರು ಗೌರವಾನ್ವಿತರಾಗಿದ್ದರು ಮತ್ತು ಬ್ರಾಹ್ಮಣರಿಗೆ ದಾನ ಮಾಡುವುದನ್ನು ಆನಂದಿಸುತ್ತಿದ್ದರು.

ಕರ್ಣನು ದೊಡ್ಡವನಾದ ನಂತರ, ಅಧಿರಥನು ಪಾಂಡವರ (ಕುಂತಿ ಮತ್ತು ಪಾಂಡುವಿನ ಐದು ಮಕ್ಕಳು) ಮತ್ತು ಕೌರವರ (ಧೃತರಾಷ್ಟ್ರ ಮತ್ತು ಗಾಂಧಾರಿಯ ನೂರು ಮಕ್ಕಳು) ದ್ರೋಣರ ಬಳಿ ಬಿಲ್ವಿದ್ಯೆ ಕಲಿಯಲು ಹಸ್ತಿನಾಪುರಕ್ಕೆ ಕಳುಹಿಸಿದನು. ಕರ್ಣನು ಅತ್ಯಂತ ಪ್ರತಿಭಾವಂತ ಬಿಲ್ಲುಗಾರನಾದನು. ಆದಾಗ್ಯೂ, ಅವರು ಪಾಂಡವ ಅರ್ಜುನನ ಬಗ್ಗೆ ಆಗಾಗ್ಗೆ ಅಸೂಯೆಪಡುತ್ತಿದ್ದರು. ದ್ರೋಣನು ಯಾವಾಗಲೂ ಅರ್ಜುನನಿಗೆ ಒಲವು ತೋರುತ್ತಿದ್ದನು ಮತ್ತು ಅವನಿಗೆ ದೈವಿಕ ಅಸ್ತ್ರಗಳನ್ನು ನೀಡುತ್ತಿದ್ದನು. ಅವನು ನಿಧಾನವಾಗಿ ಪಾಂಡವರ ಮೇಲೆ ದ್ವೇಷವನ್ನು ಬೆಳೆಸಿಕೊಂಡನು. ಹಿರಿಯ ಕೌರವ ದುರ್ಯೋಧನನೊಂದಿಗೆ ಸ್ನೇಹ ಬೆಳೆಸಿದನು. ಈ ಕೆಟ್ಟ ಸಹವಾಸ ಮತ್ತು ಅಸೂಯೆಯಿಂದಾಗಿ ಕರ್ಣನು ಸದಾಚಾರದಿಂದ ದೂರ ಸರಿಯತೊಡಗಿದನು.

ಮಿಥ್‌ಬಸ್ಟಿಂಗ್: ಕರ್ಣನನ್ನು ದ್ರೋಣರಿಂದ ತಿರಸ್ಕರಿಸಲಾಯಿತು ಎಂದು ಹೆಚ್ಚಿನ ಜನರು ನಂಬುತ್ತಾರೆ ಆದ್ದರಿಂದ, ಅವರು ಶಸ್ತ್ರಾಸ್ತ್ರಗಳ ಉಪದೇಶಕ್ಕಾಗಿ ಪರಶುರಾಮರ ಬಳಿಗೆ ಹೋದರು. ಆದಾಗ್ಯೂ, ಕರ್ಣನನ್ನು ವಾಸ್ತವವಾಗಿ ದ್ರೋಣರು ಒಪ್ಪಿಕೊಂಡರು. ವನ ಪರ್ವ ಅಧ್ಯಾಯ 307 ರಲ್ಲಿ, ಅದು ಹೇಳುತ್ತದೆ, "ಸಮಯದಲ್ಲಿ ತನ್ನ ಮಗ ಬೆಳೆದದ್ದನ್ನು ನೋಡಿ, ಅಧಿರಥನು ಅವನನ್ನು ಆನೆಯ ಹೆಸರಿನ ನಗರಕ್ಕೆ ಕಳುಹಿಸಿದನು. ಅಲ್ಲಿ ಕರ್ಣನು ಶಸ್ತ್ರಗಳನ್ನು ಕಲಿಯುವ ಉದ್ದೇಶದಿಂದ ದ್ರೋಣನನ್ನು ಸಹಿಸಿಕೊಂಡನು. ಇದನ್ನು ಆದಿ ಪರ್ವ ಅಧ್ಯಾಯ 134 ರಲ್ಲಿಯೂ ಹೇಳಲಾಗಿದೆ. ದ್ರೋಣರು ಕೇವಲ ಪಾಂಡವರು ಮತ್ತು ಕೌರವರಿಗೆ ಕಲಿಸಲಿಲ್ಲ. ಅವರು ಕರ್ಣ, ವೃಷ್ಣಿ ಮತ್ತು ಅಂಧಕ ರಾಜಕುಮಾರರಿಗೆ ಮತ್ತು ಇತರ ಅನೇಕರಿಗೆ ಕಲಿಸಿದರು. ಇದರಿಂದ ದ್ರೋಣರು ಏಕಲವ್ಯನನ್ನು ಏಕೆ ತಿರಸ್ಕರಿಸಿದರು ಎಂಬ ಪ್ರಶ್ನೆ ಬರುತ್ತದೆ. ಧೃತರಾಷ್ಟ್ರನ ಸಾರಥಿಯಾಗಿ ಅಧಿರಥನ ಸ್ಥಾನದಿಂದಾಗಿ ದ್ರೋಣರು ಕರ್ಣನನ್ನು ಸ್ವೀಕರಿಸಿದರು ಎಂದು ನಾವು ಭಾವಿಸಬಹುದು. ಇದರರ್ಥ ದ್ರೋಣ, ಪಾಂಡವರು ಮತ್ತು ಕೌರವರು ಆಯುಧ ಪಂದ್ಯಾವಳಿಯ ಮೊದಲು ಕರ್ಣನನ್ನು ತಿಳಿದಿದ್ದರು.

ಒಂದು ದಿನ, ಕರ್ಣನು ದ್ರೋಣರನ್ನು ಸಂಪರ್ಕಿಸಿ, "ನಾನು ಬ್ರಹ್ಮಾಸ್ತ್ರದ ಜ್ಞಾನವನ್ನು ಕಲಿಯಲು ಬಯಸುತ್ತೇನೆ. ದಯವಿಟ್ಟು ನನಗೆ ಕೊಡು" ಎಂದನು. ಆದರೆ, ಕರ್ಣನು ದುಷ್ಟ ದುರ್ಯೋಧನನ ಸಹವಾಸ ಮಾಡುತ್ತಿದ್ದಾನೆಂದು ದ್ರೋಣನಿಗೆ ತಿಳಿದಿತ್ತು. ಅವನೂ ಅರ್ಜುನನಿಗೆ ಸ್ವಲ್ಪ ಒಲವು ತೋರಿದ. ಆದ್ದರಿಂದ, ಅವರು ಹೇಳಿದರು, "ಯೋಗ್ಯ ಕ್ಷತ್ರಿಯರು ಮತ್ತು ಬ್ರಾಹ್ಮಣರು ಮಾತ್ರ ಬ್ರಹ್ಮಾಸ್ತ್ರವನ್ನು ಪಡೆಯಬಹುದು. ನಾನು ಅದನ್ನು ನಿಮಗೆ ನೀಡಲು ಸಾಧ್ಯವಿಲ್ಲ!"

ಕರ್ಣನು ಅತ್ಯಂತ ನಿರಾಶೆಗೊಂಡನು. ಅವನು ದ್ರೋಣನ ಆಶ್ರಮವನ್ನು ತೊರೆಯಲು ನಿರ್ಧರಿಸಿ ವಿಷ್ಣುವಿನ ಪ್ರಸಿದ್ಧ ಅವತಾರವಾದ ಪರಶುರಾಮನ ಬಳಿಗೆ ಹೋದನು. ಆದರೆ ಪರಶುರಾಮನು ಬ್ರಾಹ್ಮಣನಿಗೆ ಮಾತ್ರ ಕಲಿಸುತ್ತಾನೆ ಎಂದು ಅವನಿಗೆ ತಿಳಿದಿತ್ತು. ಹೀಗೆ ಬ್ರಾಹ್ಮಣನ ವೇಷದಲ್ಲಿ ಪರಶುರಾಮನ ಬಳಿಗೆ ಬಂದು ಸುಳ್ಳು ಹೇಳಿದನು, "ನಾನು ಭೃಗು ವಂಶದ ಬ್ರಾಹ್ಮಣ. ದಯವಿಟ್ಟು ನನಗೆ ಆಯುಧ ವಿದ್ಯೆಯನ್ನು ಕಲಿಸಿಕೊಡಿ" ಎಂದನು. ಪರಶುರಾಮನು ಅವನನ್ನು ಸಂತೋಷದಿಂದ ಸ್ವೀಕರಿಸಿ ದೈವಿಕ ಆಯುಧಗಳನ್ನು ಬಳಸುವ ಕಲೆಯನ್ನು ಅವನಿಗೆ ಕಲಿಸಿದನು.

## ಶಾಪ ಒಂದು : ರಥದ ಚಕ್ರ

ಒಮ್ಮೆ ಕರ್ಣನು ಬಿಲ್ಲುಗಾರಿಕೆಯನ್ನು ಅಭ್ಯಾಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಒಂದು ಹಸುವನ್ನು ಹೊಡೆದು ಕೊಂದನು. ಅವನು ಹಸುವಿನ ಬ್ರಾಹ್ಮಣ ಮಾಲೀಕನ ಬಳಿಗೆ ಧಾವಿಸಿ, "ದಯವಿಟ್ಟು ನನ್ನನ್ನು ಕ್ಷಮಿಸು. ನಾನು ಹಸುವನ್ನು ಆಕಸ್ಮಿಕವಾಗಿ ಕೊಂದಿದ್ದೇನೆ ಎಂದನು. ಆದರೆ ಬ್ರಾಹ್ಮಣನು ಕೋಪಗೊಂಡು ಶಾಪ ಕೊಟ್ಟನು, "ನೀವು ಹಸುವನ್ನು ಕೊಂದಿದ್ದೀರಿ. ನೀವು ಸಾಯಲು ಅರ್ಹರು. ಈ ಅಸಹಾಯಕ ಹಸುವಿನಂತೆಯೇ ನಿನ್ನ ರಥಚಕ್ರವೂ ಯುದ್ಧದಲ್ಲಿ ಸಿಲುಕಿ ಅಸಹಾಯಕನಾಗಿ ಸಾಯುವಂತೆ ನಿನ್ನನ್ನು ಶಪಿಸುತ್ತೇನೆ!" ಕರ್ಣನು ಬ್ರಾಹ್ಮಣನನ್ನು ಸಮಾಧಾನಪಡಿಸಲು ಪ್ರಯತ್ನಿಸಿದನು, ಆದರೆ ಬ್ರಾಹ್ಮಣನು ಪಶ್ಚಾತ್ತಾಪ ಪಡಲಿಲ್ಲ. ನಿರಾಶೆಯಿಂದ ಕರ್ಣನು ಪರಶುರಾಮನ ಬಳಿಗೆ ಹಿಂತಿರುಗಿದನು.

## ಶಾಪ ಎರಡು: ಬ್ರಹ್ಮಾಸ್ತ್ರವನ್ನು ಮರೆತುಬಿಡಿ

ಸಕಾಲದಲ್ಲಿ ಪರಶುರಾಮನು ಕರ್ಣನಿಗೆ ಬ್ರಹ್ಮಾಸ್ತ್ರವನ್ನು ಕಲಿಸಿದನು. ಒಂದು ದಿನ ಪರಶುರಾಮನು ಕರ್ಣನ ಮಡಿಲಲ್ಲಿ ಮಲಗಿದ್ದನು. ಈ ವೇಳೆ ವಿಷಕಾರಿ ಕೀಟವೊಂದು ಕರ್ಣನ ತೊಡೆಯ ಬಳಿ ಬಂದು ಕಚ್ಚತೊಡಗಿತು. ಕರ್ಣನು ಪರಶುರಾಮನನ್ನು ಎಬ್ಬಿಸಲು ಬಯಸದ ಕಾರಣ ಅದನ್ನು ಕೊಲ್ಲಲು ಸಾಧ್ಯವಾಗಲಿಲ್ಲ. ಹೀಗಾಗಿ ಮೌನವಾಗಿ ನೋವನ್ನು ಅನುಭವಿಸಿದರು. ಕರ್ಣನ ರಕ್ತವು ಪರಶುರಾಮನ ಕೈಗೆ ಬಂದಾಗ, ಅವನು ಎಚ್ಚರಗೊಂಡು ಏನಾಯಿತು ಎಂದು ಕೇಳಿದನು. ಕರ್ಣ ಕೀಟವನ್ನು ತೋರಿಸಿದನು. ಪರಶುರಾಮನು ಅದನ್ನು ನೋಡಿದನು ಮತ್ತು ಕೀಟವು ತಕ್ಷಣವೇ ಸತ್ತಿತು.

ಅದರ ಸ್ಥಳದಲ್ಲಿ ರಾಕ್ಷಸ (ದೈತ್ಯಾಕಾರದ) ಕಾಣಿಸಿಕೊಂಡಿತು. ರಾಕ್ಷಸನು ತನ್ನ ಕೈಗಳನ್ನು ಮಡಚಿ ಹೇಳಿದನು, "ಧನ್ಯವಾದ, ಪರಶುರಾಮ. ನೀನು ನನ್ನನ್ನು ಈ ಕೀಟದ ದೇಹದಿಂದ ಮುಕ್ತಗೊಳಿಸಿದ್ದೀಯ. ಹಲವು ವರ್ಷಗಳ ಹಿಂದೆ ನಾನು ಭೃಗು ಋಷಿಯ ಪತ್ನಿಯನ್ನು ಅಪಹರಿಸಿದ್ದೆ. ಭೃಗು ನನ್ನನ್ನು ಕೀಟನಾಗು ಎಂದು ಶಪಿಸಿದ. ಶಾಪ ಯಾವಾಗ ಕೊನೆಗೊಳ್ಳುತ್ತದೆ ಎಂದು ನಾನು ಕೇಳಿದಾಗ, ಅವನು ತನ್ನ ಪೂರ್ವಜರಾದ ಪರಶುರಾಮನು ನನ್ನನ್ನು ಮುಕ್ತಗೊಳಿಸುತ್ತಾನೆ ಎಂದು ಹೇಳಿದನು. ಇಂದು ನೀನು ನನ್ನನ್ನು ಮುಕ್ತಗೊಳಿಸಿರುವೆ!" ಹೀಗೆ ಹೇಳುತ್ತಾ ರಾಕ್ಷಸನು ನಮಸ್ಕರಿಸಿ ಹೊರಟುಹೋದನು.

ಪರಶುರಾಮನು ಕರ್ಣನ ಕಡೆಗೆ ತಿರುಗಿ ಕೋಪದಿಂದ ಹೇಳಿದನು, "ನೀನು ಬ್ರಾಹ್ಮಣನಲ್ಲ! ಒಬ್ಬ ಬ್ರಾಹ್ಮಣನು ಅಂತಹ ನೋವನ್ನು ಸಹಿಸಲಾರನು. ಒಬ್ಬ ಕ್ಷತ್ರಿಯನು ಮಾತ್ರ ಹಾಗೆ ಮಾಡಬಲ್ಲನು." ಆಗ ಕರ್ಣ ತನ್ನ ನಿಜವಾದ ಗುರುತನ್ನು ಬಹಿರಂಗಪಡಿಸಿದನು. ಪರಶುರಾಮನು ಕೋಪಗೊಂಡು, "ನಿಮಗೆ ಅತ್ಯಗತ್ಯವಾದಾಗ ಬ್ರಹ್ಮಾಸ್ತ್ರದ ಜ್ಞಾನವನ್ನು ಮರೆತುಬಿಡುವಂತೆ ನಾನು ನಿನ್ನನ್ನು ಶಪಿಸುತ್ತೇನೆ" ಎಂದು ಶಪಿಸಿದರು. ಕರ್ಣನು ಕೋಪಗೊಂಡ ಬ್ರಾಹ್ಮಣನನ್ನು ಬೇಡಿಕೊಳ್ಳುತ್ತಾನೆ, ಹಸು ನೆಲದ ಮೇಲೆ ಸತ್ತಿದೆ. ಬ್ರಾಹ್ಮಣನು ಕರ್ಣನನ್ನು ಶಪಿಸುತ್ತಾನೆ ಕೋಪಗೊಂಡ ಪರಶುರಾಮನು ಕರ್ಣನನ್ನು ಶಪಿಸುತ್ತಾನೆ. ॐ

**ಸಮೃದ್ಧಿ ಸುಜ್ಞಾನ**

ಮಳೆ ನೀರ ಹನಿಗಳು ನೋಡಲು ಚಿಕ್ಕದು.
ಆದರೆ ಸತತವಾಗಿ ಮಳೆ ಸುರಿದರೆ,
ಹೊಳೆಗಳು ತುಂಬಿ ಹರಿಯುತ್ತವೆ.





# ಮಕ್ಕಳ ದಿನಾಚರಣೆ

ಪ್ರತಿ ವರ್ಷ ನವೆಂಬರ್ 14 ರಂದು ಮಕ್ಕಳ ಹಕ್ಕುಗಳು, ಆರೈಕೆ ಮತ್ತು ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸಲು ಮಕ್ಕಳ ದಿನವನ್ನು ಆಚರಿಸಲಾಗುತ್ತದೆ. ಭಾರತದ ಮೊದಲ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಅವರು 1889 ರಲ್ಲಿ ಈ ದಿನದಂದು ಜನಿಸಿದರು. ಸಾಮಾನ್ಯವಾಗಿ ಮಕ್ಕಳಲ್ಲಿ ಚಾಚಾ ನೆಹರು ಎಂದು ಕರೆಯಲ್ಪಡುವ ಪ್ರಧಾನಿಯವರು ಮಕ್ಕಳನ್ನು ರಾಷ್ಟ್ರದ ನಿಜವಾದ ಶಕ್ತಿ ಮತ್ತು ಸಮಾಜದ ಅಡಿಪಾಯ ಎಂದು ಪರಿಗಣಿಸಿದರು.

ಭಾರತದಲ್ಲಿ ಮೊದಲಿಗೆ ನವೆಂಬರ್ 20 ರಂದು ಮಕ್ಕಳ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತಿತ್ತು. ಕಾರಣ ವಿಶ್ವಸಂಸ್ಥೆಯು ಸಾರ್ವತ್ರಿಕ ಮಕ್ಕಳ ದಿನ ಎಂದು ಈ ದಿನಾಂಕವನ್ನು ಘೋಷಣೆ ಮಾಡಿತ್ತು. ಆದರೆ ನೆಹರು ಅವರ ಮರಣದ ನಂತರ, ಅವರ ಜನ್ಮದಿನದ ಸವಿನೆನಪಿಗಾಗಿ ನವೆಂಬರ್ 14ರಂದು ಭಾರತದಲ್ಲಿ ಮಕ್ಕಳ ದಿನಾಚರಣೆ ಆಚರಿಸಲಾಗುತ್ತಿದೆ. ಭಾರತದಲ್ಲಿ ಪಂಡಿತ್ ಜವಾಹರಲಾಲ್ ನೆಹರು ಅವರ ಜನ್ಮದಿನವಾದ ನವೆಂಬರ್ 14 ರಂದು ಮಕ್ಕಳ ದಿನಾಚರಣೆಯನ್ನು ಆಚರಣೆ ಮಾಡುವಂತೆ ಬದಲಾವಣೆ ಮಾಡಲಾಯಿತು. ದೇಶದ ಮಕ್ಕಳಿಗೆ ಅಗತ್ಯ ಶಿಕ್ಷಣವನ್ನು ಪೂರೈಸಬೇಕೆಂಬುದು ಅವರ ಧ್ಯೇಯವಾಗಿತ್ತು. ಆದ್ದರಿಂದ ಅವರ ಸವಿನೆನಪಿಗಾಗಿ ಅವರ ಜನ್ಮ ದಿನಾಂಕದಂದೇ ಮಕ್ಕಳ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ದಿನದಂದು ಭಾರತದಾದ್ಯಂತ ಮಕ್ಕಳಿಗಾಗಿ ಮತ್ತು ಅನೇಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

ಮಕ್ಕಳ ನೆಚ್ಚಿನ ಚಾಚಾ ಜವಾಹರಲಾಲ್ ನೆಹರು ರವರು " Tomorrow is Yours" ಎಂದು ಮಕ್ಕಳಿಗೆ ಯಾವಾಗಲೂ ಹೇಳುತ್ತಿದ್ದರು. ಇದರ ಅರ್ಥ ನಾಳೆ ನಿಮ್ಮದು ಎಂದು. ಭಾರತದ ತರುಣ ಪೀಳಿಗೆಯನ್ನು ಉದ್ದೇಶಿಸಿ ಅವರು ಹೀಗೆ ನುಡಿಯುತ್ತಿದ್ದರು. ಭಾರತದ ಸ್ವತಂತ್ರಕ್ಕೆ ಹೋರಾಡಿದ ಪ್ರಮುಖ ನಾಯಕರಲ್ಲಿ ಇವರು ಒಬ್ಬರಾಗಿದ್ದರು. ದೇಶದ ಪ್ರಪ್ರಥಮ ಪ್ರಧಾನಿಯಾಗಿ ಇವರ ಜೀವನ ಆದರ್ಶವಾದುದು.

ಸ್ವಾತಂತ್ರ್ಯ ಚಳುವಳಿಯ ಮುಂಚೂಣಿ ನಾಯಕ, ಭಾರತದ ಪ್ರಥಮ ಪ್ರಧಾನ ಮಂತ್ರಿ, ಭಾರತ ರತ್ನ ಪಂಡಿತ್ ಜವಾಹರಲಾಲ್ ನೆಹರು ಅವರ 133ನೇ ಜನ್ಮ ದಿನ. ಈ ದಿನವನ್ನು ಭಾರತದಲ್ಲಿ ಮಕ್ಕಳ ದಿನಾಚರಣೆ ಎಂದು ಆಚರಿಸಲಾಗುತ್ತದೆ. ಮೋತಿಲಾಲ್ ನೆಹರು ಮತ್ತು ಸ್ವರೂಪ್ ರಾಣಿ ಅವರ ಪುತ್ರರಾಗಿ ಜವಾಹರಲಾಲ್ ನೆಹರು ಅವರು ನವೆಂಬರ್ 14, 1889 ರಲ್ಲಿ ಅಲಹಬಾದ್‌ನಲ್ಲಿ ಜನಿಸಿದರು. ನೆಹರು ಅವರು ಎರಡು ಬಾರಿ ಭಾರತದ ಪ್ರಧಾನಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

1916 ರಲ್ಲಿ ಕಮಾಲ ಕೌಲ್ ಅವರನ್ನು ವಿವಾಹವಾದರು. ಮಹಾತ್ಮ ಗಾಂಧೀಜಿ ಅವರೊಂದಿಗೆ ಉತ್ತಮ ಸಂಬಂಧ ಕಾಯ್ದುಕೊಂಡಿದ್ದ ನೆಹರು, ಗಾಂಧಿ ಅವರ ಅಹಿಂಸಾ ಹೋರಾಟವನ್ನು ಬೆಂಬಲಿಸಿದ್ದರು. ಮಕ್ಕಳನ್ನು ಹೆಚ್ಚಾಗಿ ಇಷ್ಟಪಡುತ್ತಿದ್ದ ನೆಹರು ಅವರೇ ತಮ್ಮ ಜನ್ಮದಿನವನ್ನು ಮಕ್ಕಳ ದಿನವನ್ನಾಗಿ ಆಚರಿಸುವಂತೆ ಹೇಳಿದರು.

1947 ರಲ್ಲಿ ಭಾರತ ಸ್ವತಂತ್ರ ರಾಷ್ಟ್ರವಾಗಿ ಸ್ಥಾಪನೆಯಾದಗಿನಿಂದ 1964ರ ಅವರ ಮರಣದವರೆಗೂ ಭಾರತದ ಪ್ರಧಾನಿಯಾಗಿ ಸೇವೆಸಲ್ಲಿಸಿದರು. ಇವರನ್ನು ಸಮಾಜವಾದ ತತ್ವದ, ಪ್ರಜಾಪ್ರಭುತ್ವ ಗಣರಾಜ್ಯದ ಮತ್ತು ಜ್ಯಾತ್ಯಾತಿತ ತತ್ವದ ಸಾರ್ವಭೌಮ ಎಂದು ಕರೆಯಲಾಗುತ್ತದೆ. 1955 ರಲ್ಲಿ, ಭಾರತದ ಅತ್ಯುನ್ನತ ನಾಗರಿಕ ಗೌರವವಾದ ಭಾರತ ರತ್ನವನ್ನು ನೆಹರು ಅವರಿಗೆ ನೀಡಲಾಯಿತು. ಪ್ರಧಾನ ಮಂತ್ರಿಯಿಂದ ಸಲಹೆ ಪಡೆಯದೆ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು ನೆಹರು ಅವರಿಗೆ ಭಾರತ ರತ್ನವನ್ನು ನೀಡಿ ಗೌರವಿಸಿದರು. ॐ



# ಮಾವು

ಮಾವು ಉತ್ತರ ಆಮ್ರಾ (ಮ್ಯಾಂಗಿಫೆರ ಇಂಡಿಕ) ಉಷ್ಣವಲಯದಲ್ಲಿ ಪ್ರಪಂಚದೆಲ್ಲೆಡೆ ವ್ಯಾಪಕವಾಗಿ ಕಂಡು ಬರುವ ಮರ. ಇದರ ದಾರುವಿಗಿಂತ ಹಣ್ಣೇ ಪ್ರಸಿದ್ಧ. ಇದರ '30'ಕ್ಕಿಂತಲೂ ಹೆಚ್ಚು ತಳಿಗಳು ಪ್ರಚಲಿತವಿದೆ. ಇದು ಸುಮಾರು 4000 ವರ್ಷಗಳಿಂದಲೂ ಭಾರತದ ವ್ಯವಸಾಯದಲ್ಲಿದ್ದು, ಸುಮಾರು 17 ಮತ್ತು 18ನೇ ಶತಮಾನದಲ್ಲಿ ಯುರೋಪ್‌ನ ಪ್ರವಾಸಿಗರು ಇದನ್ನು ಪಶ್ಚಿಮದ ಉಷ್ಣವಲಯ ದೇಶಗಳಲ್ಲಿ ಪ್ರಸರಿಸಿದರು.

## ಸಸ್ಯಶಾಸ್ತ್ರೀಯ ವರ್ಗೀಕರಣ

ಮಾವು ಗೋಡಂಬಿ, ಕರಿಗೇರು, ಅಮಟೆ ಮುಂತಾದ ಉಪಯುಕ್ತ ಸಸ್ಯಗಳನ್ನು ಒಳಗೊಂಡಿರುವ ಅನಕಾರ್ಡಿಯೇಸೀ ಕುಟುಂಬಕ್ಕೆ ಸೇರಿದ್ದು, ಇದರ ಸಸ್ಯಕುಲ ಮ್ಯಾಂಗಿಫೆರಾ ಆಗಿರುತ್ತದೆ. ಭಾರತದಲ್ಲಿ ವ್ಯಾಪಕವಾಗಿರುವ ತಳಿಯ ಸಸ್ಯನಾಮ ಮ್ಯಾಂಗಿಫೆರ ಇಂಡಿಕ ಆಗಿದೆ.

## ಇತಿಹಾಸ

ಸುಮಾರು 4000 ವರ್ಷಗಳಿಂದಲೂ ಭಾರತದಲ್ಲಿ ಮಾವಿನ ಬೇಸಾಯ ಇದೆ ಎನ್ನಲಾಗಿದೆ. ಇತ್ತೀಚಿನ ಅಧ್ಯಯನಗಳ ಪ್ರಕಾರ ಮಾವು ಅಸ್ಸಾಮ್–ಬರ್ಮ–ಥಾಯ್ಲೆಂಡ್ ವಲಯದಲ್ಲಿ ಉಗಮಿಸಿ ಈ ದೇಶಗಳ ಕಾಡುಗಳಲ್ಲಿ ಇಂದು ಜನಪ್ರಿಯವಾಗಿರುವ ಇಂಡಿಕ ಪ್ರಭೇದದ ಹಾಗೂ ಸಿಲ್ವೇಟಿಕ ಪ್ರಭೇದದ ಕಾಡು ಪ್ರರೂಪಗಳು ಕಾಣದೊರೆಯುತ್ತಿದ್ದು ಮಾವು ಇವೆರಡು ಪ್ರಭೇದಗಳ ನಡುವೆ ಸಂಭವಿಸಿತೆನ್ನಲಾದ ಸಹಜ ಸಂಕರದಿಂದ ಹುಟ್ಟಿದ್ದು ಎಂಬ ಅಭಿಪ್ರಾಯ ಇದೆ.

## ಆಪೂಸು ಮರದಲ್ಲಿ ಹೂವುಗಳು ಮತ್ತು ಅಪಕ್ವ ಹಣ್ಣುಗಳು

ಮಾವು ಭಾರತಾದ್ಯಂತ, ಉಷ್ಣ ಹಾಗೂ ಉಪೋಷ್ಣ ವಲಯ ಬೆಟ್ಟಗಳ ಕಾಡುಗಳಲ್ಲಿ ಪ್ರಧಾನವಾಗಿ ಹಳ್ಳ ತೊರೆಗಳ ಸನಿಹದಲ್ಲಿ ಮಾವು ಕಾಡುಮರವಾಗಿ ಕಾಣದೊರೆಯುತ್ತದೆ. ಹಿಮಾಲಯ ಪರ್ವತ ಶ್ರೇಣಿಯ ತಪ್ಪಲು, ಪಶ್ಚಿಮ ಹಾಗೂ ಪೂರ್ವ ಘಟ್ಟಗಳು, ಮಧ್ಯಪ್ರದೇಶ, ಬಿಹಾರ, ಒರಿಸ್ಸ, ಅಸ್ಸಾಮ್ ಮತ್ತು ಅಂಡಮಾನ್ ದ್ವೀಪಗಳ ಕಾಡುಗಳಲ್ಲೂ ಇದು ಸಾಮಾನ್ಯ. ಅಲ್ಲದೆ ಮಾವಿನ ಮರವನ್ನು ತೋಪುಗಳಲ್ಲೂ ಮನೆಯ ಹಿತ್ತಲಿನಲ್ಲೂ ಕೃಷಿ ಜಮೀನಿನ ಅಂಚುಗಳಲ್ಲೂ ರಸ್ತೆಯ ಬದಿಗಳಲ್ಲೂ ಬೆಳೆಸುವ ಪ್ರತೀತಿಯೂ ಇದೆ.

ಹಣ್ಣು ಕೊಡುವ ಸಸ್ಯಗಳ ಬೇಸಾಯದ ಒಟ್ಟು ವಿಸ್ತೀರ್ಣದಲ್ಲಿ ಶೇಕಡಾ 60ರಷ್ಟು ಭಾಗ ಮಾವಿನ ಕೃಷಿಗೆ ವಿನಿಯೋಗವಾಗಿದೆ. (ಒಟ್ಟು 2 ದಶಲಕ್ಷ ಎಕರೆ) ಇವುಗಳ ಪೈಕಿ ಉತ್ತರ ಪ್ರದೇಶ ಮೊದಲನೆಯದು (767,690 ಎಕರೆ). ಎರಡನೆಯ ಸ್ಥಾನ ಬಿಹಾರ ರಾಜ್ಯದ್ದು (217,517 ಎಕರೆ). ಮಾವಿನ ತೋಟಗಾರಿಕೆಗೆ ಹೆಸರಾಂತ ಉಳಿದ ರಾಜ್ಯಗಳೆಂದರೆ ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಹಾಗೂ ಒರಿಸ್ಸ, ಕರ್ನಾಟಕವೂ ಕೂಡ ಸಾಕಷ್ಟು ಪ್ರಸಿದ್ಧವಾಗಿದೆ.

ಪ್ರಪಂಚದ ಇನ್ನಿತರ ದೇಶಗಳಲ್ಲೂ ಮಾವಿನ ಬೇಸಾಯ ಉಂಟು. ದಕ್ಷಿಣ ಚೀನ, ಮಲಯ, ಫಿಲಿಪೀನ್ಸ್, ಹವಾಯಿ, ವೆಸ್ಟ್ ಇಂಡೀಸ್, ಆಸ್ಟ್ರೇಲಿಯದ ಉಷ್ಣಪ್ರದೇಶಗಳು, ಮಡಗಾಸ್ಕರ್, ಆಫ್ರಿಕದ ಕರಾವಳಿ, ಉತ್ತರ ಅಮೆರಿಕದ ಫ್ಲಾರಿಡ ಮತ್ತು ಕ್ಯಾಲಿಫೋರ್ನಿಯ ರಾಜ್ಯಗಳಲ್ಲಿ ಮಾವನ್ನು ಕೃಷಿ ಮಾಡಲಾಗುತ್ತಿದೆ.

## ಸಸ್ಯ/ಗುಣ/ಲಕ್ಷಣಗಳು

ಮಾವು 10–45 ಮೀ ಎತ್ತರಕ್ಕೆ ಬೆಳೆಯುವ ದೊಡ್ಡ ಗಾತ್ರದ ನಿತ್ಯಹರಿದ್ವರ್ಣ ಮರ. ಸಾಮಾನ್ಯವಾಗಿ ನೇರವಾಗಿ ದೃಢವಾಗಿ ಬೆಳೆಯುವಂಥ ಪ್ರಧಾನ ಕಾಂಡ, ಗುಮ್ಮಟದಾಕಾರದ ಚೆಲುವಾದ ಹಂದರ ಇದರ ಮುಖ್ಯ ಲಕ್ಷಣಗಳು. ಕಾಂಡ ಒರಟಾದ, ಮಂದವಾದ, ಕಡುಬೂದಿ ಬಣ್ಣದ ತೊಗಟೆಯಿಂದ ಆವೃತವಾಗಿದೆ. ಹಚ್ಚ ಹಸಿರಿನ ದಟ್ಟವಾದ ಎಲೆಗಳು ಇದ್ದು, ಇದು ತೇವಾಂಶವಿರುವ ಮಿಶ್ರಪರ್ಣಪಾತಿ (Mixed Deciduous) ಹಾಗೂ ಅರೆ ನಿತ್ಯಹರಿದ್ವರ್ಣ (Semi evergreen) ಕಾಡುಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಎಲೆಗಳು 10–30 ಸೆಂಮೀ ಉದ್ದ. 2–9 ಸೆಂಮೀ ಅಗಲ ಇರುವಂಥ ಈಟಿ ಮೊನೆಯಾಕಾರದವಾಗಿವೆ. ಇಂತಹ ಕಾಡುಗಳಲ್ಲಿ ಬೆಳೆಯುವ ಮಾವು ಎತ್ತರವಾಗಿ ಸುಮಾರು 60 ಅಡಿಗಳವರೆಗೂ ಬೆಳೆಯುತ್ತದೆ. ಇದರ ದಾರುವು ಮೃದುವಾಗಿದ್ದು ಮರಗೆಲಸಕ್ಕೆ ಸುಲಭವಾಗಿರುತ್ತದೆಯಾದರೂ ಬಾಳಿಕೆಯುತವಲ್ಲ. ಇದನ್ನು ಪದರ ಹಲಗೆ (plywood) ತಯಾರಿಕೆಯಲ್ಲಿ, ಕೆಲವು ತಾತ್ಕಾಲಿಕ ಉಪಯೋಗದ ಕೆಲಸಗಳಿಗೆ ಹಲಗೆಗಳಾಗಿ ಉಪಯೋಗಿಸಬಹುದು. ಕಸಿ ಮಾಡಲ್ಪಟ್ಟ ಅನೇಕ ತಳಿಗಳು ಕೇವಲ ರುಚಿಕರ ಹಣ್ಣಿಗಾಗಿ ಬೆಳೆಸಲ್ಪಡುತ್ತವೆ.

ಇದರ ಎಲೆಗಳನ್ನು ಹೊಸಕಿದರೆ ವಿಶಿಷ್ಟವಾದ ವಾಸನೆ ಹೊರಬರುತ್ತದೆ. ಹೂಗಳು ಚಿಕ್ಕಗಾತ್ರದವು; ಸಹಸ್ರ ಸಂಖ್ಯೆಯಲ್ಲಿ ಪ್ಯಾನಿಕಲ್ ಮಾದರಿಯ ಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಒಂದೇ ಮರದಲ್ಲಿ ಗಂಡು ಮತ್ತು ದ್ವಿಲಿಂಗಿ ಹೂಗಳೆರಡೂ ಇರುವುವು. ಕಾಯಿ ಅಷ್ಟಿ ಫಲ (ಡ್ರೂಪ್) ಮಾದರಿಯದು. ಮಾವಿನ ವಿಭಿನ್ನ ಬಗೆಗಳಲ್ಲಿ ಕಾಯಿಯ ಗಾತ್ರ ಮತ್ತು ಆಕಾರಗಳು ಬೇರೆ ಬೇರೆಯಾಗಿರುವುವು. ಕಾಯಿಯ ಸಿಪ್ಪೆ ಮಂದ ಇಲ್ಲವೆ ತೆಳು ಚರ್ಮಿಲವಾಗಿದೆ. ಕಾಯಿ ಎಳೆಯದಿರುವಾಗ ಹಸುರಾಗಿದ್ದು ಬಲಿತು ಮಾಗಿದಂತೆ ಹಳದಿ ಅಥವಾ ಕೆಂಪು ಬಣ್ಣವನ್ನು ತಳೆಯುತ್ತದೆ. ಸಿಪ್ಪೆಯಲ್ಲಿ ಗ್ರಂಥಿಗಳುಂಟು. ತಿರುಳು ತಿಳಿಹಳದಿ, ಹಳದಿ, ಕಿತ್ತಳೆ ಮುಂತಾದ ವಿಭಿನ್ನ ವರ್ಣದ್ದಾಗಿದ್ದು ಗಟ್ಟಿಯಾಗಿರಬಹುದು ಅಥವಾ ಮೃದು ಹಾಗೂ ರಸಭರಿತವಾಗಿರಬಹುದು. ಕೆಲವು ಬಗೆಗಳಲ್ಲಿ ಇದಕ್ಕೆ ಹುಳಿ ರುಚಿಯಿದ್ದರೆ ಇನ್ನು ಕೆಲವಲ್ಲಿ ಸಿಹಿಯಾಗಿ ಮಾಧುರ್ಯದಿಂದ ಕೂಡಿರುತ್ತದೆ. ಅಂತೆಯೇ ಕೆಲವು ತೆರನ ಮಾವುಗಳು ನಾರು ನಾರಾಗಿರುವುದೂ ಉಂಟು. ಒಳಗೆ ಒಂದೇ ಒಂದು ಅಂಡಾಕಾರದ ಬೀಜ ಇದೆ. ಇದರ ಸುತ್ತ ಪೆಡಸಾದ, ನಾರಿನಿಂದ ರಚಿತವಾದ ಕವಚ ಉಂಟು; ಇದೇ ಓಟೆ.

## ಬೇಸಾಯ

ಮಾವು ಪ್ರಧಾನವಾಗಿ ಉಷ್ಣವಲಯದ ಬೆಳೆ. 80 ಡಿಗ್ರಿ ಸರಾಸರಿ ಉಷ್ಣತೆ ಇರುವಂಥ ಹಾಗೂ ವರ್ಷದಲ್ಲಿ ಜೂನ್–ಸೆಪ್ಟೆಂಬರ್ ತಿಂಗಳುಗಳಲ್ಲಿ ಮಾತ್ರ ಸು. 75–250 ಸೆಂಮೀ ಮಳೆ ಬೀಳುವಂಥ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಹೂ ಅರಳುವ ಸಮಯದಲ್ಲಿ ಮಳೆಗಾಳಿ, ಮಂಜು, ಮೋಡ ಮುಸುಕಿದ ವಾತಾವರಣ ಇರಬಾರದು. ಹಣ್ಣುಗಳು ಬಲಿತು ಮಾಗುವ ವೇಳೆಯಲ್ಲೂ ಮಳೆ ಬೀಳಬಾರದು. ಮಾವು ಕಡುಚಳಿಯನ್ನು ಸಹಿಸದು. ಆಳವಾದ ಮತ್ತು ನೀರು ಚೆನ್ನಾಗಿ ಬಸಿದು ಹೋಗುವಂಥ ಮಣ್ಣು ಇದರ ಬೆಳೆವಣಿಗೆಗೆ ಉತ್ತಮ, ಮೆಕ್ಕಲು ಮಣ್ಣು ಅತ್ಯುತ್ತಮ. ನೆಲ ಕ್ಷಾರೀಯವಾಗಿಯಾಗಲಿ ಶಿಲಾಮಯವಾಗಿಯಾಗಲಿ ಇರಬಾರದು.

ಮಾವನ್ನು ಬೀಜಗಳ ಮುಖಾಂತರ ಸುಲಭವಾಗಿ ಬೆಳೆಸಬಹುದಾದರೂ ಹೀಗೆ ಬೆಳೆಸಲಾರದ ಮರಗಳು ಏಕರೀತಿಯ ಗುಣಮಟ್ಟದ ಫಲ ಕೊಡುವುದು ಖಚಿತ ಅಲ್ಲವಾದ್ದರಿಂದ, ಕಸಿಮಾಡಿ ಬೆಳೆಸುವುದೇ ವಾಡಿಕೆ. ಕಸಿಮಾಡಿದ ಮಾವಿನ ಸಸಿಗಳನ್ನು ಜುಲೈ–ಡಿಸೆಂಬರ್ ತಿಂಗಳುಗಳ ಅವಧಿಯಲ್ಲಿ ಬೇಕೆನಿಸಿದ ಕಡೆ 60–90 ಸೆಂ.ಮೀ ಆಳದ ಗುಂಡಿಗಳನ್ನು ತೋಡಿ ಕೊಟ್ಟಿಗೆ ಗೊಬ್ಬರ, ಬೂದಿ, ಮಣ್ಣು ಇವುಗಳ ಮಿಶ್ರಣವನ್ನು ಹಾಕಿ, ನೆಡಲಾಗುತ್ತದೆ. ಸಸಿಗಳ ನಡುವಣ ಅಂತರ ಅವುಗಳ ಬೆಳೆವಣಿಗೆಯ ತೀವ್ರತೆ, ಸ್ವಭಾವವನ್ನನುಸರಿಸಿ 10.5 ರಿಂದ 18 ಮೀಟರಿನವರೆಗೆ ವ್ಯತ್ಯಾಸವಾಗುವುದು.

ಸಸಿ ನೆಟ್ಟ ಮೊದಲ 3–4 ವರ್ಷಗಳ ಕಾಲ ಗಿಡಗಳಿಗೆ ನೀರು ಹಾಯಿಸುವುದು ಕ್ರಮ. ಆನಂತರ ಮಳೆ ಸರಿಯಾಗಿದ್ದರೆ ನೀರು ಹಾಕುವುದು ಅನಗತ್ಯ. ಅಂತೆಯೇ ಗಿಡಗಳು ಸಣ್ಣ ವಯಸ್ಸಿನವಾಗಿರುವಾಗ ಕೊಟ್ಟಿಗೆ ಗೊಬ್ಬರ, ಮೂಳೆ ಗೊಬ್ಬರ, ಬೂದಿ, ಹರಳು ಹಿಂಡಿ, ಅಮೋನಿಯಮ್ ಸಲ್ಫೇಟ್ ಮುಂತಾದವುಗಳ ಮಿಶ್ರಣವನ್ನು ಹಾಕಲಾಗುತ್ತದೆ. ಮರ ದೊಡ್ಡದಾದ ಮೇಲೆ ಗೊಬ್ಬರ ಹಾಕುವ ಕ್ರಮ ಇಲ್ಲ.

ಕಡುಚಳಿಯಿಂದಲೂ ಬೇಸಗೆಯಲ್ಲಿ ಬಿಸಿಗಾಳಿಯಿಂದಲೂ ಮರಗಳಿಗೆ ಹಾನಿಯುಂಟಾಗುವುದರಿಂದ ಇದನ್ನು ತಡೆಯಲು ಮಾವಿನತೋಟದ ಸುತ್ತ ಹಿಪ್ಪು ನೇರಳೆ, ಬಿರಡಿ, ಗಾಳಿಮರ, ಹಾಲವಾಣ, ರಕ್ತಚಂದನ ಮುಂತಾದ ಮರಗಳನ್ನು ಬೆಳೆಸುವುದಿದೆ.

ಮಾವಿನಮರ ವರ್ಷಕ್ಕೊಮ್ಮೆ, ಡಿಸೆಂಬರ್–ಜನವರಿ ತಿಂಗಳುಗಳಲ್ಲಿ ಹೂಬಿಡುತ್ತದೆ. ಚಳಿ ಹೆಚ್ಚಾಗಿರುವಂಥ ಉತ್ತರ ಭಾರತದಲ್ಲಿ ಹೂ ಅರಳುವ ಪ್ರಾಯ ಫೆಬ್ರವರಿ–ಮಾರ್ಚ್. ಸುಮಾರು 6–8 ವಾರ ಮರದಲ್ಲಿ ಹೂ ಅರಳಿರುತ್ತವೆ, ಕಾಯಿ ಕಚ್ಚಿ, ಹಣ್ಣು ಪಕ್ವಸ್ಥಿತಿಗೆ ಬರಲು ಸುಮಾರು 4–5 ತಿಂಗಳು ಕಾಲ ಹಿಡಿಯುವುದು.



ಹತ್ತು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಾವಿನ ಮರಗಳು ಪ್ರತಿವರ್ಷ ಹೂ ಬಿಡುವುವಾದರೂ ವಯಸ್ಸಾದ ಮರಗಳು ವರ್ಷ ಬಿಟ್ಟು ವರ್ಷ ಹೂ ಅರಳಿಸಿ ಫಲ ಕೊಡುವುವು. ಇದಕ್ಕೆ ಕಾರಣ ಹಲವಾರು : ಹವೆ, ನೆಲದಲ್ಲಿಯ ಆರ್ದ್ರತೆ, ರೋಗರುಜಿನಗಳು ಇತ್ಯಾದಿ. ಹೂಗೊಂಚಲಿನ ಎಲ್ಲ ಹೂಗಳೂ ಕಾಯಿಕಚ್ಚವು. ಕಾಯಿಯಾಗುವ ಹೂಗಳ ಸಂಖ್ಯೆ ವಿವಿಧ ಬಗೆಗಳಲ್ಲಿ ಬೇರೆ ಬೇರೆಯಾಗಿರುತ್ತವೆ.

ಮಾವಿನ ಮರಕ್ಕೆ ಹಲವಾರು ರೀತಿಯ ರೋಗಗಳು, ಕೀಟ ಪಿಡುಗುಗಳು ಹಾನಿ ಎಸಗುವುದುಂಟು. ಬೂಷ್ಟು ರೋಗಗಳ ಪೈಕಿ ಪೌಡರಿ ಮಿಲ್‌ಡ್ಯೂ, ಆಂತ್ರಕ್ನೋಸ್ ಮತ್ತು ಹೂಮಂಜರಿಯ ಕುಚ್ಚುಗಟ್ಟುವಿಕೆ ಮುಖ್ಯವೆನಿಸಿವೆ. ಮೊದಲ ರೀತಿಯ ರೋಗ ಹೂ ಮತ್ತು ಕಾಯಿಗಳಿಗೆ ಅಂಟುವ ಜಾಡ್ಯ. ಗಂಧಕವನ್ನು ಸಿಂಪಡಿಸುವುದರ ಮೂಲಕ ಇದನ್ನು ತಡೆಗಟ್ಟಬಹುದು.

ಆಂತ್ರಕ್ನೋಸ್ ರೋಗದ ಲಕ್ಷಣ ಎಂದರೆ ಎಳೆಯ ಕುಡಿಗಳು, ಎಲೆ ಹಾಗೂ ಹೂಗಳ ಮೇಲೆ ಕಪ್ಪುಚುಕ್ಕೆಗಳು ಕಾಣಿಸಿಕೊಳ್ಳುವುದು. ಕಾಯಿ ಎಳೆಯವಾಗಿದ್ದರೆ ಬಿದ್ದುಹೋಗುವುವು. ಬಲಿತ ಅಥವಾ ಮಾಗಿದ ಹಣ್ಣುಗಳಾದರೆ ಸಿಪ್ಪೆಯ ಮೇಲೆ ಕಪ್ಪುಚುಕ್ಕೆಗಳು ಮೂಡುವುದಲ್ಲದೆ ಒಳಗಿನ ತಿರುಳು ಗಡುಸಾಗುತ್ತದೆ. ಬೋರ್ಡೋ ಮಿಶ್ರಣದ ಸಿಂಪಡಿಕೆಯಿಂದ ರೋಗವನ್ನು ನಿಯಂತ್ರಿಸಬಹುದು.

ಕುಚ್ಚು ರೋಗದ ಕಾರಣ ಖಚಿತವಾಗಿ ತಿಳಿದಿಲ್ಲ. ರೋಗಪೀಡಿತ ಹೂ ಮಂಜರಿಗಳನ್ನು ಕತ್ತರಿಸಿ ಸುಟ್ಟು ಹಾಕುವುದೇ ಈ ರೋಗವನ್ನು ಹತೋಟಿಯಲ್ಲಿಡುವ ಮಾರ್ಗ. ಜಾಸಿಡ್ ಜಿಗಿಕೀಟ, ಕಾಂಡ ಕೊರಕ, ಸೊಂಡಿಲು ಕೀಟ, ಶಲ್ಕ ಕೀಟ, ಮಕಮಲ್ ತಿಗಣೆ, ಕೆಂಪಿರುವೆ ಮುಂತಾದವು ಮಾವಿನಮರಕ್ಕೆ ಹಾನಿಯುಂಟು ಮಾಡುವವು. ಕೀಟಗಳ ಪೈಕಿ ಕೆಲವು, ಡಿಡಿಟಿ, ಬಿಎಚ್‌ಸಿ, ಫಾಲಿಡಾಲ್, ಗೆಸರೋಲ್ ಮುಂತಾದ ಕೀಟನಾಶಕಗಳ ಬಳಕೆಯಿಂದ ಕೀಟಗಳನ್ನು ನಿಯಂತ್ರಿಸಬಹುದು.

ಮುಂದುವರೆಯುವುದು. . .

ॐ

## ಸಂಪ್ರೀತಿ ಸುಘೋಷ



ಯಾರಿಗೆ ಬದುಕುವುದಕ್ಕೆ ಬರುವುದೊ,
ಅವರು ಯಾವುದೇ ಸೌಲಭ್ಯವಿಲ್ಲದಿದ್ದರೂ
ಸಂತೋಷವಾಗಿರುತ್ತಾರೆ. ಯಾರಿಗೆ ಬದಕಲು
ಬರುವುದಿಲ್ಲವೊ, ಅವರು ಎಲ್ಲ
ಸೌಲಭ್ಯವಿದ್ದರೂ ದುಃಖಃಪಡುತ್ತಾರೆ.

ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ

# ಭಾರತದ ಸಂವಿಧಾನ ದಿನ



ಭಾರತದ ಸಂವಿಧಾನ ದಿನವನ್ನು ಪ್ರತಿ ವರ್ಷ ನವೆಂಬರ್ 26 ರಂದು ಆಚರಣೆ ಮಾಡಲಾಗುತ್ತದೆ. ಸರ್ಕಾರಿ ಕಚೇರಿಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಈ ದಿನವನ್ನು ಆಚರಣೆ ಮಾಡಲಾಗುತ್ತದೆ. ಅದರಲ್ಲು ಶಾಲಾ, ಕಾಲೇಜುಗಳಲ್ಲಿ ಈ ದಿನವನ್ನು ವಿಶೇಷವಾಗಿ ಆಚರಣೆ ಮಾಡುವುದರ ಮೂಲಕ ಈ ದಿನದ ಪ್ರಾಮುಖ್ಯತೆಯನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಗುತ್ತದೆ.

ನವೆಂಬರ್ 26, ಸ್ವತಂತ್ರ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಹತ್ವದ ದಿನವಾಗಿದೆ. 1949ರ ನವೆಂಬರ್ 26 ರಂದು ಸಂವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಇದರ ಅಂಗವಾಗಿಯೇ ನಾವು ಇಂದು ಸಂವಿಧಾನ ದಿನವನ್ನು ಆಚರಣೆ ಮಾಡುತ್ತಿದ್ದೇವೆ. ಭಾರತದಲ್ಲಿ ಸಂವಿಧಾನ ಅಂಗೀಕಾರವಾಗಿದ್ದು 1949 ರ ನವೆಂಬರ್ 26 ರಂದೇ, ಆದರೂ ಅನುಷ್ಠಾನಕ್ಕೆ ಬಂದಿದ್ದು 1950 ರ ಜನವರಿ 26 ರಂದು. ಈ ದಿನವನ್ನು ಗಣರಾಜೋತ್ಸವ ದಿನವಾಗಿ ಆಚರಣೆ ಮಾಡಲಾಗುತ್ತದೆ.

ನಮ್ಮ ಸಂವಿಧಾನ ದೇಶದ ಜನರನ್ನು ಸಶಕ್ತಗೊಳಿಸಿದೆ. ಸರ್ವರಿಗೂ ಸಮಾನತೆಯೊದಗಿಸಿದೆ. ಮೂಲಭೂತ ಹಕ್ಕುಗಳು, ಕರ್ತವ್ಯವನ್ನೂ ನೀಡಿದೆ. ಭಾರತಕ್ಕೆ ಸಂವಿಧಾನವೇ ದೊಡ್ಡ ಬಲ. ನಮ್ಮ ಸಂವಿಧಾನವು ನಮ್ಮೆಲ್ಲರನ್ನು ರಕ್ಷಿಸುವ ಬಹುದೊಡ್ಡ ಕಾನೂನು. ನಮ್ಮ ದೇಶದಲ್ಲಿ ಹೊಸ ಶಕೆ ಆರಂಭವಾಗಿದ್ದು ಸಂವಿಧಾನ ಜಾರಿಗೆ ಬಂದಾಗಿನಿಂದಲೇ. ಸಂವಿಧಾನದ ಮಹತ್ವದ ಬಗ್ಗೆ ಎಲ್ಲರಿಗೂ ಅರಿವು ಮೂಡಿಸುವುದು, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸುವದರ ಜತೆಗೆ ಅವರ ಸಾಧನೆಯ ಬಗ್ಗೆ ತಿಳಿಸಿ ಕೊಡುವುದು ಈ ದಿನದ ವಿಶೇಷತೆ. ಭಾರತದ ಸಂವಿಧಾನಕ್ಕೆ ವಿಶ್ವದಲ್ಲೇ ದೊಡ್ಡ ಸಂವಿಧಾನ ಎಂಬ ಹಿರಿಮೆ ಇದೆ.

ನವೆಂಬರ್ 26 ರಂದು ಸಂವಿಧಾನ ದಿನ ಆಚರಿಸುವಂತೆ 2015 ರ ನವೆಂಬರ್ 19 ಎಂದು ಭಾರತ ಸರ್ಕಾರ ಅಧಿಕೃತವಾಗಿ ಆದೇಶ ಹೊರಡಿಸಿತು. ಇದಕ್ಕೂ ಮೊದಲು 2015ರ ಅಕ್ಟೋಬರ್ 11 ರಂದು ಭಾರತದ ಪ್ರಧಾನಿ ನರೇಂದ್ರ ಮೋದಿ ಮುಂಬೈಯಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಸ್ಮಾರಕಕ್ಕೆ ಅಡಿಗಲ್ಲು ಹಾಕುವ ಸಂದರ್ಭದಲ್ಲಿ ನವೆಂಬರ್ 26 ರಂದು ಸಂವಿಧಾನ ದಿನವನ್ನಾಗಿ ಆಚರಿಸುವಂತೆ ಘೋಷಣೆ ಮಾಡಿದ್ದರು. ಅದರಂತೆ ಪ್ರತಿ ವರ್ಷ ನವೆಂಬರ್ 26 ರಂದು ಸಂವಿಧಾನ ದಿನವನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ.

ಭಾರತ ಸಂವಿಧಾನವು ಹಲವು ದೇಶದ ಸಂವಿಧಾನದ ಪ್ರಮುಖ ಅಂಶಗಳನ್ನು ಎರವಲು ಪಡೆದಿದೆ. ಬ್ರಿಟನ್, ಐರ್‌ಲ್ಯಾಂಡ್, ಜಪಾನ್, ಯುಎಸ್‌ಎ, ದಕ್ಷಿಣ ಆಫ್ರಿಕಾ, ಜರ್ಮನಿ, ಆಸ್ಟ್ರೇಲಿಯಾ ಮತ್ತು ಕೆನಡಾ ದೇಶಗಳ ಸಂವಿಧಾನದ ಕೆಲವು ಅಂಶಗಳನ್ನು ಎರವಲು ಪಡೆದಿದೆ.

**ಮನೆ ಮದ್ದು**

ಒಣಶುಂಠಿಯನ್ನು ಕೆಂಡದ ಮೇಲೆ ಇಟ್ಟು ಸುಟ್ಟು ಭಸ್ಮ ಮಾಡಿ ಸ್ವಲ್ಪ ಅಡಿಗೆ ಉಪ್ಪಿನೊಂದಿಗೆ ಬೆರೆಸಿ ಹಲ್ಲುಜ್ಜುವುದರಿಂದ ಹಲ್ಲು ನೋವು ಶಾಂತವಾಗುತ್ತದೆ.

2ವರ್ಷ 11 ತಿಂಗಳು, 17 ದಿನಗಳ ಅವಧಿಯಲ್ಲಿ ರಚಿಸಿದ ಸಂವಿಧಾನ ನಮ್ಮದಾಗಿದೆ. ಭಾರತ ಸಂವಿಧಾನ ಅತಿದೊಡ್ಡ ಕೈಬರವಣಿಗೆಯ ಡಾಕ್ಯುಮೆಂಟ್ ಹೊಂದಿರುವ ಸಂವಿಧಾನವಾಗಿದ್ದು, ಇಂಗ್ಲಿಷ್‌ನಲ್ಲಿ ಒಟ್ಟು 1,17,369 ಪದಗಳನ್ನು ಹೊಂದಿದೆ. ಕೈ ಬರವಣಿಗೆಯಲ್ಲಿ ಬರೆದ ಮೂಲ ಸಂವಿಧಾನ ಪುಸ್ತಕವನ್ನು ಸಂಸತ್ತಿನ ಗ್ರಂಥಾಲಯದಲ್ಲಿ ಹೀಲಿಯಂ ನಿಂದ ಕೂಡಿದ ಕೇಸ್‌ನಲ್ಲಿ ಸುರಕ್ಷಿತವಾಗಿ ಇಡಲಾಗಿದೆ. ಸಂವಿಧಾನ ಅಂಗೀಕಾರದ ನಂತರ ಗಣರಾಜ್ಯ ದೇಶದ ಮೊದಲ ರಾಷ್ಟ್ರಪತಿಯಾಗಿ ಡಾ. ಬಾಬು ರಾಜೇಂದ್ರ ಪ್ರಸಾದ್ ಅವರನ್ನು ಆಯ್ಕೆ ಮಾಡಲಾಗಿತ್ತು.

## ಸಂವಿಧಾನದ ಇತಿಹಾಸ & ಮಹತ್ವ

– ಭಾರತದ ಸಂವಿಧಾನವು ಡಿಸೆಂಬರ್ 9, 1947 ರಿಂದ ನವೆಂಬರ್ 26, 1949ರ ಮಧ್ಯ ರಚನೆಗೊಂಡಿತು. ಡಾ. ಬಾಬಾಸಾಹೇಬ್ ಅಂಬೇಡ್ಕರ್ (Dr. B R Ambedkar) ಅವರ ನೇತೃತ್ವದಲ್ಲಿ ರಚಿಸಲ್ಪಟ್ಟ ಭಾರತದ ಸಂವಿಧಾನವು (Constitution Of India) ಜನವರಿ 26, 1950ರಂದು ಜಾರಿಗೆ ಬಂದಿತು. ಆದ್ದರಿಂದ ಭಾರತದಲ್ಲಿ ಪ್ರತಿವರ್ಷ ಜನವರಿ 26 ರಂದು ಗಣರಾಜ್ಯೋತ್ಸವ (Republic Day) ಆಚರಿಸಲಾಗುತ್ತದೆ. ಅದೇ ರೀತಿ ನವೆಂಬರ್ 26ನ್ನು ಸಂವಿಧಾನ ದಿನ ಎಂದು ಆಚರಿಸಲಾಗುತ್ತಿದೆ.

– ಹಿಂದೆ ಸಂವಿಧಾನ ರಚನಾ ದಿನವನ್ನು 'ರಾಷ್ಟ್ರೀಯ ಕಾನೂನು ದಿವಸ' (Law day) ಎಂದು ಆಚರಿಸಲಾಗುತ್ತಿತ್ತು. 2015ರಲ್ಲಿ ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 125ನೇ ಜಯಂತಿ ವರ್ಷದಂದು 'ರಾಷ್ಟ್ರೀಯ ಕಾನೂನು ದಿನ' ಎಂಬುದನ್ನು ಬದಲಿಸಿ 'ಸಂವಿಧಾನ ದಿವಸ' ಎಂದು ಕರೆಯಲಾಗುತ್ತಿದೆ.

– ವಿಶೇಷ ಎಂದರೆ ನಮ್ಮ ಭಾರತದ ಸಂವಿಧಾನವನ್ನು ಟೈಪ್ ಮಾಡಿಲ್ಲ ಅಥವಾ ಮುದ್ರಣವನ್ನೂ ಮಾಡಿಲ್ಲ. ಅದನ್ನು ಇಂಗ್ಲೀಷ್ ಹಾಗೂ ಹಿಂದಿ ಭಾಷೆಯಲ್ಲಿ (English And Hindi Language) ಕೈಬರಹದ ರೂಪದಲ್ಲಿದೆ.

– ಭಾರತ ಸಂವಿಧಾನದ ಮೂಲ ಪ್ರತಿಗಳನ್ನು ವಿಶೇಷ ಹೀಲಿಯಂ ತುಂಬಿದ ಕವಚಗಳಲ್ಲಿ ಸಂರಕ್ಷಿಸಲಾಗಿದ್ದು, ಅದು ಭಾರತದ ಸಂಸತ್ ಭವನದ ಗ್ರಂಥಾಲಯದಲ್ಲಿದೆ.

– ಭಾರತ ಸಂವಿಧಾನವನ್ನು ಬೇರೆ ಕಡೆಗಳಿಂದ ಪಡೆದ ಅಂಶಗಳ ಚೀಲ ಎಂದು ಕರೆಯಲಾಗುತ್ತಿದೆ. ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತ್ವದ ಪರಿಕಲ್ಪನೆಗಳನ್ನು ಫ್ರಾನ್ಸ್ (France) ದೇಶದ ಸಂವಿಧಾನದಿಂದ ಪಡೆಯಲಾಗಿದೆ. ಪಂಚವಾರ್ಷಿಕ ಯೋಜನೆಯ ಕಲ್ಪನೆಯನ್ನು ಸೋವಿಯತ್ ಒಕ್ಕೂಟದಿಂದ ಪಡೆಯಲಾಗಿದ್ದು, ರಾಜ್ಯ ನಿರ್ದೇಶನ ತತ್ವಗಳು ಐರ್ಲೆಂಡ್ ಸಂವಿಧಾನದ ಕೊಡುಗೆಗಳಾಗಿವೆ. ಜಪಾನ್ (Japan) ದೇಶದಿಂದ ಸರ್ವೋಚ್ಚ ನ್ಯಾಯಾಲಯದ ಕಾರ್ಯನಿರ್ವಹಣೆಯ ಕಾನೂನು ಪಡೆಯಲಾಗಿದೆ.

– ಭಾರತದ ಸಂವಿಧಾನದಲ್ಲಿ 448 ವಿಧಿಗಳು, 25 ಭಾಗಗಳು, 12 ಶೆಡ್ಯೂಲ್, 5 ಅನುಬಂಧಗಳು ಹಾಗೂ 98 ತಿದ್ದುಪಡಿಗಳಿವೆ. ಸಂವಿಧಾನ ರಚನಾ ಸಮಿತಿಯಲ್ಲಿ 284 ಮಂದಿ ಸದಸ್ಯರಿದ್ದರು. ಅವರಲ್ಲಿ 15 ಮಂದಿ ಮಹಿಳಾ ಸದಸ್ಯರಿದ್ದರು. ಅದರ ಕರಡನ್ನು 1949ರ ನವೆಂಬರ್ ತಿಂಗಳಿನಲ್ಲಿ ಸಲ್ಲಿಸಲಾಯಿತು. ಸಲ್ಲಿಸಿದ ಬಳಿಕವೂ ಅದನ್ನು ಪೂರ್ಣಗೊಳಿಸಲು ಮೂರು ವರ್ಷ ಬೇಕಾಯಿತು. ಸಂವಿಧಾನ ರಚನಾ ಸಮಿತಿಯಲ್ಲಿದ್ದ ಎಲ್ಲ 284 ಮಂದಿ ಸದಸ್ಯರು 1950ರ ಜನವರಿ 24ರಂದು ಈ ದಾಖಲೆಗೆ ಸಹಿ ಮಾಡಿದರು. 1950ರ ಜನವರಿ 26ರಂದು ಇದು ಅಸ್ತಿತ್ವಕ್ಕೆ ಬಂತು. ಭಾರತದ ರಾಷ್ಟ್ರಲಾಂಛನವನ್ನೂ ಅದೇ ದಿನ ಅಳವಡಿಸಿಕೊಳ್ಳಲಾಯಿತು.

– ಭಾರತದ ಸಂವಿಧಾನವನ್ನು ವಿಶ್ವದ ಅತ್ಯುತ್ತಮ ಸಂವಿಧಾನಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಏಕೆಂದರೆ ಕಳೆದ 70 ವರ್ಷಗಳಲ್ಲಿ ಕೇವಲ ನೂರಕ್ಕೂ ಕಡಿಮೆ ತಿದ್ದುಪಡಿಗಳನ್ನು ನಮ್ಮ ಸಂವಿಧಾನಕ್ಕೆ ಮಾಡಲಾಗಿದೆ.

– ಸಂವಿಧಾನ ಕರಡು ರಚನಾ ಸಮಿತಿ 1945ರ ಜುಲೈ ತಿಂಗಳಿನಲ್ಲಿ ಆಗ ಭಾರತವನ್ನು ಆಳುತ್ತಿದ್ದ ಇಂಗ್ಲೆಂಡ್‌ನಲ್ಲಿ ಹೊಸ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಆ ಸರ್ಕಾರವು ಭಾರತದ ಸ್ವಾತಂತ್ರ್ಯ ಚಳುವಳಿಯ ತೀವ್ರತೆ ಅರಿಯುವುದರೊಂದಿಗೆ ಭಾರತದ ಕುರಿತು ತನ್ನ ಧೋರಣೆ ಬದಲಿಸಿಕೊಂಡಿತ್ತು. ಭಾರತಕ್ಕೆ ಪ್ರತ್ಯೇಕ ಸಂವಿಧಾನದ ಬೇಡಿಕೆ ಈಡೇರಿಸಲು ಬ್ರಿಟೀಷ್ ಸಂಸತ್ತಿನ 3 ಮಂತ್ರಿಗಳ ಸಂಪುಟ ಉಪ ಸಮಿತಿಯನ್ನು ರಚಿಸಿ ಭಾರತಕ್ಕೆ ಕಳುಹಿಸಿತ್ತು. ನಂತರ ಸಂವಿಧಾನ ರಚನಾ ಕರಡು ಸಮಿತಿ ರಚಿಸಲಾಯಿತು.

**ಪ್ರಕೃತಿ ವಿಕೃತಿ ಸಂಸ್ಕೃತಿ**

ಹಸಿವಾದಾಗ ಊಟ ಮಾಡುವುದು ಪ್ರಕೃತಿ,
ಹಸಿವಿಲ್ಲದಿದ್ದರೂ ಊಟ ಮಾಡುವುದು ವಿಕೃತಿ,
ಹಸಿದವನಿಗೆ ಊಟ ಕೊಡುವುದು ಸಂಸ್ಕೃತಿ.

– 1946ರ ಡಿಸೆಂಬರ್ 9ರಂದು ಸಂವಿಧಾನ ಕರಡು ರಚನಾ ಸಮಿತಿ ಕಾರ್ಯಾರಂಭ ಮಾಡಿತ್ತು. ಮುಂದೆ 1947ರಲ್ಲಿ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ಲಭಿಸಿದಾಗ ಸಂವಿಧಾನ ರಚನಾ ಸಮಿತಿಯು ಸಂಪೂರ್ಣ ಸ್ವಾಯತ್ತತೆ ಪಡೆದುಕೊಳ್ಳುವುದರೊಂದಿಗೆ ತನ್ನ ಕೆಲಸ ಮುಂದುವರೆಸಿತ್ತು.

– 1946ರಲ್ಲಿ ಬ್ರಿಟಿಷ್ ಭಾರತದ ಪ್ರಾಂತ್ಯಗಳ 296 ಸ್ಥಾನಗಳಿಗೆ ಚುನಾವಣೆ ನಡೆದು ಭಾರತದ ಜನತೆ ಪ್ರಾಂತೀಯ ಸಭೆಗಳ ಸದಸ್ಯರನ್ನು ಆಯ್ಕೆ ಮಾಡಿದ್ದರು. ಆ ಸಭೆಗಳು ಸಂವಿಧಾನ ರಚನಾ ಸಭೆಯ ಸದಸ್ಯರನ್ನು ಆರಿಸಿದರು.

– ಕರಡು ಸಮಿತಿ ಸದಸ್ಯರು ಸಂವಿಧಾನ ರಚನಾಸಭೆಯಲ್ಲಿ ಭಾರತದ ವಿವಿಧ ಪ್ರದೇಶಗಳಿಗೆ ಹಾಗೂ ಸಮುದಾಯಗಳಿಗೆ ಸೇರಿದ ಸದಸ್ಯರು ಇದ್ದರು. ಬೇರೆ ಬೇರೆ ರಾಜಕೀಯ ವಿಚಾರಧಾರೆಗಳನ್ನು ಪ್ರತಿನಿಧಿಸುವ ಸದಸ್ಯರೂ ಅಲ್ಲಿ ಇದ್ದರು. ಜವಾಹರ್‌ಲಾಲ್ ನೆಹರೂ, ರಾಜೇಂದ್ರ ಪ್ರಸಾದ್, ಸರ್ದಾರ್ ಪಟೇಲ್, ಮೌಲಾನಾ ಅಬುಲ್ ಕಲಂ ಆಝಾದ್ ಮತ್ತು ಶ್ಯಾಮ್ ಪ್ರಸಾದ್ ಮುಖರ್ಜಿ ಅವರಲ್ಲಿ ಪ್ರಮುಖರು. ಪರಿಶಿಷ್ಟ ವರ್ಗಗಳಿಗೆ ಸೇರಿದ ಮೂವತ್ತಕ್ಕೂ ಹೆಚ್ಚು ಸದಸ್ಯರಿದ್ದರು. ಆಂಗ್ಲೋ–ಇಂಡಿಯನ್ ಸಮುದಾಯವನ್ನು ಫ್ರಾಂಕ್ ಆಂಟನಿ ಅವರೂ ಪಾರ್ಸಿ ಜನರನ್ನು ಎಚ್.ಪಿ. ಮೋದಿ ಅವರೂ ಪ್ರತಿನಿಧಿಸಿದ್ದರು. ಆಂಗ್ಲೋ–ಇಂಡಿಯನ್ನರ ಹೊರತಾದ ಎಲ್ಲ ಕ್ರೈಸ್ತರನ್ನು ಪ್ರತಿನಿಧಿಸಿದ ಖ್ಯಾತ ಕ್ರೈಸ್ತರಾದ ಹರೇಂದ್ರ ಕುಮಾರ್ ಮುಖರ್ಜಿಯವರು ಅಲ್ಪಸಂಖ್ಯಾತರ ಸಮಿತಿಯ ಅಧ್ಯಕ್ಷರಾಗಿ ಇದ್ದರು. ಸಂವಿಧಾನ ತಜ್ಞರಾದ ಅಲ್ಲಾಡಿ ಕೃಷ್ಣಸ್ವಾಮಿ, ಡಾ. ಬಿ.ಆರ್. ಅಂಬೇಡ್ಕರ್, ಬಿ.ಎನ್. ರಾಜು ಮತ್ತು ಕೆ.ಎಂ. ಮುನ್ಷಿ ಅವರೂ ಸಭೆಯ ಸದಸ್ಯರಾಗಿದ್ದರು. ಸರೋಜಿನಿ ನಾಯ್ಡು ಮತ್ತು ವಿಜಯಲಕ್ಷ್ಮಿ ಪಂಡಿತ್ ಅವರು ಪ್ರಮುಖ ಮಹಿಳಾ ಸದಸ್ಯರಾಗಿದ್ದರು. ಡಾ. ಸಚ್ಚಿದಾನಂದ ಸಿನ್ಹಾ ಅವರು ಸಂವಿಧಾನ ರಚನಾ ಸಭೆಯ ತಾತ್ಕಲಿಕ ಅಧ್ಯಕ್ಷರಾಗಿದ್ದರು. ನಂತರ, ಡಾ. ರಾಜೇಂದ್ರ ಪ್ರಸಾದ್ ಅವರು ಅಧ್ಯಕ್ಷರಾಗಿಯೂ ಬಿ.ಆರ್. ಅಂಬೇಡ್ಕರ್ ಅವರು ಕರಡು ಸಮಿತಿ ಅಧ್ಯಕ್ಷರಾಗಿಯೂ ಆಯ್ಕೆಯಾದರು.

– ಸಂವಿಧಾನ ರಚನೆಯಾಗಲು ಎರಡು ವರ್ಷ 11 ತಿಂಗಳು 18 ದಿನಗಳ ಕಾಲ ಹಿಡಿಯಿತು. ಒಟ್ಟು ಸಂವಿಧಾನ ರಚನಾ ಸಮಿತಿಯು 166 ದಿನ ಸಮಾವೇಶಗೊಂಡಿತು. ಈ ಸಮಾವೇಶಗಳಿಗೆ ಸಾರ್ವಜನಿಕರಿಗೂ ಹಾಗು ಪತ್ರಕರ್ತರಿಗೂ ಪ್ರವೇಶವಿತ್ತು.

– ಭಾರತದ ಸಂವಿಧಾನದ ಪೀಠಿಕೆ ಹೀಗಿದೆ: 'ಭಾರತ ವಾಸಿಗಳಾದ ನಾವು, ಭಾರತವನ್ನು ಸಾರ್ವಭೌಮ ಸಮಾಜವಾದಿ ಜಾತ್ಯಾತೀತ (1976ರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರಿಂದ ಸೇರಿಸಲ್ಪಟ್ಟದ್ದು) ಲೋಕತಂತ್ರಿಕ ಗಣತಂತ್ರವನ್ನಾಗಿ ವಿಧಿಯುಕ್ತವಾಗಿ ಸ್ಥಾಪಿಸಿ, ಅದರ ಎಲ್ಲಾ ಪ್ರಜೆಗಳಿಗೆ ಈ ಕೆಳಗಿನ ಹಕ್ಕುಗಳಾದ: ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ವಿಚಾರ, ಅಭಿವ್ಯಕ್ತಿ, ನಂಬಿಕೆ, ಭಕ್ತಿ ಮತ್ತು ಆರಾಧನೆಗಳಲ್ಲಿ ಸ್ವಾತಂತ್ರ್ಯ; ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಗಳನ್ನು ದೊರಕಿಸಿ, ವೈಯುಕ್ತಿಕ ಘನತೆ ಮತ್ತು ದೇಶದ ಒಗ್ಗಟ್ಟು ಮತ್ತು ಐಕ್ಯತೆಗೆ ಎಲ್ಲರಲ್ಲೂ ಭ್ರಾತೃತ್ವತೆ ಯನ್ನು ಪ್ರೋತ್ಸಾಹಿಸಲು ನಿರ್ಧರಿಸಿ, ನಮ್ಮ ಸಂವಿಧಾನ ರಚನಾ ಸಭೆಯಲ್ಲಿ ಈ 1949ರ ನವೆಂಬರ್ ಮಾಹೆಯ 26ನೇ ದಿನದಂದು, ನಾವಾಗಿ ನಾವೇ ಈ ಸಂವಿಧಾನವನ್ನು ಸ್ವೀಕರಿಸಿ, ಶಾಸನವನ್ನಾಗಿ ವಿಧಿಸಿಕೊಳ್ಳುತ್ತೇವೆ.

ಆದರೂ ನಮ್ಮ ಸಂವಿಧಾನದ ಪೀಠಿಕೆಯು ಭಾರತದ ಸಂವಿಧಾನದ ಒಂದು ಭಾಗವಲ್ಲ. ಏಕೆಂದರೆ ಇದನ್ನು ನ್ಯಾಯಾಲಯದಲ್ಲಿ ಪ್ರಯೋಗಿಸಲು ಸಾಧ್ಯವಿಲ್ಲ. ಹಾಗಿದ್ದರೂ, ಸಂವಿಧಾನದಲ್ಲಿ ದ್ವಂದ್ವ ಇರುವಂತೆ ಕಂಡುಬರುವಲ್ಲಿ ಪೀಠಿಕೆಯನ್ನು ಉಪಯೋಗಿಸಿ ದ್ವಂದ್ವ ನಿವಾರಿಸಬಹುದಾದ ಕಾರಣ ಸರ್ವೋಚ್ಚ ನ್ಯಾಯಾಲಯವು ಪೀಠಿಕೆಯನ್ನು ಸಂವಿಧಾನದ ಒಂದು ಅಂಗವಾಗಿ ಪರಿಗಣಿಸಿದೆ. ಸಂವಿಧಾನದ ಮೂಲ ಪೀಠಿಕೆಯ ತಿದ್ದುಪಡಿ ಇದಕ್ಕೆ ಉದಾಹರಣೆ, 'ಕೇಶವಾನಂದ ಭಾರತಿ ಮತ್ತು ಕೇರಳ ಸರ್ಕಾರ' ಪ್ರಕರಣ. ಅದಾಗ್ಯೂ, ಪೀಠಿಕೆಯನ್ನು ಸಂವಿಧಾನದ ಲೇಖನದಲ್ಲಿ ದ್ವಂದ್ವ ಇದ್ದಾಗ ಮಾತ್ರ, ಮತ್ತಷ್ಟು ಅರ್ಥವತ್ತಾಗಿಸುವ ಸಾಧನವನ್ನಾಗಿ ಬಳಸಬಹುದೇ ಹೊರತು, ಹಕ್ಕು ಸಾಧಿಸುವ ಸಂವಿಧಾನದ ಒಂದು ಪ್ರತ್ಯೇಕ ವಿಭಾಗವೆಂದು ಪರಿಗಣಿಸಲಾಗದು. ಪೀಠಿಕೆಯ ಮೂಲಪ್ರತಿಯಲ್ಲಿ "ಸಾರ್ವಭೌಮ ಪ್ರಜಾಪ್ರಭುತ್ವ ಗಣರಾಜ್ಯ" ಎಂದಿತ್ತು. ಎರಡು ಹೆಚ್ಚಿನ ಪದಗಳಾದ "ಸಮಾಜವಾದಿ" ಮತ್ತು "ಜಾತ್ಯಾತೀತ" ಪದಗಳನ್ನು 1976ರಲ್ಲಿ ಸಂವಿಧಾನದ 42ನೆ ತಿದ್ದುಪಡಿಯಲ್ಲಿ ಸೇರಿಸಲಾಯಿತು.

– ಭಾರತದ ಎಲ್ಲ 18 ವರ್ಷಗಳ ವಯೋಮಿತಿಯ ಮೇಲಿರುವ ಕಾನೂನುಬದ್ಧ ಮತ ಚಲಾಯಿಸುವ ಅಧಿಕಾರ ಹೊಂದಿರುವ ಪ್ರಜೆಗಳು ಧರ್ಮ, ಜಾತಿ, ಮತ, ಲಿಂಗ ಅಥವಾ ಶಿಕ್ಷಣ ಮಟ್ಟದ ಭೇದವಿಲ್ಲದೇ ಮತ ಚಲಾಯಿಸುವ ಹಕ್ಕನ್ನು ಹೊಂದಿದ್ದಾರೆ. ಪ್ರಜಾಪ್ರಭುತ್ವದ ಗಣತಂತ್ರದಲ್ಲಿ, ಆ ರಾಜ್ಯದ ಮುಖ್ಯಸ್ತನನ್ನು ಒಂದು ನಿರ್ದಿಷ್ಟ ಅವಧಿಗೆ ಮಾತ್ರ ಆರಿಸಲಾಗುವುದು. ರಾಷ್ಟ್ರಪತಿಯನ್ನು 5 ವರ್ಷಗಳ ಒಂದು ನಿರ್ಧಿಷ್ಟ ಅವಧಿಗೆ ಚುನಾಯಿಸಲಾಗುವುದು.

# ಲಾಲ್ ಕೃಷ್ಣ ಅಡ್ವಾಣಿ



ಲಾಲ್ ಕೃಷ್ಣ ಅಡ್ವಾಣಿ (ಜನನ 8 ನವೆಂಬರ್ 1927) ಇವರು ಒಬ್ಬ ಭಾರತೀಯ ರಾಜಕಾರಣಿಯಾಗಿದ್ದು, ಅವರು 2002 ರಿಂದ 2004 ರವರೆಗೆ ಭಾರತದ 7 ನೇ ಉಪ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಅಡ್ವಾಣಿ ಅವರು ಸಹ-ಸಂಸ್ಥಾಪಕರಲ್ಲಿ ಒಬ್ಬರು ಮತ್ತು ಭಾರತೀಯ ಜನತಾ ಪಕ್ಷದ ಹಿರಿಯ ನಾಯಕರಾಗಿದ್ದಾರೆ. ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘ, ಸ್ವಯಂಸೇವಕ ಸಂಘಟನೆಯ ದೀರ್ಘಕಾಲ ಸದಸ್ಯರಾಗಿದ್ದಾರೆ. ಅವರು 1998 ರಿಂದ 2004 ರವರೆಗೆ ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ ಸರ್ಕಾರದಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಗೃಹ ವ್ಯವಹಾರಗಳ ಸಚಿವರಾಗಿದ್ದಾರೆ. ಅವರು 10 ನೇ ಲೋಕಸಭೆ ಮತ್ತು 14 ನೇ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು ಮತ್ತು ಈ ಹುದ್ದೆಯ ದೀರ್ಘಾವಧಿಯ ವ್ಯಕ್ತಿಯಾಗಿದ್ದಾರೆ. 2009ರಲ್ಲಿ ಬಿಜೆಪಿಯ ಪ್ರಧಾನಿ ಅಭ್ಯರ್ಥಿಯಾಗಿದ್ದರು.

ಅಡ್ವಾಣಿಯವರು ತಮ್ಮ ರಾಜಕೀಯ ವೃತ್ತಿಜೀವನವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರಾಗಿ ಪ್ರಾರಂಭಿಸಿದರು. ಅವರು, ಅಟಲ್ ಬಿಹಾರಿ ವಾಜಪೇಯಿ ಅವರೊಂದಿಗೆ, 1984 ರಲ್ಲಿ 2 ಸ್ಥಾನಗಳಿಂದ 1998 ರಲ್ಲಿ 182 ಸ್ಥಾನಗಳಿಗೆ ಬಿಜೆಪಿಯನ್ನು ಹೆಚ್ಚಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. 2015 ರಲ್ಲಿ ಅವರಿಗೆ ಭಾರತದ ಎರಡನೇ ಅತ್ಯುನ್ನತ ನಾಗರಿಕ ಗೌರವವಾದ ಪದ್ಮವಿಭೂಷಣವನ್ನು ನೀಡಲಾಯಿತು. ಅವರು ತಮ್ಮ ವೃತ್ತಿಜೀವನದಲ್ಲಿ ಹಲವಾರು ಹುದ್ದೆಗಳನ್ನು ಅಲಂಕರಿಸಿದ್ದಾರೆ.

## ಆರಂಭಿಕ ಮತ್ತು ವೈಯಕ್ತಿಕ ಜೀವನ

ಎಲ್‌ಕೆ ಅಡ್ವಾಣಿ ಅವರು ಬ್ರಿಟಿಷ್ ಇಂಡಿಯಾದ ಸಿಂಧ್‌ನ ಕರಾಚಿಯಲ್ಲಿ ಸಿಂಧಿ ಹಿಂದೂ ಉದ್ಯಮಿಗಳ ಕುಟುಂಬದಲ್ಲಿ ಪೋಷಕರಾದ ಕಿಶನ್‌ಚಂದ್ ಡಿ. ಅಡ್ವಾಣಿ ಮತ್ತು ಜ್ಞಾನಿ ದೇವಿ ಅವರಿಗೆ ಜನಿಸಿದರು. ಅವರು ತಮ್ಮ ಆರಂಭಿಕ ಶಾಲಾ ಶಿಕ್ಷಣವನ್ನು ಕರಾಚಿ, ಸಿಂಧ್‌ನ ಸೇಂಟ್ ಪ್ಯಾಟ್ರಿಕ್ಸ್ ಹೈಸ್ಕೂಲ್‌ನಿಂದ ಪೂರ್ಣಗೊಳಿಸಿದರು ಮತ್ತು ನಂತರ ಸಿಂಧ್‌ನ ಹೈದರಾಬಾದ್‌ನ ಸರ್ಕಾರಿ ಕಾಲೇಜಿನಲ್ಲಿ ಸೇರಿಕೊಂಡರು. ವಿಭಜನೆಯ ಸಮಯದಲ್ಲಿ ಅವರ ಕುಟುಂಬವು ಭಾರತಕ್ಕೆ ವಲಸೆ ಬಂದಿತು, ಬಾಂಬೆಯಲ್ಲಿ ನೆಲೆಸಿ ಅವರು ಬಾಂಬೆ ವಿಶ್ವವಿದ್ಯಾಲಯದ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದರು., ಅಲ್ಲಿ ಅವರು ದಿವಾನ್ ಪರ್ಮಾನಂದ್ ಗಂಗ್ವಾನಿ ಅವರೊಂದಿಗೆ ಸ್ನೇಹ ಬೆಳೆಸಿದರು ಮತ್ತು ಅವರನ್ನು ರಾಮ್ ಜೇಠ್ಮಲಾನಿ ಮತ್ತು ಎಕೆ ಬ್ರೋಹಿ ಅವರು ಸರ್ಕಾರಿ ಕಾನೂನು ಕಾಲೇಜು ನಿರ್ಮಿಸಿದ ಅತ್ಯುತ್ತಮ ವಕೀಲರು ಎಂದು ಪರಿಗಣಿಸಿದರು.

ಅಡ್ವಾಣಿಯವರು ಫೆಬ್ರವರಿ 1965 ರಲ್ಲಿ ಕಮಲಾ ಅಡ್ವಾಣಿ ಅವರನ್ನು ವಿವಾಹವಾದರು. ಅವರಿಗೆ ಜಯಂತ್ ಎಂಬ ಮಗ ಮತ್ತು ಪ್ರತಿಭಾ ಎಂಬ ಮಗಳು ಇದ್ದಾರೆ. ಪ್ರತಿಭಾ ಅಡ್ವಾಣಿ ಟಿವಿ ಧಾರಾವಾಹಿ ಕಾರ್ಯಕ್ರಮಗಳನ್ನು ನಿರ್ಮಿಸುತ್ತಾರೆ ಮತ್ತು ಅವರ ರಾಜಕೀಯ ಚಟುವಟಿಕೆಗಳಲ್ಲಿ ತನ್ನ ತಂದೆಯನ್ನು ಬೆಂಬಲಿಸುತ್ತಿದ್ದರು. ಅವರ ಪತ್ನಿ ವಯಸ್ಸಾದ ಕಾರಣ 6 ಏಪ್ರಿಲ್ 2016 ರಂದು ನಿಧನರಾದರು.

## ರಾಜಕೀಯ ವೃತ್ತಿ

ಅಡ್ವಾಣಿ 1941 ರಲ್ಲಿ 14 ವರ್ಷದ ಬಾಲಕನಾಗಿದ್ದಾಗ ರಾಷ್ಟ್ರೀಯ ಸ್ವಯಂಸೇವಕ ಸಂಘ (RSS) ಗೆ ಸೇರಿದರು. ಅವರು ಕರಾಚಿ ಶಾಖೆಯ ಪ್ರಚಾರಕ (ಪೂರ್ಣ ಸಮಯದ ಕೆಲಸಗಾರ) ಆದರು ಮತ್ತು ಅಲ್ಲಿ ಹಲವಾರು ಶಾಖಾಗಳನ್ನು ಅಭಿವೃದ್ಧಿಪಡಿಸಿದರು. ವಿಭಜನೆಯ ನಂತರ, ಅಡ್ವಾಣಿಯವರನ್ನು ರಾಜಸ್ಥಾನದ ಮತ್ಸ್ಯ–ಆಳ್ವಾರ್‌ಗೆ ಪ್ರಚಾರಕರಾಗಿ ಕಳುಹಿಸಲಾಯಿತು, ಇದು ವಿಭಜನೆಯ ನಂತರ ಕೋಮು ಹಿಂಸಾಚಾರಕ್ಕೆ ಸಾಕ್ಷಿಯಾಯಿತು. ಅವರು 1952 ರವರೆಗೆ ಅಲ್ವಾರ್, ಭರತ್ಪುರ್, ಕೋಟಾ, ಬುಂಡಿ ಮತ್ತು ಝಲಾವರ್ ಜಿಲ್ಲೆಗಳಲ್ಲಿ ಕೆಲಸ ಮಾಡಿದರು.

## ಭಾರತೀಯ ಜನಸಂಘ

ಅಡ್ವಾಣಿ ಭಾರತೀಯ ಜನಸಂಘದ ಸದಸ್ಯರಾದರು, ಇದನ್ನು ಸರಳವಾಗಿ ಜನಸಂಘ ಎಂದೂ ಕರೆಯುತ್ತಾರೆ, ಇದು 1951 ರಲ್ಲಿ ಶ್ಯಾಮ ಪ್ರಸಾದ್ ಮುಖರ್ಜಿಯವರು ಖಖಖ ಸಹಯೋಗದೊಂದಿಗೆ ಸ್ಥಾಪಿಸಿದ ರಾಜಕೀಯ ಪಕ್ಷವಾಗಿದೆ. ಅವರು ರಾಜಸ್ಥಾನದ ಜನಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎಸ್.ಭಂಡಾರಿಯವರ ಕಾರ್ಯದರ್ಶಿಯಾಗಿ ನೇಮಕಗೊಂಡರು. 1957 ರಲ್ಲಿ ಅವರನ್ನು ಸಂಸದೀಯ ವ್ಯವಹಾರಗಳನ್ನು ನೋಡಿಕೊಳ್ಳಲು ದೆಹಲಿಗೆ ಸ್ಥಳಾಂತರಿಸಲಾಯಿತು. ಅವರು ಶೀಘ್ರದಲ್ಲೇ ಪ್ರಧಾನ ಕಾರ್ಯದರ್ಶಿಯಾದರು ಮತ್ತು ನಂತರ, ಜನಸಂಘದ ದೆಹಲಿ ಘಟಕದ ಅಧ್ಯಕ್ಷರಾದರು. 1966 ರಿಂದ 1967 ರ ಅವಧಿಯಲ್ಲಿ ಅವರು ಮಧ್ಯಂತರ ದೆಹಲಿ ಮೆಟ್ರೋಪಾಲಿಟನ್ ಕೌನ್ಸಿಲ್‌ನಲ್ಲಿ ಭಾರತೀಯ ಜನಸಂಘದ ನಾಯಕರಾಗಿ ಸೇವೆ ಸಲ್ಲಿಸಿದರು. 1967 ರ ಚುನಾವಣೆಯ ನಂತರ, ಅವರು ಮೊದಲ ದೆಹಲಿ ಮೆಟ್ರೋಪಾಲಿಟನ್ ಕೌನ್ಸಿಲ್‌ನ ಅಧ್ಯಕ್ಷರಾಗಿ ಆಯ್ಕೆಯಾದರು. 1970 ರವರೆಗೆ ಸೇವೆ ಸಲ್ಲಿಸಿದರು. ಅವರು ಖಖಖ ಸಾಪ್ತಾಹಿಕ ಆರ್ಗನೈಸರ್ ಅನ್ನು ಸಂಪಾದಿಸುವಲ್ಲಿ ಏ ಖ ಮಲ್ಕಾನಿಗೆ ಸಹಾಯ ಮಾಡಿದರು ಮತ್ತು 1966 ರಲ್ಲಿ ರಾಷ್ಟ್ರೀಯ ಕಾರ್ಯಕಾರಿಣಿಯ ಸದಸ್ಯರಾದರು.

ಅವರು 1970 ರಿಂದ ಆರು ವರ್ಷಗಳ ಅವಧಿಗೆ ದೆಹಲಿಯಿಂದ ರಾಜ್ಯಸಭೆಯ ಸದಸ್ಯರಾದರು. ಜನಸಂಘದಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ನಂತರ, ಅವರು 1973 ರಲ್ಲಿ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಕಾನ್ಪುರದ ಅಧಿವೇಶನದಲ್ಲಿ ಅದರ ಅಧ್ಯಕ್ಷರಾದರು. ಪಕ್ಷದ ನಿರ್ದೇಶನಗಳನ್ನು ಉಲ್ಲಂಘಿಸಿದ ಮತ್ತು ಪಕ್ಷದ ಹಿತಾಸಕ್ತಿಗಳಿಗೆ ವಿರುದ್ಧವಾಗಿ ವರ್ತಿಸಿದ ಕಾರಣಕ್ಕಾಗಿ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಸ್ಥಾಪಕ ಸದಸ್ಯ ಮತ್ತು ಹಿರಿಯ ನಾಯಕ ಬಲರಾಜ್ ಮಧೋಕ್ ಅವರನ್ನು ಉಚ್ಚಾಟಿಸುವುದು ಬಿಜೆಎಸ್ ಅಧ್ಯಕ್ಷರಾಗಿ ಅವರ ಮೊದಲ ಕಾರ್ಯವಾಗಿತ್ತು. ಅವರು 1976 ರಿಂದ 1982 ರವರೆಗೆ ಗುಜರಾತ್‌ನಿಂದ ರಾಜ್ಯಸಭಾ ಸದಸ್ಯರಾಗಿದ್ದರು. ಇಂದಿರಾ ಗಾಂಧಿಯವರ ತುರ್ತು ಪರಿಸ್ಥಿತಿಯ ನಂತರ, ಜನಸಂಘ ಮತ್ತು ಇತರ ಅನೇಕ ವಿರೋಧ ಪಕ್ಷಗಳು ಜನತಾ ಪಕ್ಷದಲ್ಲಿ ವಿಲೀನಗೊಂಡವು. ಅಡ್ವಾಣಿ ಮತ್ತು ಸಹೋದ್ಯೋಗಿ ಅಟಲ್ ಬಿಹಾರಿ ವಾಜಪೇಯಿ 1977ರ ಲೋಕಸಭೆ ಚುನಾವಣೆಯಲ್ಲಿ ಜನತಾ ಪಕ್ಷದ ಸದಸ್ಯರಾಗಿ ಹೋರಾಡಿದರು.

ಅಡ್ವಾಣಿಯವರ ನೇತೃತ್ವದಲ್ಲಿ ಬಿಜೆಪಿಯು ರಾಮ ಜನ್ಮಭೂಮಿಯ ಅಯೋಧ್ಯೆ ವಿವಾದದ ರಾಜಕೀಯ ಮುಖವಾಯಿತು. 1980 ರ ದಶಕದ ಆರಂಭದಲ್ಲಿ, ವಿಶ್ವ ಹಿಂದೂ ಪರಿಷತ್ (VHP) ಅಯೋಧ್ಯೆಯ ಬಾಬರಿ ಮಸೀದಿಯ ಸ್ಥಳದಲ್ಲಿ ಹಿಂದೂ ದೇವತೆ ರಾಮನಿಗೆ ಸಮರ್ಪಿತವಾದ ದೇವಾಲಯವನ್ನು ನಿರ್ಮಿಸಲು ಚಳುವಳಿಯನ್ನು ಪ್ರಾರಂಭಿಸಿತು. ಈ ಸ್ಥಳವು ರಾಮನ ಜನ್ಮಸ್ಥಳವಾಗಿದೆ ಎಂಬ ನಂಬಿಕೆಯ ಆಧಾರದ ಮೇಲೆ ಆಂದೋಲನವು ನಡೆದಿತ್ತು ಹಾಗೂ ಮೊಘಲ್ ಚಕ್ರವರ್ತಿ ಬಾಬರ್‌ನಿಂದ ಕೆಡವಲ್ಪಟ್ಟ ದೇವಾಲಯವೊಂದು ಅಲ್ಲಿ ಇತ್ತು. ಅವರು ಬಾಬರಿ ಮಸೀದಿಯನ್ನು ನಿರ್ಮಿಸಿದಾಗ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಸಂಭವನೀಯ ಉರುಳಿಸುವಿಕೆಯ ಬಗ್ಗೆ ಪ್ರತಿಕ್ರಿಯಿಸದೆ, ಒಮ್ಮೆ ಹಿಂದೂ ರಚನೆಯು ಸ್ಥಳದಲ್ಲಿ ನಿಂತಿದೆ ಎಂಬ ಹೇಳಿಕೆಯನ್ನು ಬೆಂಬಲಿಸಿದೆ. ಬಿಜೆಪಿಯು ಈ ಪ್ರಚಾರದ ಹಿಂದೆ ತನ್ನ ಬೆಂಬಲವನ್ನು ಎಸೆದಿತು ಅದನ್ನು ತಮ್ಮ ಚುನಾವಣಾ ಪ್ರಣಾಳಿಕೆಯ ಭಾಗವಾಗಿ ಮಾಡಿತು, ಇದು 1989 ರ ಸಾರ್ವತ್ರಿಕ ಚುನಾವಣೆಯಲ್ಲಿ ಸಮೃದ್ಧ ಲಾಭಾಂಶವನ್ನು ಒದಗಿಸಿತು. ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತವನ್ನು ಗೆದ್ದರೂ, ಅದು ರಚನೆಗೆ ನಿರಾಕರಿಸಿತು.

ಯಾತ್ರೆಯ ಆರಂಭದ ಬಿಂದುವಾಗಿ ಸೋಮನಾಥನ ಆಯ್ಕೆಯು ಪ್ರಬಲವಾದ ಸಾಂಕೇತಿಕ ಮೌಲ್ಯವನ್ನು ಹೊಂದಿತ್ತು, ಇದು ಹಿಂದೂಗಳ ವಿರುದ್ಧ ಮುಸ್ಲಿಂ ದೌರ್ಜನ್ಯದ ಗುರಿಯಾಗಿದೆ ಎಂದು ಪುನರಾವರ್ತಿತ ಉಲ್ಲೇಖಗಳ ಮೂಲಕ ಸ್ಪಷ್ಟವಾಗಿದೆ... ಅಯೋಧ್ಯೆಯನ್ನು ಮುಸ್ಲಿಂ ಆಕ್ರಮಣದ ಐತಿಹಾಸಿಕ ವಂಶಾವಳಿಯಲ್ಲಿ ಸಂದರ್ಭೋಚಿತಗೊಳಿಸುವುದು ನಂತರ ಸಮಾನಾಂತರವನ್ನು ಎಳೆಯುವ ಮೂಲಕ ಮಂದಿರ ಚಳುವಳಿಗೆ ನ್ಯಾಯಸಮ್ಮತತೆಯನ್ನು ಹುಡುಕುವುದು, ಸೋಮನಾಥ ದೇವಾಲಯದ ಪುನರ್ನಿರ್ಮಾಣದೊಂದಿಗೆ ಸಂಘ ಪರಿವಾರದ ಸಮಾನಾಂತರವಾಗಿದೆ.

**ಎಲ್.ಕೆ.ಅಡ್ವಾಣಿ, ನನ್ನ ದೇಶ ನನ್ನ ಜೀವನ**

ಅಡ್ವಾಣಿ ಅವರು ಕರಸೇವಕರು ಅಥವಾ ಸ್ವಯಂಸೇವಕರನ್ನು ಒಟ್ಟುಗೂಡಿಸಲು "ರಥಯಾತ್ರೆ" ಅಥವಾ ರಥಯಾತ್ರೆಯನ್ನು ಆರಂಭಿಸಿದರು, ಪ್ರಾರ್ಥನೆ ಸಲ್ಲಿಸಲು ಬಾಬರಿ ಮಸೀದಿಗೆ ಸೇರುತ್ತಾರೆ. ರಥದಂತೆ ಅಲಂಕೃತವಾದ ಹವಾನಿಯಂತ್ರಿತ ವ್ಯಾನ್‌ನಲ್ಲಿ ಕೈಗೊಂಡ ಈ ರಥಯಾತ್ರೆಯು ಗುಜರಾತ್‌ನ ಸೋಮನಾಥದಿಂದ ಪ್ರಾರಂಭವಾಯಿತು. ಬಿಹಾರದ ಮುಖ್ಯಮಂತ್ರಿ ಲಾಲು ಪ್ರಸಾದ್ ಯಾದವ್ ಅವರು ನಿಲ್ಲಿಸುವವರೆಗೂ ಉತ್ತರ ಭಾರತದ ಹೆಚ್ಚಿನ ಭಾಗವನ್ನು ಆವರಿಸಿದೆ. ಇದು ಕೋಮುಗಲಭೆಗೆ ಕಾರಣವಾಯಿತು. 1991 ರ ಸಾರ್ವತ್ರಿಕ ಚುನಾವಣೆಯಲ್ಲಿ, ಕಾಂಗ್ರೆಸ್ ನಂತರ ಬಿಜೆಪಿ ಎರಡನೇ ಅತಿ ಹೆಚ್ಚು ಸ್ಥಾನಗಳನ್ನು ಗಳಿಸಿತು.

1992 ರಲ್ಲಿ, ಅಡ್ವಾಣಿ ಅವರು ತಮ್ಮ ಯಾತ್ರೆಯನ್ನು ಕೊನೆಗೊಳಿಸಿದ ಎರಡು ವರ್ಷಗಳ ನಂತರ, ಕಲ್ಯಾಣ್ ಸಿಂಗ್ ನೇತೃತ್ವದ ಬಿಜೆಪಿ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ನೀಡಿದ ಭರವಸೆಯ ಹೊರತಾಗಿಯೂ, ಕಲ್ಯಾಣ್ ಸಿಂಗ್ ಸರ್ಕಾರದ ಸಹಭಾಗಿತ್ವದೊಂದಿಗೆ ಕೋಮುವಾದಿ ಶಕ್ತಿಗಳಿಂದ ಬಾಬರಿ ಮಸೀದಿಯನ್ನು ಕೆಡವಲಾಯಿತು. IPS ಅಧಿಕಾರಿ ಅಂಜು ಗುಪ್ತಾ ಅವರು ಮಸೀದಿ ಧ್ವಂಸಕ್ಕೆ ಮುನ್ನ ಅಡ್ವಾಣಿಯವರು ಪ್ರಚೋದನಕಾರಿ ಭಾಷಣ ಮಾಡಿದ್ದರು ಎಂದು ವರದಿ ಮಾಡಿದ್ದಾರೆ. ಅಡ್ವಾಣಿಯವರು ಬಾಬರಿ ಮಸೀದಿ ಪ್ರಕರಣದಲ್ಲಿ ಆರೋಪಿಗಳಲ್ಲಿದ್ದರು.

30 ಸೆಪ್ಟೆಂಬರ್ 2020 ರಂದು, ಸಿಬಿಐ ವಿಶೇಷ ನ್ಯಾಯಾಲಯವು ಅಡ್ವಾಣಿ ಅವರನ್ನು ಖುಲಾಸೆಗೊಳಿಸಿ ಎಲ್ಲಾ ಆರೋಪಗಳಿಂದ ಅವರನ್ನು ಬಿಡುಗಡೆ ಮಾಡಿತು. ಅಡ್ವಾಣಿಯನ್ನು ಖುಲಾಸೆಗೊಳಿಸುವ ಸಂದರ್ಭದಲ್ಲಿ CBI ನ್ಯಾಯಾಧೀಶರು ಧ್ವಂಸವು ಪೂರ್ವ ಯೋಜಿತವಲ್ಲ ಮತ್ತು ಆರೋಪಿಗಳು "ಜನಸಮೂಹವನ್ನು ತಡೆಯಲು ಪ್ರಯತ್ನಿಸುತ್ತಿದ್ದಾರೆ ಮತ್ತು ಅವರನ್ನು ಪ್ರಚೋದಿಸುವುದಿಲ್ಲ" ಎಂದು ಉಲ್ಲೇಖಿಸಿದ್ದಾರೆ.

1996 ರ ಸಾರ್ವತ್ರಿಕ ಚುನಾವಣೆಯ ನಂತರ, ಬಿಜೆಪಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದರ ಪರಿಣಾಮವಾಗಿ ಸರ್ಕಾರವನ್ನು ರಚಿಸಲು ರಾಷ್ಟ್ರಪತಿಗಳಿಂದ ಆಹ್ವಾನಿಸಲಾಯಿತು. ಆದಾಗ್ಯೂ, ಹವಾಲಾ ಹಗರಣದಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ಅಡ್ವಾಣಿ ಸ್ವತಃ 1996 ರ ಚುನಾವಣೆಯಲ್ಲಿ ಯಾವುದೇ ಕ್ಷೇತ್ರದಿಂದ ಸ್ಪರ್ಧಿಸಲಿಲ್ಲ. ಅಟಲ್ ಬಿಹಾರಿ ವಾಜಪೇಯಿ ಅವರು ಮೇ 1996 ರಲ್ಲಿ ಪ್ರಧಾನ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಆದಾಗ್ಯೂ, ಸರ್ಕಾರವು ಹೆಚ್ಚು ಕಾಲ ಉಳಿಯಲಿಲ್ಲ ಮತ್ತು ವಾಜಪೇಯಿ ಅವರು ಹದಿಮೂರು ದಿನಗಳ ನಂತರ ರಾಜೀನಾಮೆ ನೀಡಿದರು.

**ಮನೆ ಮದ್ದು**

ಒಂದು ಲೋಟ ನೀರಿಗೆ ಶುಂಠಿ, ನಿಂಬೆರಸ, ಕಾಳು ಮೆಣಸು ಮತ್ತು ಬೆಲ್ಲವನ್ನು ಹಾಕಿ ಕುದಿಸಿ ಅದು ಬಿಸಿ ಆರುವ ಮುನ್ನವೇ ಕುಡಿಯುವುದರಿಂದ ನೆಗಡಿ ಮತ್ತು ಕಫ ಕಡಿಮೆಯಾಗುತ್ತದೆ.



# ಕೀಟನಾಶಕಗಳ ಬಳಕೆ
## ವಹಿಸಬೇಕಾದ ಎಚ್ಚರಿಕೆ

– ಡಾ. ಚೇತನ್ ಆನಂದ್ ಟಿ.ಎಂ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ಅರಿವಳಿಕೆ ಶಾಸ್ತ್ರ ವಿಭಾಗ

ಪೈರುಗಳಿಗೆ ಹಾನಿಕಾರಕವಾದ ಮತ್ತು ಜನ ಜೀತನಕ್ಕೆ ಉಪದ್ರವಕಾರಿಯಾದ ಜಂತುಗಳ ನಿರ್ಮೂಲನೆಗಾಗಿ ದಿನನಿತ್ಯ ಅನೇಕ ರಾಸಾಯನಿಕ ಕೀಟನಾಶಕಗಳನ್ನು ಬಳಸಲಾಗುತ್ತದೆ. ನಾವು ಉಪಯೋಗಿಸುವ ಬಹುಪಾಲು ಕೀಟನಾಶಕಗಳು ಸಂಯೋಜಿತವಾದವು. ಈ ರಾಸಾಯನಿಕಗಳ ಪ್ರಭಾವಕ್ಕೆ ಒಳಗಾಗುವ ಕೀಟಗಳು/ಜಂತುಗಳು ಅವುಗಳ ಜೈವಿಕ ಕ್ರಿಯೆಯಲ್ಲಿ ಏರುಪೇರಾಗಿ ಸಾವನಪ್ಪುತ್ತವೆ. ಈ ರಾಸಾಯನಿಕಗಳ ಸಂಪರ್ಕಕ್ಕೆ ಬಂದಾಗ ಮನುಷ್ಯರಲ್ಲೂ ಕೂಡ ಅದೇ ರೀತಿಯ ಪರಿಣಾಮಗಳು ಕಾಣಿಸಿಕೊಳ್ಳಬಹುದು.

**ಕೀಟನಾಶಕಗಳನ್ನು ಅವುಗಳ ಕಾರ್ಯವಿಧಾನಕ್ಕೆ ಅನುಗುಣವಾಗಿ ಈ ಕೆಳಕಂಡ ರೀತಿಯಲ್ಲಿ ವಿಂಗಡಿಸಲಾಗುವುದು.**

1. ಜಠರ ವಿಷಗಳು : ಇವುಗಳನ್ನು ಗಿಡಗಳ ಮೇಲೆ ಸಿಂಪಡಿಸಲಾಗುವುದು. ಎಲೆಗಳನ್ನು ಅಗಿದು ತಿನ್ನುವ ಕೀಟ/ ಜಂತುಗಳ ಮೇಲೆ ಇವು ಮಾರಕವಾಗಿರುತ್ತವೆ.
2. ಸಂಪರ್ಕ ವಿಷಗಳು : ಇವುಗಳನ್ನು ನೇರವಾಗಿ ಕೀಟಗಳ ಮೇಲೆ ಸಿಂಪಡಿಸಲಾಗುತ್ತದೆ. ಎಲೆಗಳನ್ನು ಕೊರೆದು ದ್ರವ ರೂಪದ ಆಹಾರವನ್ನು ಹೀರುವ ಜಾತಿಯ ಕೀಟ/ ಜಂತುಗಳ ಮೇಲೆ ಪರಿಣಾಮಕಾರಿಯಾಗಿರುತ್ತವೆ.
3. ಊಳಿವ ಕೀಟ ನಾಶಕಗಳು : ಇವುಗಳನ್ನು ತುಂತುರು ರೂಪದಲ್ಲಿ ಗಿಡಗಳ ಹೊರಮೈ ಮೇಲೆ ಹರಡಲಾಗುವುದು. ಇದರ ಸಂಪರ್ಕಕ್ಕೆ ಬಂದ ತಕ್ಷಣ ಭಾರಿ ಪ್ರಮಾಣದ ವಿಷವು ಕೀಟಗಳಿಗೆ ತಗಲುತ್ತದೆ.
4. ವ್ಯಾಪಕ ಕೀಟನಾಶಕಗಳು : ಈ ರಾಸಾಯನಿಕಗಳು ಸಸ್ಯದಾದ್ಯಂತ ವ್ಯಾಪಿಸುತ್ತವೆ. ಆಗ ಸಸ್ಯದ ಯಾವುದೆ ಭಾಗವನ್ನು ಕೀಟಗಳು ಸೇವಿಸಿದ್ದಲ್ಲಿ ಅವು ಸಾವನ್ನಪ್ಪುತ್ತವೆ.
5. ಕೀಟನಾಶಕ ಧೂಪಗಳು : ಇವು ಅನಿಲರೂಪದ ಅಥವಾ ಅನಿಲ ಸ್ಥಿತಿ ತಳೆಯುವ ದ್ರವ ರೂಪದ ರಾಸಾಯನಿಕಗಳು. ಉಗ್ರಾಣದಲ್ಲಿ ಕೂಡಿಟ್ಟ ಧಾನ್ಯಗಳ ಸಂರಕ್ಷಣೆಗೆ ಇವು ಸಹಾಯಕಾರಿ.
6. ಆಕರ್ಷಕಗಳು : ಆಹಾರ ಅಂಶವಿರುವ ಸಸ್ಯದ ಭಾಗಗಳನ್ನು ಕೊರೆದು ತಮ್ಮೆಡೆಗೆ ಕೀಟಗಳನ್ನು ಆಕರ್ಷಿಸುವ ರಾಸಾಯನಿಕಗಳು.
7. ವಿಕರ್ಷಕಗಳು : ಕೀಟ/ ಜಂತುಗಳು ಸಸ್ಯದ ಬಳಿಗೆ ಸುಳಿಯದಂತೆ ತಡೆಗಟುವ ರಾಸಾಯನಿಕಗಳು.

ಮನುಷ್ಯನು ಹೆಚ್ಚಿನ ಪ್ರಮಾಣದಲ್ಲಿ ಈ ರಾಸಾಯನಿಕಗಳ ಸಂಪರ್ಕಕ್ಕೆ ಬಂದಾಗ, ಕೀಟಗಳ ತೇಲೆ ಕಂಡು ಬರುವ ರೀತಿಯ ದುಷ್ಪರಿಣಾಮಗಳು ಮನುಷ್ಯನಲ್ಲಿ ಕಂಡುಬರಬಹುದು. ಆದ್ದರಿಂದ ಕೀಟನಾಶಕಗಳ ತಿಳುವಳಿಕೆ, ಅವುಗಳನ್ನು ಸರಿಯಾದ ವಿಧಾನದಲ್ಲಿ ಸಂಗ್ರಹಿಸಿ, ಉಪಯೋಗಿಸಿ ಮತ್ತು ಅದರ ಡಬ್ಬಿಗಳನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡುವುದರ ಬಗೆಗಿನ ಅರಿವು ಅತ್ಯಗತ್ಯ. ಕೀಟನಾಶಕಗಳನ್ನು ಉಪಯೋಗಿಸುವವರು ಅದರ ಬಗ್ಗೆ ತಿಳುವಳಿಕೆ ಮತ್ತು ತರಬೇತಿ ಹೊಂದುವುದು ಉತ್ತಮ.

**ಅಗತ್ಯ ಎಚ್ಚರಿಕೆಗಳು:**

**ಸಂಗ್ರಹಣೆ:**

– ಕ್ರಿಮಿನಾಶಕಗಳ ಡಬ್ಬಿಯ ಮೇಲೆ ನೀಡುವ ಸೂಚನೆಗಳ ಪ್ರಕಾರ ಅವುಗಳನ್ನು ಸಂಗ್ರಹಿಸಬೇಕು.
– ಅಗತ್ಯಕ್ಕಿಂತ ಹೆಚ್ಚು ರಾಸಾಯನಿಕಗಳನ್ನು ಶೇಖರಿಸಬೇಡಿ.
– ಜಾನುವಾರುಗಳ ಹತ್ತಿರ ಅಥವಾ ಆವಾಸ ಸ್ಥಾನಗಳಲ್ಲಿ ಈ ರಾಸಾಯನಿಕಗಳನ್ನು ಇಡಬಾರದು.
– ಮಕ್ಕಳು ಅಥವಾ ಕ್ರಿಮಿನಾಶಕಗಳ ಬಗ್ಗೆ ತಿಳುವಳಿಕೆ ಇಲ್ಲದವರನ್ನು ಅದರ ಹತ್ತಿರ ಹೋಗದಂತೆ ನೋಡಿಕೊಳ್ಳಬೇಕು.

**ಸುರಕ್ಷಿತ ಬಳಕೆಯ ವಿಧಾನಗಳು :**

**ಸಿಂಪಡಣೆಗೆ ಮುನ್ನ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು:**

- ಚೀಟಿಯಲ್ಲಿರುವ ಸಲಹೆಗಳನ್ನು ಎಚ್ಚರಿಕೆಯಿಂದ ಓದಿರಿ.
- ಸಿಂಪಡಣೆಗೆ ಮುಂಚೆ ಅಗತ್ಯವಿರುತ ಎಲ್ಲಾ ಸೂಚನೆಗಳನ್ನು ಪರಿಕ್ಷಿಸಿ.
- ಸಿಂಪಡಣಾ ಯಂತ್ರವು ಸೇರಿದಂತೆ, ಸಿಂಪಡಣೆಗೆ ಸೂಕ್ತ ರೀತಿಯಲ್ಲಿ ಯಂತ್ರ ಅಳತಡಿಸಿರುವುದನ್ನು ಪರೀಕ್ಷಿಸಿಕೊಳ್ಳಿ
- ರಕ್ಷಣೆಯ ವಸ್ತ್ರ, ಮಾಸ್ಕ್, ಮತ್ತುಇತರೆ ಸುರಕ್ಷತೆಯ ಉಪಕರಣಗಳನ್ನು ಪರೀಕ್ಷಿಸಿ.
- ಸಿಂಪಡಣೆಗೆ ಮುನ್ನ ಸಿಂಪಡಿಸುವ ಯಂತ್ರವನ್ನು ಪರೀಕ್ಷಿಸಿ ಉಪಗೋಗಿಸಿರಿ.
- ಸಿಂಪಡಣೆ ಯಾತ ರೀತಿಯಲ್ಲಿ ಕೈಗೊಳ್ಳಬೇಕೆಂಬ ವಿಧಾನವನ್ನು ನಿಶ್ಚಯಿಸಿರಿ.
- ರಾಸಾಯನಿಕ ಡಬ್ಬಿಯನ್ನು ಜಾಗರೂಕತೆಯಿಂದ ಚೆಲ್ಲದಂತೆ ಮುಚ್ಚಳ ತೆಗೆಯಿರಿ.
- ಹೊರ ಆತರಣದಲ್ಲಿ ಅಥವಾ ಸರಿಯಾಗಿ ಗಾಳಿಯಾಡುವ ಪ್ರದೇಶಲ್ಲಿ ರಾಸಾಯನಿಕಗಳ ಮಿಶ್ರಣ ಮಾಡಬೇಕು.
- ಹೆಚ್ಚಿನ ಗಾಳಿಯ ಒತ್ತಡದಿಂದ, ರಾಸಾಯನಿಕವು ಅನಗತ್ಯವಾಗಿ ಗಾಳಿಯಲ್ಲಿ ಸೇರದಂತೆ ಸೂಕ್ತ ವಾತಾವರಣವಿರುದನ್ನು ಖಾತರಿಪಡಿಸಿಕೊಳ್ಳಿ.
- ಗಾಳಿ ವೇಗವಾಗಿ ಬೀಸುತ್ತಿರುವಾಗ, ರಾಸಾಯನಿಕವನ್ನು ಮಿಶ್ರಣ ಮಾಡುವುದಾಗಲಿ ಅಥವಾ ಯಂತ್ರದಲ್ಲಿ ತುಂಬುವುದಾಗಲಿ ಮಾಡಬಾರದು.

**ಸಿಂಪಡಣೆಯ ಸಮಯದಲ್ಲಿ ಕೈಗೊಳ್ಳಬೇಕಾದ ಎಚ್ಚರಿಕೆ ಕ್ರಮಗಳು.**

- ಸೂಕ್ತವಾದ ಸುರಕ್ಷತೆಯ ವಸ್ತ್ರಗಳನ್ನು ಧರಿಸಬೇಕು.
- ಸಿಂಪಡಣೆ ಸಮಯದಲ್ಲಿ ಊಟ ಮಾಡುವುದಾಗಲಿ, ನೀರು ಕುಡಿಯುವುದಾಗಲಿ ಮಾಡಕೂಡದು.
- ಗಾಳಿಯ ವಿರುದ್ಧ ದಿಕ್ಕಿನಲ್ಲಿ ಸಿಂಪಡಣೆ ಮಾಡಕೂಡದು.
- ಸರಿಯಾದ ಪ್ರಮಾಣದಲ್ಲಿ ಮತ್ತು ಅಗತ್ಯವಿರುವಷ್ಟು ಮಾತ್ರ ರಾಸಾಯನಿಕವನ್ನು ಮಿಶ್ರಣ ಮಾಡಬೇಕು
- ಸಿಂಪಡಣೆಯ ಸಮಯದಲ್ಲಿ ಸಿಂಪಡಿಸುವವರು ಸೂಕ್ತ ಮುಂಜಾಗ್ರತೆ ವಹಿಸದೆ ಕಾಯಿಲೆಗೆ ತುತ್ತಾದಲ್ಲಿ ಕೂಡಲೇ ಸೂಕ್ತ ಚಿಕಿತ್ಸೆಗೆ ಕರೆದೊಯ್ಯಬೇಕು.

**ಸಿಂಪಡಣೆಯ ನಂತರ ತೆಗೆದುಕೊಳ್ಳಬೇಕಾದ ಕ್ರಮಗಳು:**

- ರಾಸಾಯನಿಕಗಳ ಖ್ಯಾ ಡಬ್ಬಿಯನ್ನು, ಸಿಂಪಡಣಾ ಉಪಕರಣವನ್ನು ತೊಳೆದ ನೀರನ್ನು ಹಾಗೂ ಉಳಿದ ರಾಸಾಯನಿಕವನ್ನು ಸರಿಯಾಗಿ ಸುರಕ್ಷಿತ ಪ್ರದೇಶದಲ್ಲಿ ವಿಲೇವಾರಿ ಮಾಡಬೇಕು.
- ಸಾಬೂನು ನೀರಿನಿಂದ ಕೈಗಳನ್ನು ಚೆನ್ನಾಗಿ ತೊಳೆಯಬೇಕು. ನಂತರದಲ್ಲಿ ಮುಖ, ಕುತ್ತಿಗೆ ಮತ್ತು ಇತರೆ ರಾಸಾಯನಿಕ ಸೋಂಕಿತ ಭಾಗಗಳನ್ನು ಸ್ವಚ್ಛಸೊಳಿಸಬೇಕು.
- ಸಿಂಪಡಿಸಿದ ಬೆಳೆ ಕ್ಷೇತ್ರವನ್ನು ಗುರುತು ಮಾಡಿ, ಸಿಂಪಡಣಾ ದಾಖಲಾತಿಯನ್ನು (ಸಿಂಪಡಿಸಿದ ರಾಸಾಯಾನಿಕ, ಪ್ರಮಾಣ, ದಿನಾಂಕ) ಬರೆದಿಡಬೇಕು.

**ಪ್ರಥಮ ಚಿಕಿತ್ಸೆ:**

ರಾಸಾಯನಿಕ ಸೇವನೆಯಿಂದ ಅಥವಾ ಸೋಂಕಿನಿಂದ ಬಳಲುತ್ತಿರುವ ವ್ಯಕ್ತಿಯನ್ನು ಮೊದಲು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಬೇಕು. ನಂತರ ತಕ್ಷಣವೇ ರೋಗಿಯನ್ನು ಆಸ್ಪತ್ರೆಗೆ ಕೊಂಡೊಯ್ಯಲು ವ್ಯತಸ್ಥೆ ಮಾಡಬೇಕು. ಆ ಸಮಯದಲ್ಲಿ ಈ ಕೆಳಗಿನ ಪ್ರಥಮ ಚಿಕಿತ್ಸೆಯನ್ನು ನೀಡಬಹುದು.

1. ತ್ವಚೆಗೆ ಕ್ರಿಮಿನಾಶಕ ಸಂಪರ್ಕವಾದಾಗ : ಧರಿಸಿದ ಬಟ್ಟೆಗಳನ್ನು ತೆಗೆದುಹಾಕಿ, ದೇಹವನ್ನು ಸಾಬೂನು ನೀರಿನಿಂದ ತೊಳೆಯಬೇಕು.
2. ಕೀಟನಾಶಕ ಸೇವಿಸಿದ್ದಲ್ಲಿ : ತಕ್ಷಣ ಹತ್ತಿರದಲ್ಲಿರುವ ಆರೋಗ್ಯ ಕೇಂದ್ರದ ತುರ್ತು ವಾಹನದ ಬರುವಿಕೆಗೆ ದೂರವಾಣಿ ಕರೆ ಮಾಡುವುದು.

ವ್ಯಕ್ತಿಯು ಪ್ರಜ್ಞಾಹೀನ ಸ್ಥಿತಿಯಲ್ಲಿರುವಾಗ ವಾಂತಿ ಮಾಡಿಸಬಾರದು. (ಉಪ್ಪು ನೀರು ಕೊಟ್ಟು ವಾಂತಿ ಮಾಡಿಸುವುದರಿಂದ, ರಾಸಾಯನಿಕವು ಶ್ವಾಸಕೋಶ ಸೇರಿ ಉಸಿರಾಟಕ್ಕೆ ತೊಂದರೆಯಾಗಬಹುದು.)

ರೋಗಿಯನ್ನು ಸಾಗಿಸುವಾಗ, ಎಡ ಬದಿಗೆ ಮಲಗಿಸಿ, ತಲೆಯು ದೇಹದ ಇತರೆ ಭಾಗಕ್ಕಿಂತ ಕೆಳಗಿರುತಂತೆ ನೋಡಿಕೊಳ್ಳಬೇಕು. ಆಸ್ಪತ್ರೆಗೆ ಸಾಗಿಸುವಲ್ಲಿ ಯಾವುದೆ ವಿಳಂಬ ಮಾಡಬಾರದು. ॐ



# ಅಂತರಾಷ್ಟ್ರೀಯ ಪುರುಷರ ದಿನ

ಪ್ರತಿ ವರ್ಷ ನವೆಂಬರ್ 19 ರಂದು ಅಂತರರಾಷ್ಟ್ರೀಯ ಪುರುಷರ ದಿನವನ್ನು ಆಚರಿಸಲಾಗುತ್ತದೆ. ತಮ್ಮ ಕುಟುಂಬಗಳು, ಸಮುದಾಯಗಳು ಮತ್ತು ಸಮಾಜಕ್ಕೆ ಪುರುಷರು ನೀಡಿದ ಕೊಡುಗೆಗಳನ್ನು ಗುರುತಿಸಲು ಜಗತ್ತು ಅಂತರರಾಷ್ಟ್ರೀಯ ಪುರುಷರ ದಿನವನ್ನು ಆಚರಿಸುತ್ತದೆ. ನಮ್ಮ ಸಮಾಜದಲ್ಲಿ ಮಹಿಳೆ (Women) ಮತ್ತು ಪುರುಷ (Men) ಇಬ್ಬರೂ ವಾಹನದ ಎರಡು ಚಕ್ರಗಳಿದ್ದಂತೆ. ಒಟ್ಟಿಗೆ ಸಾಮರಸ್ಯದಿಂದ ಇದ್ದರೆ ಮಾತ್ರ ಸಮಾಜಕ್ಕೆ (Social) ಒಳ್ಳೆಯದಾಗಲು, ಪ್ರಪಂಚ ಅಭಿವೃದ್ಧಿ ಹೊಂದಲು ಸಾಧ್ಯ.

ವಿಶ್ವ ಪುರುಷರ ದಿನವೂ "ಅಂತರರಾಷ್ಟ್ರೀಯ ಮಹಿಳಾ ದಿನ" ದಂತೆ ಮಹತ್ವದ್ದೇ ಆಗಿದೆ. ಇದು ನಮ್ಮ ಪ್ರಪಂಚವು ನಮ್ಮ ಸಮುದಾಯದಲ್ಲಿ ಲಿಂಗ ಸಮಾನತೆಗಾಗಿ ಹೋರಾಡಿ ಶ್ರಮಿಸುತ್ತದೆ. ಪ್ರಪಂಚ ಸುಗಮವಾಗಿ ಸಾಗಲು ಮಹಿಳೆ ಮತ್ತು ಪುರುಷ ಇಬ್ಬರೂ ಬೇಕು. ಆದ ಕಾರಣ ಪ್ರತಿ ವರ್ಷ ನವೆಂಬರ್ 19 ರಂದು ಅಂತಾರಾಷ್ಟ್ರೀಯ ಪುರುಷರ ದಿನವನ್ನಾಗಿ (International Men's Day History) ಆಚರಿಸಲಾಗುತ್ತದೆ. ಈ ದಿನವನ್ನು ಜಗತ್ತು ಮಾನವೀಯತೆಯ ಅರ್ಧದಷ್ಟು ಜನರಿಗೆ ಮೀಸಲಿಟ್ಟಿದೆ. ಈ ದಿನವು ಪುರುಷರ ಜವಾಬ್ದಾರಿಯ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ ಸ್ವಯಂ-ಪ್ರೇರಣೆಯನ್ನು ಉತ್ತೇಜಿಸುತ್ತದೆ.

ಇದರಿಂದಾಗಿ ಎಲ್ಲಾ ವ್ಯಕ್ತಿಗಳು ತಮ್ಮ ಸೀಮಿತ ಸಾಮರ್ಥ್ಯದಲ್ಲಿ ಭಾಗವಹಿಸಬಹುದು. ಸಮಾಜಕ್ಕೆ ಉತ್ತಮ ಕೊಡುಗೆ ನೀಡಬಹುದು. ಅಂತರಾಷ್ಟ್ರೀಯ ಪುರುಷರ ದಿನದ ಆಚರಣೆಯು ಪ್ರತಿಯೊಬ್ಬ ಮನುಷ್ಯನಿಗೆ ಸದ್ಭಾವನೆ ಮತ್ತು ಜೀವನಕ್ಕಿಂತ ದೊಡ್ಡ ಮೌಲ್ಯಗಳನ್ನು ಉತ್ತೇಜಿಸುವ ಮೂಲಕ ಸಮಾಜಕ್ಕೆ ಕೊಡುಗೆ ನೀಡಲು ಒಂದು ಅವಕಾಶವಾಗಿದೆ.

UNESCO ನಿಂದ ಬೆಂಬಲಿತವಾದ ಅಂತರರಾಷ್ಟ್ರೀಯ ಪುರುಷರ ದಿನವನ್ನು, ಪುರುಷರ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು, ಲಿಂಗ ಸಂಬಂಧಗಳನ್ನು ಸುಧಾರಿಸಲು ಮತ್ತು ಲಿಂಗ ಸಮಾನತೆಯನ್ನು ಉತ್ತೇಜಿಸಲು ವಿಶ್ವಾದ್ಯಂತ ಆಚರಿಸಲಾಗುತ್ತದೆ.

ಅಂತಾರಾಷ್ಟ್ರೀಯ ಪುರುಷರ ದಿನದ ಆರಂಭ

ಥಾಮಸ್ ಓಸ್ಟರ್ ಅವರು ಫೆಬ್ರವರಿ 7, 1992 ರಂದು ಅಂತರರಾಷ್ಟ್ರೀಯ ಪುರುಷರ ದಿನದ ಯೋಜನೆಯನ್ನು ಉದ್ಘಾಟಿಸಿದರು. ಈ ಯೋಜನೆಯನ್ನು ಒಂದು ವರ್ಷದ ಹಿಂದೆ ಕಲ್ಪಿಸಲಾಗಿತ್ತು. ನಂತರ ಇದನ್ನು ಟ್ರಿನಿಡಾಡ್ ಮತ್ತು ಟೊಬಾಗೋದಲ್ಲಿ 1999 ರಲ್ಲಿ ಅಲ್ಲಿನ ವಿಶ್ವವಿದ್ಯಾಲಯದ ಇತಿಹಾಸ ಉಪನ್ಯಾಸಕ ಡಾ ಜೆರೋಮ್ ಟೀಲುಕ್‌ಸಿಂಗ್ ಅವರು ಪುನರಾರಂಭಿಸಿದರು. ನಂತರ 2009 ರಲ್ಲಿ, ಅಂತಾರಾಷ್ಟ್ರೀಯ ಪುರುಷರ ದಿನದ ಆರು ಸ್ತಂಭಗಳನ್ನು ಹೊಂದಿರುವ ಅಂತಾರಾಷ್ಟ್ರೀಯ ಪುರುಷರ ದಿನದ ವಿಶಾಲ ಉದ್ದೇಶಗಳನ್ನು ಹೊರತರಲಾಯಿತು.

## ಅಂತರರಾಷ್ಟ್ರೀಯ ಪುರುಷರ ದಿನದ ಉದ್ದೇಶಗಳು

ರೋಲ್ ಮಾಡೆಲ್‌ಗಳ ಮೂಲಕ ಸಕಾರಾತ್ಮಕ ಪುರುಷ ಕೊಡುಗೆಗಳನ್ನು ಉತ್ತೇಜಿಸುವುದು, ಪುರುಷ ಪ್ರಸಿದ್ಧ ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗದೇ ಸಮಾಜದ ಎಲ್ಲಾ ವರ್ಗದ ಪುರುಷರು ವಾರ್ಷಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೋರುವುದು, ಸಮಾಜ, ಸಮುದಾಯ, ಕುಟುಂಬ, ಮದುವೆ, ಮಕ್ಕಳ ಆರೈಕೆ ಮತ್ತು ಪರಿಸರಕ್ಕೆ ಪುರುಷರ ಸಕಾರಾತ್ಮಕ ಕೊಡುಗೆಗಳನ್ನು ಸಂವಹನ ಮಾಡುವುದು, ಪುರುಷರ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಒತ್ತು ನೀಡುವುದು, ನಮ್ಮ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಪುರುಷರ ವಿರುದ್ಧ ತಾರತಮ್ಯವನ್ನು ಗುರುತಿಸಲು ಸಮಾನ ಲಿಂಗ ಸಂಬಂಧಗಳನ್ನು ಕೇಂದ್ರೀಕರಿಸಲು ಹೋರಾಡುವುದು, ಸುರಕ್ಷಿತ, ಉತ್ತಮ ನಾಳೆಯನ್ನು ರಚಿಸಲು ಪಣತೊಡುವುದು. ॐ


**ಸಂಪ್ರೀತಿ ಸಮೃದ್ಧಿ** ಮಾಸ ಪತ್ರಿಕೆ

#66, ಸಂಪ್ರೀತಿ – ಸದನ, ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ, ಮಾಗಡಿ ಟೌನ್, ರಾಮನಗರ ಜಿಲ್ಲೆ – 562 120

ದೂರವಾಣಿ : 8971608213. ಇ–ಮೇಲ್ : sampreethisamruddhi@gmail.com

**ಪತ್ರಿಕೆಯ ಚಂದಾವಿವರ**

10 ವರ್ಷಕ್ಕೆ ರೂ. 2000/– (ಎರಡು ಸಾವಿರ ರೂಗಳು),
05 ವರ್ಷಕ್ಕೆ ರೂ. 1000/– (ಒಂದು ಸಾವಿರ ರೂಗಳು)
02 ವರ್ಷಕ್ಕೆ ರೂ. 500/– (ಐದು ನೂರು ರೂಗಳು)

ಚಂದಾ ಹಣವನ್ನು ಚೆಕ್ ಮೂಲಕ : Publisher Sampreethi Samruddhi monthly magazine,
ಅಥವಾ ಗೂಗಲ್ ಪೇ ಸಂಖ್ಯೆ : 98455 65696 ಮೂಲಕ ಸಂದಾಯ ಮಾಡಬಹುದು.
ಹೆಚ್ಚಿನ ವಿವರಗಳಿಗೆ ಈ ಸಂಖ್ಯೆಯನ್ನು ಸಂಪರ್ಕಿಸಿ : 8971608213


# ಒಳ್ಳೆಯ ಸ್ನೇಹಿತ

ಇಬ್ಬರು ಆತ್ಮೀಯ ಸ್ನೇಹಿತರಿದ್ದರು. ಒಮ್ಮೆ ದೂರದ ಊರಿಗೆ ಹೋಗುವಾಗ ಇಬ್ಬರ ಮಧ್ಯೆ ಸಣ್ಣ ಕಲಹ ಪ್ರಾರಂಭವಾಯಿತು. ಮಾತಿನ ಭರದಲ್ಲಿ ಒಬ್ಬ ಸ್ನೇಹಿತ ಅನಿರೀಕ್ಷಿತವಾಗಿ ಮತ್ತೊಬ್ಬನ ಮೇಲೆ ಕೈಮಾಡಿದ. ಹೊಡೆಸಿಕೊಂಡವ, ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ. ಮೌನವಾಗಿ ಸಹಿಸಿಕೊಂಡು ಸ್ನೇಹಿತನನ್ನು ಕ್ಷಮಿಸಿದ. ಅಲ್ಲೇ ಒಂದೆಡೆ ಇದ್ದ ಮರಳು ಗುಡ್ಡೆಯಲ್ಲಿ ತನ್ನ ಬೆರಳುಗಳಿಂದ 'ಇವತ್ತು ನನ್ನ ಆತ್ಮೀಯ ಸ್ನೇಹಿತ ನನ್ನ ಮೇಲೆ ಕೈ ಮಾಡಿದ' ಎಂದು ಬರೆದ. ಹೊಡೆದಿದ್ದ ಮಿತ್ರ ಅದನ್ನು ಓದಿದ. ಅವನ ಕೋಪ ಇಳಿದು, ಅವನಿಗೆ ತನ್ನ ತಪ್ಪಿನ ಅರಿವಾಯಿತು. ಮಿತ್ರನಲ್ಲಿ ಕ್ಷಮೆಯಾಚಿಸಿದ.

ಕೆಲಸಮಯದ ನಂತರ ಇಬ್ಬರೂ ನದೀ ತೀರಕ್ಕೆ ಬಂದರು. ನದಿಯಲ್ಲಿ ಸ್ನಾನ ಮಾಡುವ ಆಸೆಯಿಂದ ನೀರಿಗಿಳಿದರು. ಏಟು ತಿಂದ ಮಿತ್ರ ಇಳಿದ ಜಾಗದಲ್ಲಿ ಹೆಚ್ಚು ಆಳ ಇದ್ದುದರಿಂದ ಆಯತಪ್ಪಿ ಜಾರಿಬಿದ್ದು ಅವನು ಮುಳುಗತೊಡಗಿದ. ಸಹಾಯಕ್ಕಾಗಿ ಕೂಗತೊಡಗಿದನು. ಅವನ ಕೂಗು ಕೇಳಿದ ತಕ್ಷಣವೇ ಏಟು ಕೊಟ್ಟ ಮಿತ್ರ ಅವನ ಸಹಾಯಕ್ಕೆ ಧಾವಿಸಿ ಆತನನ್ನು ರಕ್ಷಿಸಿದನು. ತನ್ನನ್ನು ಬದುಕಿಸಿದ ಮಿತ್ರನಿಗೆ ಧನ್ಯವಾದ ಅರ್ಪಿಸಿದ ಗೆಳೆಯ ಅಲ್ಲಿಯೇ ಇದ್ದ ಕಲ್ಲೊಂದರ ಮೇಲೆ 'ನನ್ನ ಆಪ್ತಮಿತ್ರನಿಂದಾಗಿ ಇಂದು ನನಗೆ ಪುನರ್ಜನ್ಮವಾಯಿತು' ಎಂದು ಕಷ್ಟಪಟ್ಟು ಕೆತ್ತಿ ಬರೆದ.

ಸಹಾಯ ಮಾಡಿದ ಮಿತ್ರನಿಗೆ ಸೋಜಿಗವಾಯಿತು. ತಡೆಯಲಾರದೆ ಕೇಳಿದ, "ಇದೇನು? ಆಗ ನಾನು ಹೊಡೆದಾಗ, ಹೊಡೆದಿದ್ದೇನೆ ಎಂದು ಮರಳಿನಲ್ಲಿ ಬರೆದೆ. ಈಗ ಬದುಕಿಸಿದ್ದಾನೆ ಎಂದು ಕಲ್ಲಿನ ಮೇಲೆ ಬರೆದಿದ್ದೀಯಾ? ಕಲ್ಲಿನಲ್ಲಿ ಮತ್ತು ಮರಳಿನಲ್ಲಿ ಬರೆದಿರುವುದು ಏನು ವಿಶೇಷ?" ಎಂದು ಕೇಳಿದನು. ಆಗ ಬದುಕುಳಿದ ಮಿತ್ರನು, "ಗೆಳೆಯಾ ನಮಗೆ ಯಾರಾದರೂ ನೋಯಿಸಿದರೆ ಅದನ್ನು ಮರಳಿನಲ್ಲಿ ಬರೆಯಬೇಕು. ನೋವನ್ನು ಮರಳಿನಲ್ಲಿ ಬರೆದರೆ, ಯಾವತ್ತೋ ಕ್ಷಮೆ ಎಂಬ ಗಾಳಿ ಬೀಸಿ ಆ ಕಹಿ ನೆನಪನ್ನು ಅಳಿಸಿ ಹಾಕುತ್ತದೆ. ಇನ್ನು ಯಾರಾದರೂ ನಮಗೆ ಉಪಕಾರ ಮಾಡಿದರೆ, ಕಲ್ಲಿನಲ್ಲಿ ಬರೆದಾಗ ಅದು ನೆನಪಿನಲ್ಲಿ ಗಟ್ಟಿಯಾಗಿ ನಿಲ್ಲುತ್ತದೆ" ಎಂದು ಹೇಳಿದನು. ಈ ಮೂಲಕ ನಿಜವಾದ ಸ್ನೇಹದ ಅರ್ಥ ತಿಳಿಸಿದನು.

ನಿಜ! ನೋವನ್ನು ಮರೆಯಬೇಕು, ಉಪಕಾರದ ಸ್ಮರಣೆಯಿರಬೇಕು. ಇದೇ ನಿಜವಾದ ಸ್ನೇಹದಲ್ಲಿ ಇರಬೇಕಾದ ಒಳ್ಳೆಯ ಗುಣ.

ॐ

# ಭಾರತೀಯತ್ವಕ್ಕೆ ಕನ್ನಡತ್ವ ಸವಾಲಲ್ಲ

✍ ಡಾ. ರೋಹಿಣಾಕ್ಷ ಶಿರ್ಲಾಲು
ಸಹಾಯಕ ಪ್ರಾಧ್ಯಾಪಕ,
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ,ಕಲಬುರ್ಗಿ

ಕುವೆಂಪು ಅವರ ಸಾಹಿತ್ಯದಲ್ಲಿ ಕರ್ನಾಟಕ ಮತ್ತು ಭಾರತದ ಕಲ್ಪನೆಗಳಲ್ಲಿ ಕಾಣುವ ಐಕ್ಯದ ಭಾವ ಬಹು ವಿಶಿಷ್ಟವಾದುದು. ಅವರಿಗೆ ಕರ್ನಾಟಕವಾಗಲೀ, ಭಾರತವೇ ಆಗಲೀ ಬರಿಯ ಮಣ್ಣಾಗುವುದಿಲ್ಲ. ಕೇವಲ ರಾಜಕೀಯ ಒಕ್ಕೂಟವಾಗುವುದಿಲ್ಲ. ಬದಲಾಗಿ ಅವುಗಳೊಂದು ಸಾಂಸ್ಕೃತಿಕ ಪ್ರತಿಬಿಂಬವಾಗುತ್ತದೆ. ಭೌಗೋಳಿಕ ಕರ್ನಾಟಕ, ಭೌಗೋಳಿಕ ಭಾರತದ ಕಲ್ಪನೆಗಿಂತಲೂ ಸಾಂಸ್ಕೃತಿಕ ಕರ್ನಾಟಕ, ಸಾಂಸ್ಕೃತಿಕ ಭಾರತವೇ ಪ್ರಧಾನವಾಗಿ ಪ್ರಕಟವಾಗುತ್ತದೆ. ಅವರೇ ಹೇಳುವಂತೆ "ಅಖಿಲ ಭಾರತೀಯವಾದ ಸಮಗ್ರತೆ, ಐಕ್ಯತೆಗಳು ರಾಜಕೀಯವಾಗಿ ಅರ್ವಾಚೀನವಾದುದಾದರೂ ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರಪ್ರಾಚೀನವಾದವುಗಳಾಗಿವೆ. ವೇದೋಪನಿಷತ್ ದರ್ಶನಾದಿಗಳಿಂದ ಪರಿಪುಷ್ಟಗೊಂಡ ಆ ಐಕ್ಯತೆ ಅತ್ಯಂತ ಛಿದ್ರವಿಚ್ಛಿದ್ರಕವಾದ ರಾಜಕೀಯ ಪರಿಸ್ಥಿತಿಯಲ್ಲಿಯೂ ಒಂದಿನಿತೂ ಚ್ಯುತಿಗೊಳ್ಳದ ರೀತಿಯಲ್ಲಿ ರಕ್ಷಿತವಾಗಿತ್ತು". ಅಂದರೆ, ಈ ಬಗೆಯ ಐಕ್ಯತೆಯು ಭಾರತೀಯ ಪರಂಪರೆಯ ಮೂಲ ಗುಣ. ಅದು ಯಾವುದೇ ರಾಜಕೀಯ ಆಡಳಿತದ ಉದ್ದೇಶಕ್ಕಾಗಿ ರೂಪುಗೊಳಿಸಿದ್ದಲ್ಲ. ಅಥವಾ ರಾಜಕೀಯ ಆಳ್ವಿಕೆಯು ವ್ಯತ್ಯಾಸವಾದಾಗಲೂ ಈ ಐಕ್ಯತೆಯು ದುರ್ಬಲಗೊಳ್ಳಲಿಲ್ಲ.

ಕುವೆಂಪು ತನ್ನನ್ನು ತಾನು ಕನ್ನಡಿಗ ಮತ್ತು ಭಾರತೀಯ ಎನ್ನುವಾಗ ಯಾವ ದ್ವಂದ್ವಕ್ಕೂ ಅವಕಾಶವಿಲ್ಲದಂತೆ ಗುರುತಿಸಿಕೊಂಡಿದ್ದರು. ಅವರು ಜ್ಞಾನಪೀಠ ಪ್ರಶಸ್ತಿಯನ್ನು ಸ್ವೀಕರಿಸಿದ ಸಮಾರಂಭದಲ್ಲಿ ಮಾಡಿದ ಉಪನ್ಯಾಸದಲ್ಲಿ ಭಾರತೀಯ ಭಾಷೆ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಬಹುಜಿಹ್ವೆಯಾಗಿ ಗುರುತಿಸುತ್ತಾ, ಅವೆಲ್ಲವೂ ಸೇರಿ ಬೆಳಗಿದ ಆರತಿ ಐಕ್ಯತೆಯದ್ದು ಎನ್ನುತ್ತಾರೆ. "ಕೊಳಲಿಗೆ ಅನೇಕ ಕಣ್ಣುಗಳಿರುವಂತೆ ಭಾರತಿಗೆ ಬಹು ಜಿಹ್ವೆಗಳಿವೆ. ಪೀಪಿ ಊದುವ ಹುಡುಗನಿಗೆ ಕೊಳಲಿಗೆ ಅನೇಕ ರಂಧ್ರಗಳಿರುವುದು ತೊಂದರೆಯ ವಿಷಯವಾಗುತ್ತದೆ; ಆದರೆ ವೇಣುವಾದನ ನಿಪುಣನಿಗೆ ಆ ರಂಧ್ರಗಳ ಅನೇಕತೆಯೇ ಸಂಗೀತದ ಸ್ವರಮೇಳ ಮಾದುರ್ಯಕ್ಕೆ ಅವಶ್ಯ ಸಾಧನವಾಗುತ್ತದೆ" ಎನ್ನುತ್ತಾ ಭಾರತೀಯ ಭಾಷೆಗಳೆಲ್ಲ ಸೇರಿ ಐಕ್ಯತೆಯ ಆರತಿಯನ್ನೆತ್ತಿ ಭರತಮಾತೆಗೆ ಪೂಜೆ ಸಲ್ಲಿಸುತ್ತಿವೆ ಎಂದು ಸಂಭ್ರಮಿಸುತ್ತಾರೆ. ತನ್ನನ್ನು ತಾನು "ನಾನು ರಾಜ್ಯ ದೃಷ್ಟಿಯಿಂದ ಕರ್ನಾಟಕದವನು; ಭಾಷಾ ದೃಷ್ಟಿಯಿಂದ ಕನ್ನಡಿಗನು; ಆದರೆ ಸಂಸ್ಕೃತಿಯ ದೃಷ್ಟಿಯಿಂದ ಮತ್ತು ರಾಷ್ಟ್ರದ ದೃಷ್ಟಿಯಿಂದ ಭಾರತೀಯನು. ತನ್ನ ಕರ್ನಾಟಕತ್ವ ಭಾರತೀಯತ್ವಕ್ಕೆ ಎಂದಿಗೂ ಎದುರು ನಿಲ್ಲುವುದಿಲ್ಲ. ಕರ್ನಾಟಕತ್ವ ಭಾರತೀಯತ್ವಕ್ಕೆ ಎಂದೆಂದಿಗೂ ಅವಿರೋಧಿಯಾಗಿ ಸೇವೆ ಸಲ್ಲಿಸುವುದರಿಂದಲೇ ತನ್ನ ಅಸ್ತಿತ್ವವನ್ನು ರಕ್ಷಿಸಿಕೊಳ್ಳುತ್ತದೆ. ಭಾರತಿ ತಾಯಿ; ಕರ್ನಾಟಕ ಮಗಳು. ಭಾರತಕ್ಕೆ ಧಕ್ಕೆ ಒದಗಿದರೆ ಕರ್ನಾಟಕ ಉಳಿಯುವುದಿಲ್ಲ; ಮಗಳು ಕರ್ನಾಟಕಕ್ಕೆ ಕೇಡಾದರೆ ತಾಯಿ ಭಾರತಮಾತೆ ಸಹಿಸುವುದಿಲ್ಲ. ಪರಸ್ಪರ ಕ್ಷೇಮ ರಕ್ಷಣೆಯಿಂದಲೇ ಸರ್ವರ ಕ್ಷೇಮವೂ ರಕ್ಷಿತವಾಗುತ್ತದೆ" ಎನ್ನುತ್ತಾರೆ.

ಕರ್ನಾಟಕತ್ವ – ಭಾರತೀಯತ್ವಗಳು ಪರಸ್ಪರ ಒಂದಕ್ಕೊಂದು ವಿರುದ್ಧವಲ್ಲದ ಕಲ್ಪನೆ. ಜೈ ಭಾರತ ಜನನಿಯ ತನುಜಾತೆ ಎಂಬ ತಾಯಿ–ಮಗಳು ಎನ್ನುವ ಕಲ್ಪನೆಯೇ ವಿಶ್ವಪ್ರಜ್ಞೆಯ ದಾರ್ಶನಿಕತೆಯಾಗುತ್ತದೆ. 'ತನು' 'ಜಾತೆ' ಎಂಬ ಪದಗಳ ಪೂರ್ಣಾರ್ಥವನ್ನು ಗ್ರಹಿಸಬೇಕು ಎಂದೇ ಕುವೆಂಪು ಹೇಳಿದ್ದರು. "ಪ್ರತ್ಯೇಕತೆಗಾಗಲೀ, ವಿರೋಧಕ್ಕಾಗಲೀ ಸ್ವಲ್ಪವೂ ಅವಕಾಶ ಇರಬಾರದು. ಭರತಖಂಡ ಮರದ ಬುಡ; ಪ್ರಾಂತಗಳೇ ಅದರ ಕೊಂಬೆಗಳು. ಬುಡ ಕಡಿದ ಮೇಲೆ ಕೊಂಬೆಗಳು ಅಲ್ಲೇ ಇರುತ್ತವೆಯೇ? ನಾವು ಭಾರತೀಯರಾದುದರಿಂದ ಕನ್ನಡಿಗರಾಗಿದ್ದೇವೆ; ಭಾರತೀಯರಲ್ಲದವರು ಕನ್ನಡಿಗರೇ ಅಲ್ಲ. ಈ ಭಾವನೆಯನ್ನೆಂದೂ ಮರೆಯಬಾರದು. ಅದು ನಮ್ಮ ಜೀವನದ ಮೂಲ ಮಂತ್ರವಾಗಬೇಕು; ನಮ್ಮೆಲ್ಲ ವ್ಯವಹಾರಗಳ ಸೂತ್ರವಾಗಬೇಕು" ಎನ್ನುವುದು ಕುವೆಂಪು ಅವರ ಮಾತು.

ಒಂದೆಡೆ ಕನ್ನಡದ ಅಭಿಮಾನ, ಕನ್ನಡ ನಾಡಿನ ಬಗೆಗಿನ ಅಭಿಮಾನವನ್ನು ಉತ್ಕಟವಾಗಿ ವ್ಯಕ್ತಪಡಿಸುವ ಕವಿ ಅದೇ ಉತ್ಕಟತೆಯನ್ನು ಭಾರತೀಯ ರಾಷ್ಟ್ರೀಯತೆಯ ಕುರಿತೂ ವ್ಯಕ್ತಪಡಿಸುತ್ತಾರೆ. ಅವುಗಳ ನಡುವೆ ಯಾವುದೇ ಸಂಘರ್ಷವಿಲ್ಲ. ಕನ್ನಡ ಮತ್ತು ಭಾರತ ಇವುಗಳು ಪರಸ್ಪರ ಒಂದಾಗಿಯೇ ಕಾಣಿಸಿಕೊಳ್ಳುತ್ತದೆ. ಸ್ಥಳೀಯತೆ ರಾಷ್ಟ್ರಕ್ಕೆ ವಿರೋಧಿಯಲ್ಲದ, ಆ ಮೂಲಕ ರಾಷ್ಟ್ರ ವಿಶ್ವಕ್ಕೆ ವಿರುದ್ಧವಲ್ಲದ ಒಂದು ಕಲ್ಪನೆ ಅವರ ಸಾಹಿತ್ಯದಲ್ಲಿದೆ. ಕನ್ನಡದ ಮೂಲಕ ಭಾರತವನ್ನೂ, ವಿಶ್ವವನ್ನೂ ನೋಡುವ ಸಾಧ್ಯತೆಯನ್ನು ಕುವೆಂಪು ತೋರಿಸಿಕೊಟ್ಟಿದ್ದಾರೆ. ಕನ್ನಡ ಪ್ರಜ್ಞೆ ಹೇಗೆ ಭಾರತ ಪ್ರಜ್ಞೆಗೆ ವಿರುದ್ಧವಾಗಿರಲಿಲ್ಲವೋ ಹಾಗೆಯೇ ಭಾರತಪ್ರಜ್ಞೆ ವಿಶ್ವಪ್ರಜ್ಞೆಗೆ ವಿರುದ್ಧವಾಗಿರಲಿಲ್ಲ. ಭಾರತಾಂತರ್ಗತ ಕರ್ನಾಟಕ ಪ್ರಜ್ಞೆಯಂತೆ ವಿಶ್ವ ಅಂತರ್ಗತವಾದ ಭಾರತ ಪ್ರಜ್ಞೆಗೆ ಇದು ಅತ್ಯುತ್ತಮ ನಿದರ್ಶನವಾಗುತ್ತದೆ. ಅವರ ಈ ಚಿಂತನೆ ಕನ್ನಡ ನಾಡು ಅದು ಅಖಂಡ ಭಾರತದ ಒಂದು ಭಾಗ ಎಂದು ಭಾವಿಸುವುದು. ಇಲ್ಲಿ ಸಂಬಂಧದ ಸ್ವರೂಪದಲ್ಲಿ ಸಂಘರ್ಷವಿಲ್ಲ, ಹೊಂದಾಣಿಕೆ ಇದೆ.

ಕನ್ನಡ, ಕನ್ನಡನಾಡು ಎರಡೂ ಪ್ರಾಧಾನ್ಯತೆಯನ್ನು ಪಡೆದರೂ ಅದು ಭಾರತವನ್ನು ಬಿಟ್ಟು ಅಲ್ಲ ಎಂಬ ಪ್ರಜ್ಞೆ ಇಲ್ಲಿ ಸದಾ ಎಚ್ಚರವಾಗಿದೆ. ಈ ಬಗೆಯ ಕಲ್ಪನೆ ವೈವಿಧ್ಯತೆಯನ್ನು ಒಪ್ಪಿಕೊಂಡ ಸ್ವರೂಪದ್ದು. ಕರ್ನಾಟಕ ಭಾರತೀಯತೆಯಲ್ಲಿ ಅಂತರ್ಗತಗೊಂಡ 'ಐಕ್ಯ'ವನ್ನು ಪ್ರತಿಪಾದಿಸುತ್ತಾರೆ. ಈ ಐಕ್ಯ ತತ್ವದ ಹಿಂದೆ ಆಳವಾದ ದಾರ್ಶನಿಕತೆಯೊಂದಿದೆ. ವೈಚಾರಿಕ ಸ್ಪಷ್ಟತೆಯೂ ಇದೆ. ಇದು ಕೇವಲ ಭಾವುಕವಾದ ನಿರೂಪಣೆಯಲ್ಲ. ಒಂದರಿಂದ ಇನ್ನೊಂದು ಕಳಚಿಕೊಳ್ಳದ ಮಾದರಿಯ ಬೆಸುಗೆಯಾಗಿದೆ. ಕುವೆಂಪು ಪ್ರತಿಪಾದಿಸಿದ ಕರ್ನಾಟಕ ಪ್ರಜ್ಞೆ ಭಾರತಪ್ರಜ್ಞೆಯೊಳಗೆ ಸೇರಿಕೊಂಡದ್ದೇ ಆಗಿದೆ. ಅಲ್ಲಿನ ವೈರುಧ್ಯಗಳು ಹೆಚ್ಚಲ್ಲ. ಸಾಮ್ಯತೆಗಳ ಕಡೆಗೇ ಕವಿಯ ಒಲವು. ಕನ್ನಡ ಪ್ರಜ್ಞೆಯು ಭಾರತ ಪ್ರಜ್ಞೆಯಿಂದ ಬೇರೆಯಾಗುವುದಿಲ್ಲ. ಅವುಗಳ ನಡುವೆ ಒಂದು ಬಗೆಯ ಐಕ್ಯ ಭಾವ ಇದೆ. ಅದನ್ನು ಕುವೆಂಪು ಅವರೇ ಹೇಳುವಂತೆ, "ಈ ಕರ್ನಾಟಕ ಭೌಗೋಳಿಕವಾಗಿ ಭಾರತದ ಇತರ ಪ್ರದೇಶಗಳಿಂದ ಭಿನ್ನವಾಗಿ ಕಂಡರೂ ಸಾಂಸ್ಕೃತಿಕವಾಗಿ ಅಷ್ಟೇನೂ ಭಿನ್ನವಲ್ಲ. ಅಧ್ಯಾತ್ಮಿಕವಾಗಿ ನೋಡಿದರಂತೂ ಸಂಪೂರ್ಣವಾಗಿ ಅಭಿನ್ನ. ಉಡುಗೆ-ತೊಡುಗೆ, ಉಣಿಸು, ನಡೆ-ನುಡಿಗಳಲ್ಲಿ ಪ್ರಾಂತದಿಂದ ಪ್ರಾಂತಕ್ಕೆ ಸ್ವಲ್ಪ ವ್ಯತ್ಯಾಸ ತೋರಿದರೂ ನಮ್ಮೆಲ್ಲರ ಕನಸು ಒಂದೇ, ನಮ್ಮೆಲ್ಲರ ಮನಸ್ಸು ಒಂದೇ, ನಮ್ಮೆಲ್ಲರ ಗುರಿಯೂ ಒಂದೇ. ನಾವೆಲ್ಲ ಭಾರತೀಯರು" ಎನ್ನುತ್ತಾರೆ. ಇಲ್ಲಿ ಒಡಕಿಲ್ಲ. ಕರ್ನಾಟಕ ಆಂಧ್ರಾದಿ ಪ್ರದೇಶಗಳೆಲ್ಲ ಆ ಭಾರತಿಯ ಅಂಗರೂಪಗಳು, ಅಂಶರೂಪಗಳೆಂದೇ ಗುರುತಿಸುತ್ತಾರೆ. ಯಾವ ಸ್ವರೂಪದಲ್ಲೂ ಒಡಕಿಲ್ಲದ ಐಕ್ಯ ಭಾವ ಕವಿಯಲ್ಲಿತ್ತು. ಬದುಕಿನ ವಿವಿಧ ನೆಲೆಗಳಲ್ಲಿ ಕಾಣುವ ಸಂಗತಿಗಳು ಕೂಡ ಹೇಗೆ ಐಕ್ಯ ಕಾರಣವೆಂದು ಅವರು ಹೇಳುತ್ತಾರೆ. "ಈ ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆಯಿಂದ ಅಖಿಲ ಭಾರತೀಯ ಐಕ್ಯತೆಗೆ ಒಂದಿನಿತೂ ವ್ಯಾಘಾತ ಒದಗುವುದಿಲ್ಲ ಎಂಬುದು ವಿಧಿತವಾಗುತ್ತದೆ. ಏಕೆಂದರೆ ಭಾಷೆಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಿದ್ದರೂ ಬೇರೆ ಬೇರೆಯ ಪ್ರದೇಶ ಮತ್ತು ರಾಜ್ಯಗಳ ಕಲಾ ಮತ್ತು ಸಾಹಿತ್ಯಾದಿಗಳ ವಸ್ತು ಮತ್ತು ದೃಷ್ಟಿಗಳಲ್ಲಿ ಅಖಿಲ ಭಾರತೀಯವಾದ ಏಕೈಕ ಮೂಲ ಸಂಸ್ಕೃತಿಯೇ ಶೇಕಡಾ ತೊಂಬತ್ತೈದಕ್ಕಿಂತಲೂ ಹೆಚ್ಚಾಗಿ ಸರ್ವಸಾಧಾರಣವಾಗಿದೆ. ಆ ಮೂಲ ಸಂಸ್ಕೃತಿಯ ವಜ್ರ ಬೆಸುಗೆ ನಮ್ಮ ಒಗ್ಗಟ್ಟನ್ನು ಎಂದೆಂದಿಗೂ ಒಡೆಯಲು ಬಿಡುವುದಿಲ್ಲ. ಅಷ್ಟೇ ಅಲ್ಲ, ನಮಗೀಗ ಒದಗಿರುವ ರಾಜಕೀಯ ಅಖಂಡತೆಗೂ ಐಕ್ಯತೆಗೂ ಮೂಲ ಕಾರಣವೂ ಆ ಅಖಿಲ ಭಾರತೀಯವಾಗಿರುವ ಸಂಸ್ಕೃತಿಯ ಮೂಲದಲ್ಲಿಯೇ ಇದೆ" ಎನ್ನುತ್ತಾರೆ. ಕನ್ನಡದ ಪರವಾದ ಚಿಂತನೆಯನ್ನು ಕುವೆಂಪು ಪ್ರಾದೇಶಿಕತೆಯಾಗಿ ಕಾಣುವುದಿಲ್ಲ, ಬದಲಾಗಿ ಅದು ರಾಷ್ಟ್ರೀಯತೆಯ ಚಿಂತನೆಯೇ ಆಗುತ್ತದೆ. ಕನ್ನಡ ಭಾಷೆ, ಸಂಸ್ಕೃತಿಯನ್ನು ಕುರಿತು ಚಿಂತಿಸುವುದೆಂದರೆ ಅದು ವಿಶಾಲ ನೆಲೆಯಲ್ಲಿ ಭಾರತೀಯವಾದುದರ ಚಿಂತನೆಯೇ ಆಗಿರುತ್ತದೆ. ಹಾಗಾಗಿ ಕನ್ನಡ ಪ್ರಜ್ಞೆ ಭಾರತ ಪ್ರಜ್ಞೆಯ ಪ್ರತೀಕವೇ ಹೊರತು ಪರಸ್ಪರ ವಿರುದ್ಧ ಅಲ್ಲ. ಕರ್ನಾಟಕತ್ವ, ಮಹಾರಾಷ್ಟ್ರತ್ವ, ಆಂಧ್ರತ್ವಗಳನ್ನು ಭಾರತೀಯತ್ವ ಬೆಸೆದಿರುವುದರಿಂದ ಬೇರೆ ಬೇರೆಯಾಗಿ ಒಡೆಯಲು ಬಿಡುವುದಿಲ್ಲ ಎನ್ನುತ್ತಾರೆ. ಹೀಗಾಗಿ ಕನ್ನಡ ಪರವಾದ ಚಿಂತನೆಯೊಳಗೆ ಭಾರತೀಯತೆಯ ಧ್ವನಿ ಇದೆ. ಅವರು ಬಹುತ್ವದ ಕಲ್ಪನೆಯನ್ನು ಒಪ್ಪಿಕೊಂಡೆ ಕರ್ನಾಟಕದ ಹಾಗೂ ಭಾರತದ ಕಲ್ಪನೆಯನ್ನು ಮುಂದಿಡುತ್ತಾರೆ. ॐ

# ಚಂದ್ರಶೇಖರ ವೆಂಕಟರಾಮನ್



ಸಿ.ವಿ ರಾಮನ್ (ಚಂದ್ರಶೇಖರ ವೆಂಕಟ ರಾಮನ್) ಇವರು ನವೆಂಬರ್ 7, 1888 ರಲ್ಲಿ ತಮಿಳುನಾಡುನ ತಿರುಚಿನಾಪಳ್ಳಿ ಜಿಲ್ಲೆಯ 'ತಿರುವನೈಕಾವಲ್' ಎಂಬಲ್ಲಿ ಜನಿಸಿದರು. ಅವರ ತಂದೆ, ಚಂದ್ರಶೇಖರ್ ಕಾಲೇಜಿನಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ತಾಯಿಯವರ ಹೆಸರು ಪಾರ್ವತಿ ಅಮ್ಮಾಳ್. ಇವರ ಕುಟುಂಬ ದೊಡ್ಡದಾಗಿದ್ದರಿಂದ ಬಡತನದ ಸ್ಥಿತಿಯಲ್ಲಿದ್ದರು. ರಾಮನ್‌ಗೆ ಸಾಕಷ್ಟು ಶೈಕ್ಷಣಿಕ ಸೌಕರ್ಯಗಳನ್ನು ಒದಗಿಸುವ ಅನುಕೂಲ ಅವರಿಗಿರಲಿಲ್ಲ. ಇವರ ಎಳೆತನದ ವಿದ್ಯಾಭ್ಯಾಸ ವಿಶಾಖಪಟ್ಟಣದಲ್ಲಿ ಆಯಿತು. ಮೇಧಾವಿಯಾಗಿದ್ದ ರಾಮನ್ ವಿದ್ಯಾಭ್ಯಾಸ ಹಾಗೂ ವೃತ್ತಿಜೀವನದಲ್ಲಿ ಮಾಡಿದ ಸಾಧನೆ ಅಪಾರವಾಗಿತ್ತು.

1900 ರಲ್ಲಿ ತಮ್ಮ 12 ನೆ ವಯಸ್ಸಿನಲ್ಲೇ ಮೆಟ್ರಿಕ್ಯುಲೆಶನ್ ಮುಗಿಸಿದರು, 1904 ರಲ್ಲಿ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎ. ಪದವಿ, 1907 ರಲ್ಲಿ ಭೌತವಿಜ್ಞಾನದಲ್ಲಿ ಎಂ. ಎ. ಪದವಿ ಮುಗಿಸಿ ಭಾರತೀಯ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕಲ್ಕತ್ತೆಯಲ್ಲಿ, ಭಾರತ ಸರ್ಕಾರದ ವಿತ್ತ ವಿಭಾಗದಲ್ಲಿ ಡೆಪ್ಯುಟಿ ಅಕೌಂಟೆಂಟ್ ಜನರಲ್ ಆಗಿ ವೃತ್ತಿ–ಜೀವನ ಆರಂಭಿಸಿದರು. ಇವರು ವಿದ್ಯಾರ್ಥಿಯಾಗಿದ್ದಾಗ ವೈಜ್ಞಾನಿಕ ಪ್ರಯೋಗಗಳಲ್ಲಿ ತೋರುತ್ತಿದ್ದ ಆಸಕ್ತಿಯನ್ನು ಅವರು ವೃತ್ತಿನಿರತರಾಗಿದ್ದಾಗಿನಿಂದಲೂ ಮುಂದುವರಿಸಿದರು. ಇವರನ್ನು ಸರ್ಕಾರಿ ಕೆಲಸದ ನಿಮಿತ್ತ ಬರ್ಮದ ರಂಗೂನಿಗೆ ಕಳುಹಿಸಿಕೊಡಲಾಯಿತು. ನಾಗಪುರದಲ್ಲೂ ಕೆಲಕಾಲ ಸೇವೆ ಸಲ್ಲಿಸಿದರು. ಆದರೆ ಇವರ ಒಲವೆಲ್ಲ ವಿಜ್ಞಾನದ ಕಡೆಗೇ ಇದ್ದುದರಿಂದ ಕಲ್ಕತ್ತದಲ್ಲಿನ ದಿ ಇಂಡಿಯನ್ ಅಸೋಸಿಯೇಷನ್ ಫಾರ್ ದ ಕಲ್ಟಿವೇಶನ್ ಆಫ್ ಸೈನ್ಸ್ ಎಂಬ ಖಾಸಗಿ ವಿಜ್ಞಾನ ಸಂಶೋಧನೆ ಮಂದಿರದಲ್ಲಿ ಸಂಶೋಧನೆಯಲ್ಲಿ ತೊಡಗಿದರು. ಇಲ್ಲಿದ್ದಾಗ ಮೇಲ್ಮೈಕರ್ಷಣ (ಸರ್ಫೇಸ್ ಟೆನ್ಶನ್) ಮತ್ತು ಬೆಳಕಿನ ಸಂಚರಣೆಯನ್ನು (ಪ್ರಾಪಗೇಷನ್ ಆಫ್ ಲೈಟ್) ಕುರಿತಂತೆ ಕೆಲಸ ಮಾಡಿದರು. ಉದ್ಯೋಗ ನಿಮಿತ್ತ ಕಲ್ಕತ್ತದಿಂದ ಹೊರಗಿನ ಊರುಗಳಿಗೆ ಹೋಗಿದ್ದ ರಾಮನ್ ಅವರು 1911 ರಲ್ಲಿ ಪುನಃ ಕಲ್ಕತ್ತೆಗೆ ಮರಳಿದರು.

ಕಲ್ಕತ್ತ ವಿಶ್ವವಿದ್ಯಾಲಯದ ಕುಲಪತಿ ಅಶುತೋಷ ಮುಖರ್ಜಿಯವರ ಆಮಂತ್ರಣದ ಮೇರೆಗೆ 1917 ರಲ್ಲಿ ಇವರು ತಮ್ಮ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ, ಆ ವಿಶ್ವವಿದ್ಯಾಲಯದ ಪಲಿತ್ ಭೌತವಿಜ್ಞಾನ ಪೀಠದ ಪ್ರಾಧ್ಯಾಪಕರಾಗಿ ಸೇರಿದರು. ಇದಕ್ಕೆ ಇವರ ಧರ್ಮಪತ್ನಿ ಲೋಕಸುಂದರಿ ರಾಮನ್ ಅವರ ಪ್ರೋತ್ಸಾಹವೂ ದೊರಕಿತ್ತು. ಸದಾ ಕುತೂಹಲಿ, ಪ್ರಯೋಗಪಟು ಮತ್ತು ಚಿಂತನಶೀಲರಾಗಿದ್ದ ರಾಮನ್ 1917 ರಿಂದ ಮುಂದೆ ಮೂಲಭೂತ ಸಂಶೋಧನೆಗಳನ್ನು ಮಾಡಲು ಉದ್ಯುಕ್ತರಾದರು. ಬೆಳಕಿನ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುವುದು ಇವರ ಆಗಿನ ಆಸಕ್ತ ಕ್ಷೇತ್ರ.

ನಂತರ 1921 ರಲ್ಲಿ ಕಲ್ಕತ್ತ ವಿಶ್ವವಿದ್ಯಾಲಯ ಇವರಿಗೆ ಡಾಕ್ಟೊರೇಟ್ ಪದವಿ ನೀಡಿ ಗೌರವಿಸಿತು, 1924ರಲ್ಲಿ 'ಲಂಡನಿನ ಫೆಲೊ ಆಫ್ ರಾಯಲ್ ಸೊಸೈಟಿ'ಗೆ ರಾಮನ್ ಆಯ್ಕೆಯಾದರು, ಮಾರ್ಚ್ 16 1928 ರಲ್ಲಿ ತಮ್ಮ ಶೋಧನೆ, 'ರಾಮನ್ ಎಫೆಕ್ಟ್'ನ್ನು 'ಬೆಂಗಳೂರಿ'ನಲ್ಲಿ ಬಹಿರಂಗ ಪಡಿಸಿದ ರಾಮನ್, 1930ರಲ್ಲಿ ಅದಕ್ಕಾಗಿ 'ನೋಬೆಲ್ ಪ್ರಶಸ್ತಿ'ಗಳಿಸಿದರು.

## ರಾಮನ್ ಪರಿಣಾಮ

ಈ ತತ್ತ್ವವು ವಿಜ್ಞಾನಕ್ಕೆ ಸರ್ ಸಿ.ವಿ. ರಾಮನ್ ರ ಒಂದು ದೊಡ್ಡ ಕೊಡುಗೆಯಾಗಿದೆ. ಆಕಾಶದ ನೀಲಿ ಬಣ್ಣ ಅವರನ್ನು ಸ್ಥಬ್ಧರನ್ನಾಗಿ ಮಾಡಿತ್ತು. ಅದು ಹೇಗೆ ಸಾಧ್ಯ ಎಂಬ ಪ್ರಶ್ನೆ ರಾಮನ್ ರನ್ನು ಮೊದಲಿನಿಂದಲೂ ಕಾಡುತ್ತಿತ್ತು. ಅದಕ್ಕೆ ಉತ್ತರ ಕಂಡು ಹಿಡಿಯಲು ಪ್ರಯೋಗ ಮಾಡುತ್ತ ಅವರು ಬಹಳ ಸಮಯವನ್ನು ವ್ಯಯಿಸಿದರು. ಸಮುದ್ರದ ಮೇಲೆ ವಿದೇಶ ಪ್ರಯಾಣದಲ್ಲಿದ್ದಾಗ ಕಡಲಿನ ನೀಲಿ ಬಣ್ಣದ ಕಾರಣವನ್ನು ಅರಿಯಲು ಪ್ರಯೋಗ ಮಾಡುತ್ತ ಹಡಗಿನ ತುಂಬ ಅಲೆದಾಡುತ್ತಿದ್ದರು. ಆಕಾಶದ ನೀಲಿ ಬಣ್ಣ ರಾಮನ್ ರ ಕುತೂಹಲ ಕೆರಳಿಸಿ ಪ್ರಯೋಗಕ್ಕೆ ತೊಡಗಿಸಿತು. ಹಾಗೇ ಬಗೆಬಗೆಯ ಹೂಗಳ ಬಣ್ಣದಿಂದಲೂ ಅವರು ಆಶ್ಚರ್ಯಚಕಿತರಾಗುತ್ತಿದ್ದರು. ವಾತಾವರಣದಲ್ಲಿಯ ಧೂಳಿನ ಕಣಗಳು ಬೆಳಕನ್ನು ಭಾಗಶಃ ಚದುರಿಸುವವು. ಹೀಗೆ ಬೆಳಕು ಚದುರಿದಾಗ, ಅದರ ಎಲ್ಲ ಬಣ್ಣಗಳೂ ಚದುರುವುವು. ಹೆಚ್ಚು ಚದುರದ ಕೆಂಪುಬೆಳಕು ದಿಗಂತದ ಸಮೀಪ ಸೂರ್ಯ ಕಾಣುವ ಪ್ರದೇಶದಲ್ಲಿ ಪ್ರಜ್ವಲಿಸುವುದು. ಉಳಿದದ್ದು ಆಕಾಶಕ್ಕೆ ನೀಲಿ ಬಣ್ಣವನ್ನು ನೀಡುವುದು. ಬೆಳಕು ಚದುರುವಾಗ ಶಕ್ತಿಯ ಸ್ವೀಕಾರ ಅಥವಾ ದಾನ ಬೆಳಕಿನ ತರಂಗಾಂತರವನ್ನು ನಿರ್ದಿಷ್ಟವಾಗಿ ಬದಲಾಯಿಸುವ ಸಾಧ್ಯತೆ ಲಕ್ಷದಲ್ಲೊಂದು ಮಾತ್ರ. ಅಂದರೆ ಒಂದು ಲಕ್ಷ ಬೆಳಕಿನ ಕಣಗಳು ಚದುರಿದಾಗ ಒಂದು ಮಾತ್ರ ರಾಮನ್ ಪರಿಣಾಮಕ್ಕೆ ಒಳಗಾಗುವುದು, ಎನ್ನುವ ವಿಚಾರ ಬೆಳಕಿಗೆ ಬಂತು. ಇದನ್ನೇ "ರಾಮನ್ ಪರಿಣಾಮ" ಎಂದು ಕರೆಯಲಾಗುತ್ತದೆ. ಇದು ಅನ್ವಯಿಕ ಉಪಯುಕ್ತತೆಯುಳ್ಳ ತತ್ವ.


ಯಾವುದೇ ಒಂದು ಬಣ್ಣದ ಉದಾಹರಣೆಗೆ ಕೆಂಪು, ನೀಲಿ, ಹಳದಿ ಇತ್ಯಾದಿ ಬೆಳಕಿನ ಕಿರಣದಂಡವನ್ನು ಅಶ್ರಕದ ಮೂಲಕ ಹಾಯಿಸಿ ಬಿಳಿತೆರೆಯ ಮೇಲೆ ಬೀಳಿಸಿದರೆ ಅದರ ರೋಹಿತ ದೊರೆಯುವುದು. ಇದರಲ್ಲಿ ಕೆಲವು ಉಜ್ವಲ ರೇಖೆಗಳು ಎದ್ದುಕಾಣುವುವು. ಇವೆಲ್ಲವೂ ಮೂಲ ಬೆಳಕಿನ ಬಣ್ಣದವೇ ಆಗಿ ತೋರಿದರೂ ಛಾಯೆಗಳಲ್ಲಿ ಸಂಯುಕ್ತವಾಗಿರುತ್ತದೆ ಮತ್ತು ಅಶ್ರಕ ಅದನ್ನು ವಿಭಜಿಸಿದೆ ಎಂದು ತಿಳಿಯುವುದು. ಆ ಒಂದೊಂದು ಘಟಕದ (ಅಂದರೆ ಛಾಯೆಯ) ಅಲೆಯ ಉದ್ದ ಬೇರೆ ಬೇರೆ ಇರುವುದರಿಂದ ಅದು ರೋಹಿತದಲ್ಲಿ ತನಗೇ ವಿಶಿಷ್ಟವಾದ ಸ್ಥಾನವನ್ನು ಪಡೆಯುತ್ತದೆ. ಈಗ ಅದೇ ಬೆಳಕನ್ನು ಮೊದಲು ಪಾರದರ್ಶಕ ಪದಾರ್ಥದ ಮೂಲಕವೂ ಮತ್ತೆ ಅಶ್ರಕದ ಮೂಲಕವೂ ಹರಿಸಿ ಅದರ ರೋಹಿತವನ್ನು ಪಡೆದರೆ ಇದರಲ್ಲಿ ಮೊದಲಿದ್ದ ಗೆರೆಗಳ ಜೊತೆಗೆ ಕೆಲವು ಹೊಸ ಗೆರೆಗಳು ಕಂಡುಬರುವುವು. ಆದ್ದರಿಂದ ಮೂಲ ಬೆಳಕಿನಲ್ಲಿ ಇದ್ದ ವಿವಿಧ ಅಲೆಯುದ್ದದ ರಶ್ಮಿಗಳ ಜೊತೆಗೆ ಹೊಸ ಅಲೆಯುದ್ದವೂ ಸೇರಿಕೊಂಡಿವೆ ಎಂದು ತೀರ್ಮಾನಿಸಬೇಕಾಗುವುದು. ಬೆಳಕಿನ ಹಾದಿಯಲ್ಲಿ ಪಾರದರ್ಶಕ ಪದಾರ್ಥ ಅಡ್ಡಬರುವುದರಿಂದ ಈ ಪರಿಣಾಮ ಕಂಡುಬರುತ್ತದೆ. ಇದೇ ರಾಮನ್ ಪರಿಣಾಮ. ಇದರ ಅಧ್ಯಯನದಿಂದ ಪಾರದರ್ಶಕ ಪದಾರ್ಥದ ಅಣುರಚನೆಯ ಬಗ್ಗೆ ಮಾಹಿತಿ ಪಡೆಯಬಹುದು. ಭೌತವಿಜ್ಞಾನ ಸಂಶೋಧನೆಗಳಲ್ಲಿ ರಾಮನ್ ಪರಿಣಾಮಕ್ಕೆ ಮಹತ್ವದ ಸ್ಥಾನವಿದೆ. ಇದರ ಆವಿಷ್ಕಾರ ಕಲ್ಕತ್ತದಲ್ಲಾದರೂ ಕೂಡ ರಾಮನ್ ಇದನ್ನು ದಿನಾಂಕ 28.02.1928 ರಂದು ಬೆಂಗಳೂರಿನಲ್ಲಿ ಪ್ರಕಟಿಸಲಾಯಿತು.

## ಗೌರವ, ಪ್ರಶಸ್ತಿಗಳು

ಭಾರತ ರತ್ನ, ಲೆನಿನ್ ಶಾಂತಿ ಪ್ರಶಸ್ತಿ, ರಾಯಲ್ ಸೊಸಾಯಿಟಿ ಸದಸ್ಯತ್ವ, ಫೆಲೋ ಆಫ್ ರಾಯಲ್ ಸೊಸೈಟಿ ಸದಸ್ಯತ್ವ, ಸೊಸೈಟಿ ಆಫ್ ರೋಮ್ ಎಂಬ ಸಂಸ್ಥೆಯಿಂದ ಮ್ಯಾಬ್ಯುಟಿ ಪದಕ, ನೈಟ್ ಹುಡ್ ಪ್ರಶಸ್ತಿ, ನೋಬೆಲ್ ಪ್ರಶಸ್ತಿ, ಲಂಡನ್ನಿನ ರಾಯಲ್ ಸೊಸೈಟಿಯಿಂದ ಹ್ಯೂಗ್ಸ್ ಪದಕ, ಮೈಸೂರು ಮಹಾರಾಜರಿಂದ 'ರಾಜ ಸಭಾ ಭೂಷಣ ಗೌರವ', ಅಮೆರಿಕ ಸಂಯುಕ್ತ ಸಂಸ್ಥಾನದ ಫ್ರಾಂಕ್ಲಿನ್ ಪದಕ ಇತ್ಯಾದಿಗಳನ್ನು ಪಡೆದಿರುತ್ತಾರೆ. ॐ

Printed by Arvind, Published Edited and Owned by Dr. D.C. Ramachandra, No.66, Doddasomanahalli, Magadi Tq, Ramanagar Dist. and Printed at Computer World, Near G.T. Mall, Mallige Thota, Magadi Road, Bengaluru - 560 023. **Editor: Dr. C. Nanjundaiah.**





|| Jai Sri Gurudev ||

Sri Adichunchanagiri Shikshana Trust(R)

# ADICHUNCHANAGIRI INSTITUTE OF TECHNOLOGY

Jyothinagar,
Chikkamagaluru - 577 102
"www.aitckm.in"

ESTD: 1980



Graded A by NAAC

Government of Karnataka Super 30

CERTIFICATE OF ACCREDITATION

Training and Placement
22 Batch Highlights

## Our Top Recruiters

NTT, Cognizant, TCS Tata Consultancy Services, Deloitte., wipro, HCL, Mindtree, NTT Data, accenture, Infosys, ZenSar Technologies, SCII

# COURSES OFFERED

## B.E. Courses (Under Graduate)

- Civil Engineering
- Mechanical Engineering
- Electrical and Electronics Engineering
- Electronics and Communication Engineering
- Computer Science and Engineering
- Computer Science and Engineering (Data Science)
- Information Science and Engineering
- Artificial Intelligence & Machine Learning

40+ Campus Placemnt Drives

450+ Job Offers

Minimum Package 3 LPA

Highest Package 11.77 LPA

## Masters Degree Courses (Post Graduate)

- Digital Electronics and Communication Systems (E & C Engg.)
- Structural Engineering (Civil Engg.)
- Computer Science and Engineering (C S & E)
- M B A (Master of Business Administration)

Recognised Research Center Doctoral Programms

- Department of Civil Engineering - Department of Mechanical Engineering
- Department of information science and Engineering
- Department of Electronics and Communication Engineering
- Department of Computer Science and Engineering
- Department of Physics - Department of Chemistry - Department of Mathematics
- Department of Electrical and Electronics Engeeneering

OUR PLACEMENT HIGHLIGHTS

- MINIMUM 500+ JOB OFFERS EVERY YEAR
- 50+ CAMPUS DRIVES EVERY YEAR
- MINIMUM 3.25 LPA TO MAXIMUM 15 LPA PACKAGE OFFERS
- 50 + PLACEMENTS IN FORTUNE 500 COMPANIES
- TRAINING AND PLACEMENT CELL FOR STUDENTS

200+ UNIVERSITY RANKS

B.E
CET CODE-E064, COMEDK CODE -E004

M.Tech
CET CODE - T803

MBA
CET CODE - B109

For more details contact: 08262-220444, +91 94486 65711, 94484 80343, 91411 33697
Dr. Jayadeva C.T., Principal
E-mail: ait_ckm@rediffmail.com

Registered with Registrar of News Papers for India No.KARKAN/2018/76081, **Sampreethi Samruddhi,** November - 2023.
License to post without prepayment. License No.**KA/BG/CNA/119/2022-2024,**
Date of publication: **28.10.2023.** Posted at **Magadi Sub Post Office-562120** on **29th** of every month

|| Jai Sri Gurudev ||

# Adichunchanagiri University

## BGS Institute of Technology

BG Nagara-571448, Nagamangala Taluk, Mandya District, Karnataka-NH-75

# Admissions Open

BGSIT CET Code: E142



### BE Courses:

- Civil Engg.
- Mechanical Engg.
- Computer Science & Engg.
- Information Science & Engg.
- Electronics & Communication Engg.
- Artificial Intelligence & Machine Learning(AI&ML)

### P.G Courses:

- MBA
- Structural Engg.
- Computer Science & Engg.
- Infrastructure Management
- VLSI Design & Embedded Systems

### Ph.D. Programmes

- Civil Engineering
- Mechanical Engg
- Computer Science & Engineering
- Electronics & Communication Engineering

### For Admissions Contact

**Dr. M.B. Anandaraju**
Admission Officer
9886108095

**Dr. B.K. Narendra**
Principal
9880100556

**www.bgsit.ac.in | CET Code: E142**

To,

If undelivered please return to :
The Editor
**Sampreethi Sadan**
Govt. Hospital Parallel Road,
Magadi Town, Magadi - 562120